ಸಂಪುಟ 22 ಸಂಚಿಕೆ 20 ಮೇ 10-16, 1999 ರೂ. 3-00 ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ



ಮೈಸೂರು ಹುಲಿ ಟಿಪ್ಪು

ವೀರಮರಣದ 200 ವರ್ಷಗಳು

ಬಿಜೆಪಿ ಸ್ವಲ್ಪವೂ ಬದಲಾಗಿಲ್ಲ ಬದಲಾಗಿರುವುದು ಹೆಗಡೆ ಮಾತ್ರ





ಆನೇಕಲ್‌ನಲ್ಲಿ ಕೋಮುವಾದಿಗಳ ನಿಜ ಸ್ವರೂಪ ದರ್ಶನ

ಬಿಜೆಪಿ ಬದಲಾಗಿಲ್ಲ, ಬದಲಾಗಿರುವುದು ಹೆಗಡೆ ಮಾತ್ರ

ಅನೇಕ ಗೊಂದಲಗಳ ಗೂಡಾಗಿ, ಭಿನ್ನಮತಗಳಿಂದ ಬಳಲುತ್ತಿದ್ದ ರಾಜ್ಯ ಜನತಾದಳವು ಮುಂದಿನ ದಿನಗಳಲ್ಲಿ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಲು ನಿರ್ಧರಿಸಿದೆ. ಮಾತ್ರವಲ್ಲ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್- ಬಿಜೆಪಿ ಪಕ್ಷಗಳನ್ನೂ ಎದುರಿಸಿ ಹೋರಾಡುವುದಾಗಿ ಘೋಷಿಸಿದೆ. ಇವುಗಳ ಬಗ್ಗೆ ಕಾದು ನೋಡಬೇಕಾದ ಅಗತ್ಯ ಇದೆಯಾದರೂ ದೇಶದ ಒಟ್ಟು ರಾಜಕೀಯ ಸಂದರ್ಭದಲ್ಲಿ ಸ್ವಾಗತಾರ್ಹವಾದ ನಿಲುವುಗಳಿವು.

ದೇಶದಲ್ಲಿ ಕೋಮುವಾದಿ ಬಿಜೆಪಿ ಕೂಟದ ವಿರುದ್ಧ ಹೋರಾಡುತ್ತಿರುವ ಎಡಪಕ್ಷಗಳು ಹಾಗೂ ಇತರೆ ಧರ್ಮನಿರಪೇಕ್ಷಿತ ಪಕ್ಷಗಳ ಮೂರನೆ ರಂಗವನ್ನೂ ದುರ್ಬಲಗೊಳಿಸಲು ಹಲವಾರು ತಂತ್ರ-ಕುತಂತ್ರಗಳೇ ನಡೆದಿವೆ. ಇದರಲ್ಲಿ ಬಿಜೆಪಿ - ಸಂಘ ಪರಿವಾರದಂತಹ, ಆಂತರಿಕ ಪ್ರತಿಗಾಮಿಗಳು ಮಾತ್ರವಲ್ಲ ಸಾಮ್ರಾಜ್ಯಶಾಹಿ ಶಕ್ತಿಗಳ ಕ್ರಿಯಾಶೀಲ ಪಾತ್ರವೂ ಇದೆ. ಬಹುರಾಷ್ಟ್ರೀಯ ಕಂಪನಿಗಳು, ಭಾರತ ಕೈಗಾರಿಕಾ ಒಕ್ಕೂಟದಂತಹ ಉದ್ದಿಮೆದಾರರೂ ಕೈಜೋಡಿಸಿದ್ದಾರೆ.

ಒಂದು ಹಂತದಲ್ಲಿ ರಾಜ್ಯದಲ್ಲಿ ಜೆ.ಹೆಚ್.ಪಟೇಲರು ಅವರ ಬೆಂಬಲಿಗರು ರಾಮಕೃಷ್ಣ ಹೆಗಡೆಯವರ ಜೊತೆಗೆ ಸೇರುವ ಮಾತುಗಳು ಚಾಲನೆಗೆ ಬಂದಿದ್ದವು. ಸ್ವತಃ ಹೆಗಡೆಯವರು ತಾವು, ಪಟೇಲರು, ಜಾರ್ಜ್ ಮೂಲತಃ ಸಮಾಜವಾದಿಗಳೆಂದೂ ಹಿಂದೆ ಜೈಲಿನಲ್ಲಿ ಸಂಘ ಪರಿವಾರದ ನಾಯಕರೊಂದಿಗೆ ಭಿನ್ನಾಭಿಪ್ರಾಯವಿದ್ದೂ, ಸುಮಧುರ ಬಾಂಧವ್ಯ ಬಗ್ಗೆ ಹೇಳಿದ್ದರು. ಹೀಗೆ ಹಳೆ ನೆನಪುಗಳೊಂದಿಗೆ ಹೊಸ ಅಳಲಿನಲ್ಲಿ ಪಟೇಲರನ್ನೂ ಸೆಳೆದು ಬಿಜೆಪಿ - ತುಂಬಾ ಬದಲಾಗಿದೆಯೆಂದೂ ತಿಳಿಸಿದ್ದರು. ಸರ್ಕಾರದಲ್ಲಿ ತಾವು ಸಚಿವರಾಗಿದ್ದೂ,


ಸಂಪಾದಕೀಯ

ಬಾಬಾ ಬುಡನ್‌ಗಿರಿ, ಕ್ರಿಶ್ಚಿಯನ್ ಸೇವಕ ಸ್ಟೇನ್ ಹಾಗೂ ಕುಟುಂಬದವರ ಹತ್ಯೆ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೂ ಬಿಜೆಪಿ ಸಹಿಸಿಕೊಂಡಿದೆಯೆಂದೂ ಉದಾಹರಿಸಿದ್ದರು. ಆದರೆ ಇವರ ಮಾತುಗಳಿಗೆ ಕವಡೆಯ ಕಿಮ್ಮತ್ತೂ ನೀಡದೇ, ತನ್ನ ಬಚ್ಚಿಟ್ಟ ಅಜೆಂಡಾದಂತೆ ಫ್ಯಾಸಿಸ್ಟ್ ಮನೋಭಾವದ ಕೃತ್ಯ ಮುಂದುವರಿಸಿದ ಬಗ್ಗೆ ಹೆಗಡೆಯವರು ಮಾತ್ರ ಹೇಳಲಿಲ್ಲ.

ಹೆಗಡೆಯವರು ಹೇಳಿದಂತೆ ಬಿಜೆಪಿ ಎಂದೂ ಬದಲಾಗಲಿಲ್ಲ. ಊಹಿಸದಷ್ಟು ಬದಲಾಗಿರುವುದು ಹೆಗಡೆಯವರು ಮಾತ್ರ. ಮೂರನೇ ರಂಗವನ್ನೂ ಧ್ವಂಸಗೊಳಿಸಿ, ಬಿಜೆಪಿಯನ್ನೂ ಬಲಪಡಿಸುವುದೇ ಈ ಅದಲಿ-ಬದಲಿಗಳ ಕೆಲಸವಾಗಿದೆ.

ಅಲ್ಲದೇ ಡಿಎಂಕೆ, ತೆಲುಗುದೇಶಂನಂತಹ ಬೂರ್ಜ್ವಾ ಪ್ರಾದೇಶಿಕ ಪಕ್ಷಗಳು, ರಾಂವಿಲಾಸ್ ಪಾಸ್ವಾನ್‌ನಂತಹ ನಾಯಕರು ತಮ್ಮ ಹಿಂದಿನ ನಿಲುವಿಗೆ ತಿಲಾಂಜಲಿ ನೀಡಿ ಬಿಜೆಪಿಯ ಬಾಲ ಹಿಡಿಯಲು ತೊಡಗಿರುವಾಗ, ಅನೇಕ ಕಾಳಲಾಟ ಸಂಘರ್ಷಗಳಿದ್ದೂ, ಇನ್ನೂ ಬಿಜೆಪಿ-ಕಾಂಗ್ರೆ ವಿರುದ್ಧದ ಮೂರನೇ ರಂಗದಲ್ಲಿ ತಮ್ಮನ್ನು ಗುರುತಿಸಿಕೊಳ್ಳ ಬಯಸುವ ರಾಜ್ಯ ಜನತಾದಳದ ಇಂದಿನ ನಿಲುಮೆ ಸಕಾರಾತ್ಮಕವಾಗಿದೆ. ಎಡ ಪಕ್ಷಗಳು ಸಹಮಿತ್ರರು ಎಂದಿರುವ ಜನತಾದಳ ರಾಜ್ಯ ಅಧ್ಯಕ್ಷರ ಮಾತಿನ ನೈಜತೆಯ ಬಗ್ಗೆ ಹಿಂದಿನ ಅನುಭವಗಳ ಆಧಾರದಲ್ಲಿ ಕಾದು ನೋಡಬೇಕಷ್ಟೆ.

ಈಗಲಾದರೂ ಜನತಾದಳದ ನಾಯಕರು ಒಮ್ಮತದಿಂದ ಜನರ ನಡುವೆ ಹೋಗಬೇಕು. ಅವರ ರಾಜಕೀಯ ನಿಷ್ಕ್ರಿಯತೆ ಬಿಟ್ಟು ಕ್ರಿಯಾಶೀಲವಾಗಬೇಕು. ತಮ್ಮ ಮೂಲಭೂತ, ಆರ್ಥಿಕ ರಾಜಕೀಯ, ಆಡಳಿತಾತ್ಮಕ ನೀತಿಗಳನ್ನೂ ಮಾರ್ಪಡಿಸಿಕೊಳ್ಳಬೇಕು. ಜನತಾದಳದ ನಾಯಕರುಗಳ ಬಹಿರಂಗ ವಾದ-ವಿವಾದ, ಹಗೆತನಗಳ ಅಪಸ್ವರಗಳು ಜನರಲ್ಲಿ ಸಾಕಷ್ಟು ಪರಿಣಾಮ ಉಂಟುಮಾಡಿರುವುದರಿಂದ ಅದನ್ನೆಲ್ಲಾ ಸರಿಪಡಿಸಿಕೊಳ್ಳಬೇಕಾದರೆ ಕಠಿಣ ಪರೀಕ್ಷೆ ಒಡ್ಡಿಕೊಳ್ಳಬೇಕಾಗಿದೆ. ದೇಶದ ರಾಜಕೀಯದ ಎಚ್ಚರ ಸದಾ ಇರಬೇಕು.



ಕೃಪೆ: ಜನವಾಹಿನಿ

ನೀತಿ ನಿಯಮಗಳಿಗೆ ಕಡೆಗಣ್ಣು

ವಿವಿಧ ರಾಜ್ಯಗಳಲ್ಲಿ ಭಾರೀ ಪ್ರಮಾಣದ ವರ್ಗಾವಣೆಗಳು ರಾಜಕೀಯ ವಿವಾದಕ್ಕೆ ಕಾರಣವಾಗಿರುವ ಈ ಸಮಯದಲ್ಲೇ ಕೇಂದ್ರ ಸರ್ಕಾರವು ರಾಜಕೀಯ ಉದ್ದೇಶದ ಇಂಥ ಬದಲಾವಣೆಗಳನ್ನು ಮಾಡಿರುವುದು ಪ್ರಶ್ನಾರ್ಹವಾಗುತ್ತದೆ. ಬಿಹಾರದಲ್ಲಿ ಅಧಿಕಾರಿಗಳ ವರ್ಗಾವಣೆ ತಡೆಗೆ ಜಾರ್ಜ್‌ಫರ್ನಾಂಡೀಸ್ ಅವರು ರಾಷ್ಟ್ರಪತಿಗಳ ಮಧ್ಯ ಪ್ರವೇಶವನ್ನು ಕೋರುತ್ತಿರುವಾಗ ಅವರದೇ ಸರ್ಕಾರ ಇಂತ ಕ್ರಮಕ್ಕೆ ಇಳಿದಿರುವುದು ಒಂದು ವಿಪರ್ಯಾಸ..... ಬಿಜೆಪಿ ನಾಯಕರು ಹೇಳಿಕೊಂಡರೂ ವಿಶ್ವಾಸಮತ ಕಳೆದುಕೊಂಡು ರಾಜೀನಾಮೆ ನೀಡಿರುವ ಕಾರಣ ಈ ಸರ್ಕಾರಕ್ಕೆ ಪೂರ್ಣಾಧಿಕಾರ ಇರುವುದಿಲ್ಲ...... ಉಸ್ತುವಾರಿ ಸರ್ಕಾರವು ಎಲ್ಲ ನೀತಿ ನಿಯಮಗಳನ್ನು ಗಾಳಿಗೆ ತೂರಿ ವರ್ತಿಸುವುದು ಉತ್ತಮ ಮೇಲ್ಪಂಕ್ತಿ ಎನಿಸದು.

- ಪ್ರಜಾವಾಣಿ
5.5.99

ಸದ್ವರ್ತನೆಯ ಎಲ್ಲೆ

ಒಂದೆರಡು ದಿನಗಳ ಹಿಂದೆಯೇ ಮುಖ್ಯ ಚುನಾವಣಾ ಆಯುಕ್ತ ಡಾ. ಎಂ.ಎಸ್. ಗಿಲ್ ವಿಶೇಷವಾಗಿ ಕೇಂದ್ರ ಸರ್ಕಾರಕ್ಕೆ ಹಾಗೂ ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳು ನಡೆಯ ಬೇಕಾಗಿದ್ದು, ಅವು ಸಂಸದೀಯ ಚುನಾ ವಣೆಗಳೊಂದಿಗೆ ನಡೆಯ ಬಹುದಾದ ರಾಜ್ಯಗಳ ಸರಕಾರಗಳಿಗೆ ತಮ್ಮ ನಿರ್ಣಯಗಳು ಹಾಗೂ ಕಾರ್ಯದಲ್ಲಿ 'ಸಂಯಮ' ತೋರುವಂತೆ ಮನವಿ ಮಾಡಿದ್ದರು. ಸೋಮವಾರ ನಡೆಸಿದ ಅಧಿಕಾರಶಾಹಿಗಳ ವರ್ಗಾವಣೆ ವಾಜಪೇಯಿ ಆಡಳಿತ ಚುನಾವಣಾ ಆಯುಕ್ತರಿಗೆ ನೀಡಿದ ಪ್ರತ್ಯುತ್ತರವಾಗಿದೆ........ಸೋತು ತಾತ್ಕಾಲಿಕ ಅಧಿಕಾರ ನಿರ್ವಹಿಸುವ ಒಂದು ಸರಕಾರ ಹಾಗೂ ಸಂಸದೀಯ ವಿಶ್ವಾಸದ ಬಲದ ಮೇಲೆ ನಿಂತಿರುವ ಒಂದು ಸರಕಾರದ ನಡುವೆ ವ್ಯತ್ಯಾಸ ಇಲ್ಲದಂತೆ ಮಾಡುವ ಯಾವುದೇ ಪ್ರಯತ್ನ ಹಾಗೂ ಅಧಿಕಾರದ ಚಲಾವಣೆಯ ವಿಷಯದಲ್ಲಿ ಇವೆರಡೂ ಒಂದೇ ಎನ್ನುವುದು ಸಂಸದೀಯ ಪ್ರಜಾ ಪ್ರಭುತ್ವ ವ್ಯವಸ್ಥೆಯ ಮೇಲೆ ಆಘಾತ.

- ದಿ ಹಿಂದು
5.5.99

ಸಲ್ಲದ ವರ್ಗಾವಣೆಗಳು

ಶ್ರೀ ಸಿಂಗ್‌ರವರ ಜಾಗದಲ್ಲಿ ವಾಜಪೇಯಿ ಸರಕಾರದ ಒಬ್ಬ ಹಿರಿಯ ಮಂತ್ರಿಯ ಸಂಬಂಧಿ ಹಾಗೂ ಸಂಘ ಪರಿವಾರಕ್ಕೆ ಸಹಾನುಭೂತಿಯವರು ಎಂದು ಪರಿಗಣಿಸಲಾದ ಒಬ್ಬ ಅಧಿಕಾರಿಯನ್ನು ನೇಮಿಸಲಾಗಿದೆ. ಚುನಾವಣೆಗಳ ಮೊದಲು ಹಾಗೂ ಚುನಾವಣೆಗಳನ್ನು ನಡೆಸುವಲ್ಲಿ ಗೃಹ ಕಾರ್ಯದರ್ಶಿಗೆ ಒಂದು ಮಹತ್ವದ ಪಾತ್ರವಿದೆ. ಒಬ್ಬ ಸಹಾನೂಭೂತಿಪರ ವ್ಯಕ್ತಿಯ ನೇಮಕವನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಇತರ ಹಿರಿಯ ಅಧಿಕಾರಿಗಳ ಬದಲಾವಣೆ ಬಹುಶಃ ಗೃಹ ಕಾರ್ಯದರ್ಶಿಯ ವರ್ಗಾವಣೆ ಒಂದುಸಾಮಾನ್ಯ ವರ್ಗಾವಣೆ ಎಂಬ ಭಾವನೆ ಮೂಡಿಸಲೆಂದೇ ಇರಬೇಕು. ಆದರೆ ಇದು ಅತ್ಯಂತ ಅಸೂಕ್ತ........(ಸಂಪುಟ ಕಾರ್ಯದರ್ಶಿಯ ಸ್ಪಷ್ಟನಾ ಪತ್ರ) ಸರಕಾರಕ್ಕೆ ಪೂರ್ಣ ಅಧಿಕಾರವಿದೆ, ಆದರೆ ಅದನ್ನು 'ವಿವೇಚನೆ'ಯಿಂದ ಬಳಸ ಬೇಕು ಎಂದಿದೆ. 'ವಿವೇಚನೆ' ಎಂಬುದು ಒಂದು ವ್ಯಕ್ತಿನಿಷ್ಟ ಅಳತೆಗೋಲು ಗೃಹ ಕಾರ್ಯದರ್ಶಿಯ ವರ್ಗಾವಣೆ ಈ ಅಳತೆ ಗೋಲಿನ ಪ್ರಕಾರ ಇಲ್ಲ

- ಡೆಕ್ಕನ್ ಹೆರಾಲ್ಡ್

ಪರಂಪರೆಗೆ ಅಪಚಾರ

ಗೃಹ ಕಾರ್ಯದರ್ಶಿ ಬಿ.ಪಿ.ಸಿಂಗ್ ವರ್ಗಾವಣೆ ರಾಜಕೀಯ ಕಾರಣಗಳಿಗಾಗಿ ಮಾಡಿದ್ದೆಂಬುದು ಹಗಲಿನಷ್ಟು ನಿಚ್ಚಳವಾಗಿದೆ. ಗೃಹ ಸಚಿವ ಅಡ್ವಾಣಿ ಅವರಿಗೆ ವಿನಮ್ರವಾಗಿ ಹೇಳಿದಂತೆ ಕೇಳುವ ಅಧಿಕಾರಿ ಬೇಕು. ಜೂನ್‌ನಲ್ಲೇ ಚುನಾವಣೆ ನಡೆಸಬೇಕೆಂಬ ಬಿಜೆಪಿ ತಾಳಕ್ಕೆ ತಕ್ಕಂತೆ ಕುಣಿಯಲಿಲ್ಲ ಎಂಬ ಕಾರಣಕ್ಕಾಗಿ ಸಿಂಗ್ ಹಿಂಬಡ್ತಿ ಪಡೆದಿದ್ದಾರೆ.

'ಉಸ್ತುವಾರಿ' ಸರ್ಕಾರದ ಸ್ವರೂಪದ ಬಗ್ಗೆ ಸಂವಿಧಾನದಲ್ಲಿ ಸ್ಪಷ್ಟ ಉಲ್ಲೇಖಿಸಿ ರಲಿಕ್ಕಿಲ್ಲ. ಆದರೆ ಅಧಿಕಾರದಲ್ಲಿರುವವರಿಗೆ ಆತ್ಮಸಾಕ್ಷಿ ಎಂಬುದು ಇರಬೇಕು. ಅಧಿಕಾರ ಕಳಕೊಂಡ ನಂತರ ಇಂಥ ತೀರ್ಮಾನ ಕೈಗೊಳ್ಳುವುದು ಅನೈತಿಕ ಎಂಬ ಪಾಪ ಪ್ರಜ್ಞೆ ಅವರಿಗಿರಬೇಕು. ಆದರೆ ವಾಜಪೇಯಿ ಸರಕಾರಕ್ಕೆ ಇವೆರಡೂ ಇದ್ದಂತಿಲ್ಲ.

- ಜನವಾಹಿನಿ
7.5.99

ಅವರು ಕಂಡಂತೆ

ಪ್ರಜಾಪ್ರಭುತ್ವ, ಅದರ ನೀತಿ-ನಿಯಮಗಳು ಬಿಜೆಪಿಗೆ ಕಸಕ್ಕೆ ಸಮಾನ ಎಂದು ಈ ಒಂದು ತಿಂಗಳಲ್ಲೇ ಬಯಲಾಗಿದೆ. ಜೂನ್ ಮೊದಲ ವಾರದಲ್ಲೇ ಚುನಾವಣೆಯಾಗಬೇಕು ಎಂದು ಆಳುವ ಕೂಟದ ಪಕ್ಷಗಳ ಸಮೂಹಗಾನ ಚುನಾವಣಾ ಆಯೋಗದ ಮೇಲೆ ಪ್ರಭಾವ ಬೀರದಿದ್ದಾಗ ವಾಜಪೇಯಿ ಸರಕಾರ ಕೇಂದ್ರ ಗೃಹ ಕಾರ್ಯದರ್ಶಿ ಬಿ.ಪಿ.ಸಿಂಗ್ ಸೇರಿದಂತೆ 11 ಅಧಿಕಾರಿ ಗಳನ್ನು ವರ್ಗ ಮಾಡಿತು - ತಾನು ಉಸ್ತು ವಾರಿ ಸರ್ಕಾರ ಅಲ್ಲ ಎಂದು ಹೇಳು ತ್ತಿದೆ. ಇದಕ್ಕೆ ಪ್ರತಿಪಕ್ಷಗಳಿಂದ ಮಾತ್ರವಲ್ಲ, ಮಾಧ್ಯಮ ಗಳಿಂದಲೂ ಇತರ ವಲಯ ಗಳಿಂದಲೂ ಭಾರಿ ವಿರೋಧ ಕಂಡು ಬಂದಿದೆ. ಕೆಲವು ಸಂಪಾದಕೀಯಗಳು ಇಲ್ಲವೆ.

★ ರಾಷ್ಟ್ರದ ಸಂವಿಧಾನದಲ್ಲಿ ಉಸ್ತುವಾರಿ ಸರಕಾರ ಎನ್ನುವ ಪದ ಬಳಕೆ ಇಲ್ಲದಿರುವುದರಿಂದ ಎ.ಬಿ.ವಾಜಪೇಯಿ ಸರಕಾರವು ಸಾಮಾನ್ಯ ಅರ್ಥದಲ್ಲಿ ಭಾರತ ಸರ್ಕಾರವೇ ಆಗಿದ್ದರೂ ಒಳ್ಳೆ ಸಂಪ್ರದಾಯಗಳನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಕೆಲವು ಕ್ರಮಗಳನ್ನು ಕೈಗೊಳ್ಳುವಂತಿಲ್ಲ.

- ಸಂಸದೀಯ ವ್ಯವಹಾರಗಳ ಸಂಸ್ಥೆ

★ ಒಂದು ಸೋಲುಂಡ ಸರ್ಕಾರ ವಿಜೇತನೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಸಂಸತ್ತು ಇಲ್ಲದ ಒಂದು ಸರ್ಕಾರಕ್ಕೆ ಸಂಸತ್ತು ಅಧಿವೇಶನದಲ್ಲಿ ಇರುವಾಗ ಉಳ್ಳ ಹಕ್ಕು ಗಳಿಗಿಂತ ಹೆಚ್ಚಿನ ಹಕ್ಕುಗಳೇನೂ ಇಲ್ಲ. ಒಂದು ಉಸ್ತುವಾರಿ ಸರ್ಕಾರಗಳೂ ಚುನಾವಣಾ ಪ್ರಚಾರದಂತಹ ಕ್ರಮಗಳನ್ನು ಕೈಗೊಳ್ಳುವಂತಿಲ್ಲ.

- ರಾಜೀವ್ ಧಾವನ್,
ಪ್ರಖ್ಯಾತ ಸಂವಿಧಾನ ತಜ್ಞ

★ ...... ಲೋಕಸಭೆಯಲ್ಲಿ ಅವರೇ ಮಂಡಿಸಿದ್ದ ವಿಶ್ವಾಸ ಮತ ಯಾಚನೆ ನಿರ್ಣಯವು ತಿರಸ್ಕೃತವಾದ ಮೇಲೆ ಜನಾದೇಶ ಇಲ್ಲ ಎಂಬಂತಾಯಿತು. ವಾಸ್ತವತೆ ಹೀಗಿರುವಾಗ ಉಸ್ತುವಾರಿ ಹಣೆಪಟ್ಟಿಯನ್ನು ತೆಗೆದುಹಾಕಿ ಕಾರ್ಯನಿರ್ವಹಿಸಲು ಮುಂದಾಗುತ್ತಿರುವುದು ರಾಜಕೀಯ ಭಂಡತನವೆನಿಸಿಕೊಳ್ಳುತ್ತಿದೆ. ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಸತ್ಸಂಪ್ರದಾಯಗಳನ್ನು ಗಾಳಿಗೆ ತೂರಲು ಭಾರತೀಯ ಜನತಾ ಪಕ್ಷ ಉಪಕ್ರಮಿಸಿರುವುದು ಪ್ರಧಾನಿಯ ದೂರದರ್ಶನ ಭಾಷಣದಿಂದಲೇ ವಿಧಿತವಾಗುತ್ತದೆ.

- ಸಂಯುಕ್ತ ಕರ್ನಾಟಕ
7.5.99

ಕೇಂದ್ರ ಗೃಹ ಕಾರ್ಯದರ್ಶಿಯ ಸಾರಾಸಗಟು ಬದಲಾವಣೆ ಹಾಗೂ ಅದರೊಂದಿಗೆ ನಾಗರಿಕ ಸೇವೆಯ ಉನ್ನತ ಸ್ಥಾನಗಳಲ್ಲಿನ ಬದಲಾವಣೆಯನ್ನು ವಾಜಪೇಯಿ ಸರ್ಕಾರ ಚುನಾವಣೆಯ ಮೇಲಿಟ್ಟು ಕಣ್ಣಿಟ್ಟು ಮಾಡಿದೆ. ಗೃಹ ಕಾರ್ಯದರ್ಶಿಯಂತಹ ಸೂಕ್ಷ್ಮ ಹುದ್ದೆಯಲ್ಲಿನ ಅಧಿಕಾರಿಯನ್ನು ಬದಲಿಸುವುದು ಖಂಡಿತಾ ಸಂಕುಚಿತ ರಾಜಕೀಯ ಉದ್ದೇಶಗಳಿಗಾಗಿ ಮಾಡಿರುವಂತದ್ದು ಎಂಬುದು ಸ್ವಯಂ ವೇದ್ಯ.

ರಾಜಿನಾಮೆ ಕೊಟ್ಟು ಚುನಾವಣೆ ನಡೆಯುವವರೆಗೆ ಮಾತ್ರ ಅಧಿಕಾರದಲ್ಲಿ ಮುಂದುವರೆಯುವ ಒಂದು ಸರಕಾರ ಇಂತಹ ಕ್ರಮ ಕೈಗೊಂಡಿರುವುದು ಅತ್ಯಂತ ಅಸೂಕ್ತ. ಒಂದು ಉಸ್ತುವಾರಿ ಸರಕಾರದಿಂದ ನಿರೀಕ್ಷಿಸುವ ನೀತಿ-ನಿಯಮಗಳನ್ನು ಇದು ಉಲ್ಲಂಘಿಸುತ್ತದೆ.

ಭಾರತದ ರಾಷ್ಟ್ರಪತಿಗಳು ಹಾಗೂ ಚುನಾವಣಾ ಆಯೋಗ ಈ ಬದಲಾವಣೆಗಳನ್ನು ಜಾರಿಗೆ ಬರದಂತೆ ತಕ್ಷಣ ಮಧ್ಯ ಪ್ರವೇಶಿಸಬೇಕು.

- ಸಿಪಿಐ(ಎಂ) ಪೊಲಿಟ್ ಬ್ಯೂರೋ
4.5.99

'ಐಕ್ಯರಂಗ'ದಲ್ಲಿ ಓದುಗರಿಗಾಗಿ ಹೊಸ ಅಂಕಣಗಳು

ಹೊಸ ಸ್ವರೂಪದ 'ಐಕ್ಯರಂಗ' ಈಗಾಗಲೇ ನಿಮ್ಮ ಕೈಸೇರಲಾರಂಭಿಸಿದೆ. ಈ ದಿಕ್ಕಿನಲ್ಲಿ ಇನ್ನಷ್ಟು ವಿಸ್ತಾರಗೊಳ್ಳಲು ಕೆಲವು ಹೊಸ ಅಂಕಣಗಳನ್ನು ಪ್ರಾರಂಭಿಸಬೇಕೆಂದಿದ್ದೇವೆ. ಇದರಲ್ಲಿ ನಮ್ಮ ಓದುಗರ ಸಕ್ರಿಯ ಸಹಕಾರ ನಮಗೆ ಅಗತ್ಯ. ನಿಮ್ಮ ಅನಿಸಿಕೆಗಳನ್ನು ತಿಳಿಸುವ 'ಓದುಗರ ಓಲೆಗಳು' ಹಾಗೂ ನಿಮ್ಮ ಪ್ರಶ್ನೆಗಳಿಗೆ ಮೀಸಲಾದ 'ಪ್ರಶ್ನೋತ್ತರ' ಅಂಕಣಗಳನ್ನು ಸದ್ಯದಲ್ಲೇ ಆರಂಭಿಸಲಿದ್ದೇವೆ. ನಿಮ್ಮ ಪತ್ರಗಳನ್ನು, ಪ್ರಶ್ನೆಗಳನ್ನು ಆದಷ್ಟು ಬೇಗನೇ ನಮಗೆ ಕಳಿಸಿ. ಜತೆಗೆ 'ಐಕ್ಯರಂಗ' ನಿಮ್ಮ ಬಂಧುಗಳೂ, ಗೆಳೆಯರು ಓದುವಂತೆ ಪ್ರೇರೇಪಿಸಿ.

- ಸಂಪಾದಕರು

'ಐಕ್ಯರಂಗ' ಕ್ಕೆ ವರದಿ ಕಳಿಸುವವರ ಗಮನಕ್ಕೆ

ರಾಜ್ಯದ ವಿವಿಧ ಕಡೆಗಳಲ್ಲಿ ದುಡಿಯುವ ಜನಗಳ ಹೋರಾಟದ ವರದಿಗಳು ನಮಗೆ ಬರುತ್ತಿರುತ್ತವೆ. ಆದರೆ ಇವುಗಳನ್ನು ಪ್ರಕಟಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಮುಖ್ಯಕಾರಣ ಈ ವರದಿಗಳ ಸ್ವರೂಪ. ಬೇರೆ ದಿನಪತ್ರಿಕೆಗಳಿಗೆ ಕಳಿಸುವ ಸುದ್ದಿಗಳನ್ನೇ ನಮ್ಮಂತಹ ಪತ್ರಿಕೆಗೆ ಕಳಿಸಿದರೆ ನಮ್ಮ ಓದುಗರಿಗೆ ಅದರಿಂದ ಪ್ರಯೋಜನವಾಗದು. ನಮಗೆ ಕಳಿಸುವ ಇಂತಹ ವರದಿಗಳಲ್ಲಿ ನಿರ್ದಿಷ್ಟ ಹೋರಾಟದ/ ಪ್ರತಿಭಟನೆಯ ಹಿನ್ನೆಲೆಯಲ್ಲಿಯ ಸಮಸ್ಯೆಯ ಹಾಗೂ ಹೋರಾಟ/ ಪ್ರತಿಭಟನೆಯನ್ನು ಹೇಗೆ ಸಂಘಟಿಸಲಾಯಿತು ಎಂಬ ಒಂದು ಚಿತ್ರ ರಾಜ್ಯದ ಇತರ ಓದುಗರಿಗೂ ಸಿಗುವಂತೆ ಆಕರ್ಷಕವಾಗಿ ಬರೆದು ಕಳಿಸಿದ ವರದಿಗಷ್ಟೇ ಇನ್ನು ಮುಂದೆ ಆದ್ಯತೆ ನೀಡಲಾಗುವುದು ಎಂಬುದನ್ನು ಗಮನಿಸಬೇಕಾಗಿ ಕೋರಿಕೆ.

- ಸಂಪಾದಕರು.

'ಸೋಲುಂಡ ಸರ್ಕಾರ 'ಸಂಪೂರ್ಣ ಸರ್ಕಾರ'ವಾಗಬಲ್ಲುದೇ?

'ಉಸ್ತುವಾರಿ ಸರ್ಕಾರ' ಎಂಬ ಲೆಕ್ಕಾಚಾರವನ್ನು ನಾನು ಒಪ್ಪಲಾರೆ. ರಾಜ್ಯಾಂಗದಲ್ಲಿಯೂ ಕೂಡ ಉಸ್ತುವಾರಿ ಸರ್ಕಾರದ ಪ್ರಸ್ತಾಪ ಇಲ್ಲದಿರುವಾಗ ನಾನೇಕ ಹಾಗೆ ನಡೆದುಕೊಳ್ಳಬೇಕು?" ಇದು ವಾಜಪೇಯಿಯವರ ಪ್ರಶ್ನೆ. "ನಮ್ಮದು ಸಂಪೂರ್ಣ ಸರ್ಕಾರ"- ಹೀಗೆ ವಾಜಪೇಯಿಯವರು ವಾದ ಮಂಡಿಸುತ್ತಾರೆ. ವಾಜಪೇಯಿಯವರಿಗೆ ಅಜೀವ ಪರ್ಯಂತ ಪ್ರಧಾನಿಯಾಗಿಯೇ ಇರಬೇಕು ಎಂಬ ಆಕಾಂಕ್ಷೆ ಇರಬಹುದು. ಆದರೆ ವಿಸರ್ಜಿತ ಲೋಕಸಭೆಯ ಪ್ರತಿನಿಧಿಯಾಗಿರಲು ಖಂಡಿತ ಅವಕಾಶ ಇಲ್ಲ.

"ನಮ್ಮದು ಸಂಪೂರ್ಣ ಸರ್ಕಾರ'..... ಹೀಗೆನ್ನುತ್ತಾ ಸುಮ್ಮನೆ ಕೂಡಲಿಲ್ಲ. ಚುನಾವಣೆ ಪ್ರಕ್ರಿಯೆ ಆರಂಭಗೊಂಡ ಬಳಿಕವೂ ಗೃಹಖಾತೆಯನ್ನು ಒಳಗೊಂಡು ದೇಶದ 11 ಪ್ರಮುಖ ಇಲಾಖೆಗಳ ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡಿದ್ದಾರೆ. ಗೃಹಖಾತೆಯಂತಹ ಸೂಕ್ಷ್ಮ ಮಹತ್ವದ ಹುದ್ದೆಗೆ ಸಂಘ ಪರಿವಾರದ ಸಂಬಂಧಿಯನ್ನು ತಂದಿದ್ದಾರೆ. ಇಂತಹ ಪ್ರಮುಖ ಸ್ಥಾನಗಳಲ್ಲಿ ಇರುವವರ ವರ್ಗಾವಣೆಗಾಗಿ ಭಾರತೀಯ ಕೈಗಾರಿಕಾ ಮಹಾ ಮಂಡಳಿ (ಸಿಐಐ) ಕೆಲವೇ ದಿನಗಳ ಹಿಂದೆ ಪ್ರಧಾನಿಯನ್ನು ಒತ್ತಾಯಿಸಿತ್ತು ಎಂಬುದು ಸಹ ಗಮನಾರ್ಹ. ಈಗ ಅದೇ ಸಿಐಐ(ಮಹಾಮಂಡಳ) ಮತ್ತೆ ಹೇಳತೊಡಗಿದೆ "....... ಕೂಡಲೇ ಸುಗ್ರೀವಾಜ್ಞೆ ಮೂಲಕ ಹಣಕಾಸು ಮತ್ತು ವಿಮಾ ಕ್ಷೇತ್ರದ ಖಾಸಗೀಕರಣ ಮಸೂದೆಗಳನ್ನು ಜಾರಿಗೊಳಿಸಿ'. ವಾಜಪೇಯಿ ಹೇಳುತ್ತಾರೆ "...... ನಾವು ಸಭೆ ಸಮಾರಂಭಗಳಲ್ಲಿ ನಿಂತು ಭಾಷಣ ಮಾಡಲು, ದೂರದರ್ಶನದಲ್ಲಿ ಕಾಣಿಸಿಕೊಳ್ಳಲು ಮಾತ್ರ ಅಧಿಕಾರದಲ್ಲಿ ಇಲ್ಲ......" ಹಾಗಾದರೆ.......? ಪತ್ರಿಕಾ ಸಂದರ್ಶನಕಾರ ಉಸ್ತುವಾರಿ ಪ್ರಧಾನಿಗೆ ಪ್ರಶ್ನೆ ಹಾಕುತ್ತಾರೆ "ಸಿಟಿಬಿಟಿಗೆ ಸಹಿ ಹಾಕಬಹುದೆ?" "........ ಚುನಾವಣೆ ವಿಳಂಬವಾದರೆ ಕೊಂಚ ತೊಂದರೆ ಆಗುತ್ತದೆ" ಸಿಟಿಬಿಟಿಗೆ ಸಹಿ ಹಾಕಬೇಕು ಎಂದು ಅಮೇರಿಕಾ ಹಾಕುತ್ತಿರುವ ಒತ್ತಡ. ವಾಜಪೇಯಿಯವರ ಮನದಲ್ಲಿ ಸಹಮತ ಮೂಡಿ ಮಾಯವಾಗುತ್ತಿರಬೇಕು. ಹೊಸ ದಾರಿಗಳನ್ನು ಹುಡುಕುತ್ತಿರಬೇಕು...! ಈ ಹಿಂದೆ 1996 ರಲ್ಲಿ ಬಹುಮತವಿನ್ನು ಸಾಬೀತುಗೊಳಿಸದೇ ಇರುವಾಗ ಕೇವಲ 13 ದಿನಗಳಲ್ಲಿ ಎನ್ರಾನ್ ಸೇರಿದಂತೆ ಅನೇಕ ಒಪ್ಪಂದಗಳಿಗೆ ಸಹಿ ಹಾಕಿದ ಭೂಪರಲ್ಲವೇ ಇವರು.

'ಉಸ್ತುವಾರಿ ಸರ್ಕಾರ' ಎಂಬುದು ರಾಜ್ಯಾಂಗದಲ್ಲೇ ಇಲ್ಲ - ಎಂದು ಹುಯಿಲೆಬ್ಬಿಸಲಾಗುತ್ತಿದೆ. ನಿಜ ಏನು? ಈ ಹಿಂದೆ ಹಲವಾರು ಉಸ್ತುವಾರಿ ಸರ್ಕಾರಗಳು ಬಂದು ಹೋಗಿವೆ. ಸಂಸದೀಯ ಪ್ರಜಾಪ್ರಭುತ್ವ ಹಾಗೂ ಉತ್ತಮ ಪರಂಪರೆಯನ್ನು ಎಲ್ಲರೂ ಅನುಸರಿಸಿಕೊಂಡೇ ಬಂದಿದ್ದರು. ಆದರೆ ಜನಾಭಿಪ್ರಾಯಕ್ಕೆ, ಸಂಸದೀಯ ಪ್ರಜಾಪ್ರಭುತ್ವಕ್ಕೆ ಮನ್ನಣೆ ಕೊಡುವುದು ಬಿಜೆಪಿಗೆ ಬೇಕಿಲ್ಲ. ಏನಿದ್ದರೂ 'ಬಚ್ಚಿಟ್ಟ ಅಜೆಂಡಾ' ಜಾರಿಯಾಗಬೇಕು! ಸಂಸತ್ತು ಅಸ್ತಿತ್ವದಲ್ಲಿ ಇರುವಾಗಲೇ ಸುಗ್ರೀವಾಜ್ಞೆಗಳ ಮೂಲಕವೇ ಹಲವಾರು ಮಸೂದೆಗಳನ್ನು ಜಾರಿಗೊಳಿಸಿದ ಕೆಟ್ಟ ಪರಂಪರೆಯನ್ನು ಈ ಹಿಂದೆ ನೋಡಿದ್ದೇವೆ.

ವಾಜಪೇಯಿ ಸರ್ಕಾರ ಪೂರ್ಣ ಸರ್ಕಾರವೇ? ಅವರ ವಿತಂಡವಾದಗಳನೇ ಇರಲಿ, ಇದು ಪೂರ್ಣ ಸರ್ಕಾರ ಅಲ್ಲವೇ ಅಲ್ಲ. ಏಕೆಂದರೆ ಭಾರತ ಸಂಸದೀಯ ಪ್ರಜಾಪ್ರಭುತ್ವದ ದೇಶ. ದೇಶದ ಜನತೆಯ ಪರಮೋಚ್ಛ ಪ್ರತಿನಿಧಿತ್ವ ಇರುವುದೇ ಸಂಸತ್ ಅಥವಾ ಪಾರ್ಲಿಮೆಂಟ್‌ನಲ್ಲಿ. ಇಂತಹ ಸಂಸತ್ತಿಗೆ ಸಾರ್ವತ್ರಿಕ ಚುನಾವಣೆಗಳಲ್ಲಿ ಜನರು ಮತದಾನದ ಮೂಲಕ ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಆಯ್ಕೆಗೊಂಡ ಸದಸ್ಯರಿಂದ ಸಂಸತ್ ರಚನೆಯಾಗುತ್ತದೆ. ಬಹುಮತ ಇರುವ ರಾಜಕೀಯ ಪಕ್ಷದಿಂದ ಸರ್ಕಾರ ರಚಿತಗೊಳ್ಳುತ್ತದೆ. ಪ್ರಧಾನಿ, ಮತ್ತು ಸಚಿವರುಗಳುಳ್ಳ ಸರ್ಕಾರ ರಚನೆಯಾದಾಗ್ಯೂ ಪಾರ್ಲಿಮೆಂಟ್ ಉನ್ನತವಾದದ್ದು. ಸರ್ಕಾರದ ನಿರ್ಧಾರಗಳಿಗೆ ಪಾರ್ಲಿಮೆಂಟ್ ಅನುಮೋದನೆ ಅಥವಾ ಪ್ರಸ್ತಾವನೆ ಅತ್ಯಗತ್ಯ. ಅಂದರೆ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಕೆಲಸ ನಿರ್ವಹಿಸಲು, ಅಸ್ತಿತ್ವದಲ್ಲಿರಲು ಪಾರ್ಲಿಮೆಂಟ್ ಅಸ್ತಿತ್ವದಲ್ಲಿ ಇರಲೇಬೇಕು.

ಆದರೀಗ ವಾಜಪೇಯಿಯವರ ಸರ್ಕಾರ ಬಹುಮತದ ಪರೀಕ್ಷೆಯಲ್ಲಿ ಸೋತಿದೆ. ವಿಶ್ವಾಸಮತ ಕಳೆದುಕೊಂಡಿದೆ. ಬಳಿಕ ವಾಜಪೇಯಿ ಸರ್ಕಾರ ರಾಜೀನಾಮೆಯನ್ನು ರಾಷ್ಟ್ರಪತಿಗಳಿಗೆ ನೀಡಿದ್ದು, ಅದೂ ಅಂಗೀಕಾರಗೊಂಡಿದೆ. ಪರ್ಯಾಯ ಸರ್ಕಾರ ರಚನೆ ವಿಫಲಗೊಂಡ ನಂತರ 12ನೇ ಲೋಕಸಭೆಯನ್ನು ವಿಸರ್ಜನೆಗೊಳಿಸಲಾಗಿದ್ದು, 13ನೇ ಲೋಕಸಭೆಯನ್ನು ರಚಿಸಲು ಹೊಸಚುನಾವಣೆ ಘೋಷಿಸಲಾಗಿದೆ. ಹೊಸ ಸಂಸತ್ ಅಸ್ತಿತ್ವಕ್ಕೆ ಬರುವವರೆಗೆ ದೇಶದ ದಿನನಿತ್ಯದ ವ್ಯವಹಾರಗಳನ್ನು ನೋಡಿಕೊಂಡು ಹೋಗುವ 'ಉಸ್ತುವಾರಿಗಾಗಿ' ವಿಸರ್ಜನೆಗೆ ಮೊದಲಿದ್ದ ವಾಜಪೇಯಿಯವರನ್ನು ಕೇಳಲಾಗಿದೆ. ಹೀಗಾಗಿ ಸಂಸತ್ ಅಸ್ತಿತ್ವದಲ್ಲಿ ಇಲ್ಲದೇ ಇರುವಾಗ ಪೂರ್ಣ ಸರ್ಕಾರವೂ ಸಹ ಇರಲು ಸಾಧ್ಯವೇ ಇಲ್ಲ. ಮತ್ತು ಉಸ್ತುವಾರಿ ಸರ್ಕಾರ ಹಾಗೆ ನಡೆದುಕೊಳ್ಳುವುದು ಅಸಾಧ್ಯ. ಈ ಅಂಶ ರಾಜ್ಯಾಂಗದಲ್ಲಿ ಇಲ್ಲವೆಂಬುದು ಹಸಿಸುಳ್ಳು.

ಇದು ಇಷ್ಟೊಂದು ಸ್ಪಷ್ಟವಿದ್ದಾಗ್ಯೂ ಬಿಜೆಪಿಯು ಮತ್ತು ಮುತ್ಸದ್ದಿ ಪ್ರಧಾನಿ ವಾಜಪೇಯಿಯವರು ಯಾಕೆ ವಾದ ವಿವಾದ ಹುಟ್ಟಿಹಾಕಬಯಸುತ್ತಾರೆ? ಇವರ ಗುಪ್ತ ಅಜೆಂಡಾಗಳ ಜಾರಿಗೆ ಈ 13 ತಿಂಗಳೂ ಸಾಕಾಗಲಿಲ್ಲ. ಇರುವ ಎಲ್ಲಾ ಸಂದರ್ಭಗಳನ್ನು ಬಳಸಿಕೊಳ್ಳಲು ಹವಣಿಸುತ್ತಿದ್ದಾರೆ. ಇದು ಸಂವಿಧಾನಿಕವೂ ಅಲ್ಲ, ನೈತಿಕವೂ ಅಲ್ಲ. ಈ ಸನ್ನಿವೇಶದಲ್ಲಿ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಬೇಕು. ಮಾತ್ರವಲ್ಲ ದೇಶದ ಎಲ್ಲಾ ಪ್ರಜಾಪ್ರಭುತ್ವೀಯ ಶಕ್ತಿಗಳು, ಜನತೆ ಬಿಜೆಪಿಯ ಫ್ಯಾಸಿಸ್ಟ್ ಪಿತೂರಿಗಳನ್ನು ಬಯಲಿಗೆಳೆದು ಎದುರಿಸಬೇಕು.

- ಎಸ್.ವೈ.ಗುರುಶಾಂತ್

ಸಾಮ್ರಾಜ್ಯಶಾಹಿಗಳೂ, ಬಂಡವಾಳಶಾಹಿಗಳೂ ಪರ್ಯಾಯ ಸರಕಾರ ಬರದಂತೆ ನೋಡಿಕೊಂಡರು!

ವಾಜಪೇಯಿ ಸರಕಾರ ತನ್ನ ಆಂತರಿಕ ವಿರೋಧಾಭಾಸಗಳಿಂದಲೇ ಕುಸಿದು ಬಿದ್ದಾಗ ಒಂದು ಪರ್ಯಾಯ ವ್ಯವಸ್ಥೆಯ ಪ್ರಶ್ನೆ ಬಂತು. ಕೊನೆಗೂ ಇದು ಮೂಡಿ ಬರದಿರುವಲ್ಲಿ ಸಾಮ್ರಾಜ್ಯಶಾಹಿಗಳ ಮತ್ತು ಭಾರತದ ದೊಡ್ಡ ಬಂಡವಾಳಿಗರ ಪಾತ್ರವೂ ಇದೆಯೆಂಬುದನ್ನು ಉಪೇಕ್ಷಿಸುವಂತಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಹೇಳಿದ್ದಾರೆ. ಬಿಜೆಪಿಯ ಸುಳ್ಳುಗಳನ್ನು ವಿಶ್ಲೇಷಿಸಿರುವ ಲೇಖನವೊಂದರಲ್ಲಿ ಅವರು ಇದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ.

ಸಾಮ್ರಾಜ್ಯಶಾಹಿಗಳಿಗಿದ್ದ ಹಿತಾಸಕ್ತಿಯೇನು? ಸ್ವತಂತ್ರ ಭಾರತದಲ್ಲಿ ತಮ್ಮ ಹಿತಾಸಕ್ತಿಗಳನ್ನು ಈಡೇರಿಸುವಲ್ಲಿ ವಾಜಪೇಯಿ ಸರಕಾರ ಮಾಡಿದ್ದಷ್ಟನ್ನು ಹಿಂದೆ ಯಾವ ಸರಕಾರವೂ ಮಾಡಿಲ್ಲ ಎಂಬುದನ್ನು ಅವರು ಅರಿತುಕೊಂಡಿದ್ದಾರೆ. ಭಾರತದ ಆರ್ಥಿಕ ಸಾರ್ವಭೌಮತೆಯನ್ನು ಸಾಮ್ರಾಜ್ಯಶಾಹಿಗಳ ಕಾಲಬುಡಕ್ಕೆ ಎಸೆಯುವಲ್ಲಿ ಕಳೆದ ಎಂಟು ವರ್ಷಗಳಲ್ಲಿ ಮಾಡಲಾಗದ್ದನ್ನು ಒಂದೇ ವರ್ಷದಲ್ಲಿ ಮಾಡಲು ಮುಂದಾದ ಸರಕಾರದ ಪರವಾಗಿ ಅವರು ಮಧ್ಯಪ್ರವೇಶ ಮಾಡದಿರಲು ಸಾಧ್ಯವೇ? 'ಸ್ವದೇಶಿ' ಯ ಮಂತ್ರ ಪಠಿಸುತ್ತಾ ಅವರಿಗೆ ವಿಮಾ ವಲಯವನ್ನು ತೆರೆದುಕೊಡಲು ಮುಂದಾಯಿತು. ವಿಶ್ವವ್ಯಾಪಾರ ಸಂಘಟನೆಗೆ ಮಾತು ಕೊಡಲೂ ಈ ಸರಕಾರ ಹಿಂಜರಿಯಲಿಲ್ಲ. ಇದರ ಜೊತೆಗೆ ಸಂಸತ್ತಿನಲ್ಲಿ ಚರ್ಚಿಸದೆಯೇ, ಭಾರತೀಯ ಜನಗಳ ಅನುಮೋದನೆ ಪಡೆಯದೆಯೇ ಪಾಶ್ಚಿಮಾತ್ಯ ಶಕ್ತಿಗಳಿಂದ ಪರಮಾಣು ನಿಶ್ಶಸ್ತ್ರೀಕರಣದ ಭರವಸೆ ಪಡೆಯದೆಯೇ ಸೆಪ್ಟೆಂಬರ್‌ನಲ್ಲಿ ಸಿಟಿಬಿಟಿಗೆ ಸಹಿ ಹಾಕುವ ವಚನವನ್ನು ಅಮೆರಿಕನ್ ಆಳರಸರಿಗೆ ಈ ವಾಜಪೇಯಿ ಸರಕಾರ ಕೊಟ್ಟಿತ್ತು. ಹೀಗಿರುವಾಗ ತಮಗೆ ದೊರೆಯಲಿದ್ದ ಈ ಸೌಲಭ್ಯಗಳಿಗೆಲ್ಲಾ ಕುತ್ತು ತರುವ ಎಡಪಕ್ಷಗಳ ಬೆಂಬಲದ ಸರಕಾರ ಮೂಡಿ ಬರುವುದನ್ನು ಅವರು ಹೇಗೆ ತಾನೆ ಸಹಿಸಲು ಸಾಧ್ಯ?

ಅತ್ತ ದೊಡ್ಡ ಬಂಡವಾಳಿಗರಿಗೂ ಈ ಸರಕಾರ ಭಾರೀ ಭಕ್ಷಿಸು ಒದಗಿಸಿತ್ತು. ಜನಸಾಮಾನ್ಯರನ್ನು ಲೂಟಿ ಮಾಡುವ ಇನ್ನಷ್ಟು ಅವಕಾಶಗಳನ್ನು ವಾಜಪೇಯಿ ಸರಕಾರ ತಮಗಾಗಿ ಸೃಷ್ಟಿಸುವ ನಿರೀಕ್ಷೆ ಅದರಲ್ಲಿತ್ತು. ಈ ಒಂದು ವರ್ಷದಲ್ಲಿ ರಕ್ಷಣಾ ಸಾಧನಗಳ ಭಾರೀ ಖರೀದಿಯಿಂದಾಗಿ ಅಂತರ್ರಾಷ್ಟ್ರೀಯ ಶಸ್ತ್ರಾಸ್ತ್ರ ವ್ಯಾಪಾರಿಗಳ ಕೃಪೆಯೂ ಈ ಸರಕಾರದ ಮೇಲಿತ್ತು. ಈ ಸರಕಾರಕ್ಕೆ ಪರ್ಯಾಯವಾದ ಯಾವುದೇ ಸರಕಾರ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಬೇಕಾಗಿತ್ತು. ಆದ್ದರಿಂದ ಈ ಎಲ್ಲಾ ಶಕ್ತಿಗಳು ಒಟ್ಟು ಸೇರಿ ಇಂತಹದೊಂದು ಪರ್ಯಾಯ ಸರ್ಕಾರ ರಚನೆಗೊಳ್ಳದಂತೆ ಶಕ್ತಿಮೀರಿ ಪ್ರಯತ್ನಿಸಿದವು. ರಾಜಕೀಯ ನೀತಿ-ನಿಯಮಗಳನ್ನು ಗಾಳಿಗೆ ತೂರಿ, ಭಯ-ಬೆದರಿಕೆ-ಒತ್ತಡ ಹೇರಿ, ಭಾರೀ ಹಣ ಖರ್ಚು ಮಾಡಿ ಒಂದು ಪರ್ಯಾಯ ಮೂಡಿ ಬರದಂತೆ, ದೇಶ ಮತ್ತೆ ಚುನಾವಣೆಗೆ ಹೋಗುವಂತೆ ಮಾಡಲಾಯಿತು ಎಂದು ಸೀತಾರಾಂ ಯೆಚೂರಿ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

1957, 1971 ರ ನೆನಪು

ಕಲ್ಕತ್ತೆಯಲ್ಲಿ ಸಮಾರಂಭವೊಂದರಲ್ಲಿ ಮಾತನಾಡುತ್ತಾ ಜ್ಯೋತಿಬಸುರವರೂ ಸಾಮ್ರಾಜ್ಯಶಾಹಿಗಳು ಒಂದು ಎಡ ಬೆಂಬಲಿತ ಪರ್ಯಾಯ ಸರ್ಕಾರ ರಚನೆ ಯಾಗದಂತೆ ತಡೆದರು ಎಂದು ಹೇಳಿದ್ದಾರೆ.

ದೇಶದ ಒಳಿತಿಗಾಗಿ ಬಿಜೆಪಿ ಸರಕಾರ ಹೋಗಲೇಬೇಕಾಗಿತ್ತು, ಹೋಯಿತು. ಆದರೆ ಕಾಂಗ್ರೆಸ್ ತನ್ನ ಜವಾಬ್ದಾರಿ ನಿರ್ವಹಿಸಲಿಲ್ಲ - ಈ ನಡುವೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಜ್ಯೋತಿಬಸುರವರು ಮುಂದಿನ ಪ್ರಧಾನ ಮಂತ್ರಿಗಳಾದರೆ ರಾಜಕೀಯ ತೂಗುಯ್ಯಾಲೆಯನ್ನು ಪರಿಹರಿಸಬಹುದು ಎಂದು ಸೂಚಿಸಿದರು. ಇದು ಅಷ್ಟು ಸುಲಭವಾದದ್ದೇನಲ್ಲ ಎಂದು ಜ್ಯೋತಿಬಸು ಅವರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದರು. ಆದರೆ ಅವರು ಹಠ ಬಿಡಲಿಲ್ಲ.

ಜ್ಯೋತಿಬಸು ಈ ಮುಖಂಡರಿಗೆ ಏನು ಹೇಳಿದರು? ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳು ಒಬ್ಬ ಸಿಪಿಐ(ಎಂ) ಮುಖಂಡ ಭಾರತದ ಪ್ರಧಾನ ಮಂತ್ರಿಯಾಗಲು ಒಪ್ಪಲಾರವು. ಈ ದೇಶದ ಮೇಲೆ ತಮ್ಮ ಪ್ರಭಾವವನ್ನು ಕಮ್ಮಿ ಮಾಡಿಕೊಳ್ಳಲು ಆ ದೇಶಗಳು ಸಿದ್ದರಿಲ್ಲ. ಇದಕ್ಕೆ ಜ್ಯೋತಿಬಸು ಒಂದು ಉದಾಹರಣೆ ನೀಡಿದರು. 1971 ರಲ್ಲಿ ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಗೆ ಬಹುಮತಕ್ಕೆ ಎರಡು ಸ್ಥಾನ ಕಮ್ಮಿಯಿತ್ತು. ಆಗ ಫಾರ್ವರ್ಡ್‌ಬ್ಲಾಕ್ ಮತ್ತು ಆರ್.ಎಸ್.ಪಿ. ಸಿಪಿಐ(ಎಂ) ನೇತೃತ್ವದ ರಂಗದಲ್ಲಿರಲಿಲ್ಲ. ಸಿಪಿಐ(ಎಂ) ಸರಕಾರವನ್ನು ತಾವು ಬೆಂಬಲಿಸುವುದಿಲ್ಲ ಎಂದು ಅವರು ರಾಜ್ಯಪಾಲರಿಗೆ ಹೇಳಿದರು. ಅತ್ಯಂತ ದೊಡ್ಡ ಪಕ್ಷವನ್ನು ಸರಕಾರ ರಚಿಸಲು ಕರೆಯಬೇಕಾಗಿದ್ದರೂ ರಾಜ್ಯಪಾಲರು ಕರೆಯಲಿಲ್ಲ. ಏಕೆ ಎಂಬುದು ತಿಳಿದದ್ದು ಕೆಲವು ವರ್ಷಗಳ ನಂತರವೇ. ಭಾರತದಲ್ಲಿ ಅಮೇರಿಕನ್ ರಾಯಭಾರಿಯಾಗಿದ್ದ ಪ್ಯಾಟ್ರಿಕ್ ಮೊಯ್ನಿಹಾನ್ ಬರೆದ ಪುಸ್ತಕದಿಂದಷ್ಟೇ ಇದು ತನಗೆ ತಿಳಿದು ಬಂತು ಎಂದು ಜ್ಯೋತಿಬಸು ನೆನಪಿಸಿದರು. ಅಮೆರಿಕಾ ಸಂಯುಕ್ತ ಸಂಸ್ಥಾನ 1957 ರಲ್ಲಿ ಕೇರಳದಲ್ಲಿ ಮಾರ್ಕ್ಸ್‌ವಾದಿಗಳನ್ನು ಸರಕಾರದಿಂದ ಹೊರಗೆಸೆಯಲು ಹಾಗೂ 1971 ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟರು ಸರಕಾರ ರಚಿಸದಂತೆ ತಡೆಯಲು ಕಾಂಗ್ರೆಸ್ಸಿಗೆ ಹಣ ಒದಗಿಸಿತ್ತು ಎಂದು ಮೊಯ್ನಿಹಾನ್ ತನ್ನ ಪುಸ್ತಕದಲ್ಲಿ ಬರೆದಿದ್ದಾರೆ.

ರಾಜ್ಯದ ರಾಜಕೀಯದಲ್ಲೇ ಇಷ್ಟೊಂದು ಭಂಡತನದಿಂದ ಮೂಗು ತೂರಿಸುವ ಅಮೆರಿಕಾ ರಾಷ್ಟ್ರೀಯ ರಾಜಕಾರಣದಲ್ಲಿ ಹಾಗೆ ಮಾಡುವುದಿಲ್ಲ ಎಂದು ನಂಬಲು ಖಂಡಿತಾ ಸಾಧ್ಯವಿಲ್ಲ. ಒಬ್ಬ ಸಿಪಿಐ(ಎಂ) ಮುಖಂಡ ಕೇಂದ್ರ ಸರ್ಕಾರದ ನೇತೃತ್ವ ವಹಿಸುವ ಸಂಭವವಿರುವಾಗ ಅವರು ಸುಮ್ಮನಿರುತ್ತಾರೆಯೆ? ಇಂತಹ ಬೆಳವಣಿಗೆಗಳು ಬಹಿರಂಗವಾಗಿ ನಡೆಯುವುದಿಲ್ಲ. ಹಿನ್ನೆಲೆಯಲ್ಲಿಯೇ ನಡೆಯುತ್ತವೆ. ಕೇರಳ, ಪಶ್ಚಿಮ ಬಂಗಾಳದ ಪ್ರಕರಣಗಳು ಮೊಯ್ನಿಹಾನ್ ಬರವಣಿಗೆಗಳಲ್ಲಿ ಬೆಳಕು ಕಾಣದಿದ್ದರೆ ಯಾರಿಗೂ ತಿಳಿಯುತ್ತಿರಲಿಲ್ಲ ಎಂದು ಜ್ಯೋತಿಬಸು ಹೇಳಿದರು.



ವ್ಯಂಗ್ಯ ಚಿತ್ರಕೃಪೆ: ಔಟ್‌ಲುಕ್

ಸಡಗರದ, ನಿರೀಕ್ಷೆಯ ವಾತಾವರಣದಲ್ಲಿ ರಾಜ್ಯಾದ್ಯಂತ ಮೇ ದಿನಾಚರಣೆ



ಈ ಬಾರಿಯ ಮೇ ದಿನಾಚರಣೆ ಈ ಶತಮಾನದ ಕೊನೆಯ ಮೇ ದಿನಾಚರಣೆಯಾಗಿತ್ತು - ಅಕ್ಟೋಬರ್ ಕ್ರಾಂತಿಯೊಂದಿಗೆ ಮಾನವೇತಿಹಾಸಕ್ಕೆ ಹೊಸ ತಿರುವು ನೀಡಿದ ಶತಮಾನದ ಕೊನೆಯ ಮೇ ದಿನಾಚರಣೆಯಾಗಿತ್ತು. ಅಷ್ಟೇ ಅಲ್ಲ ಈ ಸಹಸ್ರಾಬ್ದದ ಕೊನೆಯ ಮೇ ದಿನಾಚರಣೆ. ನಮ್ಮ ದೇಶದಲ್ಲಿ ಕೆಲವೇ ದಿನಗಳ ಹಿಂದೆ ಸ್ವತಂತ್ರ ಭಾರತದ ಅತ್ಯಂತ ಕೆಟ್ಟ ಸರಕಾರ ಎನಿಸಿಕೊಂಡ ವಾಜಪೇಯಿ ಸರಕಾರ ಪತನಗೊಂಡು ಕಾರ್ಮಿಕ ವರ್ಗ ಇನ್ನೊಂದು ಚುನಾವಣಾ ಹೋರಾಟಕ್ಕೆ ಸಿದ್ಧಗೊಳ್ಳಬೇಕಾದ ಹಿನ್ನೆಲೆಯಲ್ಲಿ ಈ ಮೇ ದಿನಾಚರಣೆ ನಡೆಯಿತು. ಸಹಜವಾಗಿಯೇ ಅಂತರ್ರಾಷ್ಟ್ರೀಯ ರಂಗದಲ್ಲಿ ಮತ್ತೆ ಚುರುಕುಗೊಳ್ಳುತ್ತಿರುವ ಕಾರ್ಮಿಕ ಆಂದೋಲನ ಹಾಗೂ ದೇಶದಲ್ಲಿ ಕಾರ್ಮಿಕ ವರ್ಗ ಎದುರಿಸುತ್ತಿರುವ ಸವಾಲುಗಳು, ರಾಜ್ಯದಲ್ಲಿ ತೃತೀಯ ರಂಗದ ಭಾಗವಾಗಿದ್ದರೂ ಜನತಾದಳದ ಪಟೇಲ್ ಸರ್ಕಾರದ ಕಾರ್ಮಿಕ - ವಿರೋಧಿ ಕ್ರಮಗಳು ರಾಜ್ಯದಲ್ಲಿ ನಡೆದ ಮೇ ದಿನಾಚರಣೆಗಳಲ್ಲಿ ಚರ್ಚೆಗೆ ಬಂದವು. ರಾಜ್ಯದ ವಿವಿಧೆಡೆಗಳಿಂದ ನಮಗೆ ಬಂದಿರುವ ವರದಿಗಳನ್ನು ಈ ಮುಂದೆ ಕೊಡಲಾಗಿದೆ.



ಬೆಂಗಳೂರು: ನಾಲ್ಕೂ ದಿಕ್ಕುಗಳಿಂದ ಮೆರವಣಿಗೆ ಕಾರ್ಮಿಕ-ವಿರೋಧಿಗಳ ಹಲ್ಲೆಗೆ ಖಂಡನೆ

ಬೆಂಗಳೂರು ನಗರದಲ್ಲಿ ಕೆಲವು ಕೈಗಾರಿಕಾ ಪ್ರದೇಶಗಳಲ್ಲಿ ಮುಂಜಾನೆಯೇ ಕಾರ್ಮಿಕರ ಕೆಂಬಾವುಟವನ್ನು ಹಾರಿಸುವುದರೊಂದಿಗೆ ಮೇ ದಿನಾಚರಣೆ ಆರಂಭವಾಯಿತು. ಸಂಜೆ ನಗರದ ನಾಲ್ಕು ಭಾಗಗಳಿಂದ ಬಂದ ಮೆರವಣಿಗೆಗಳು ಬನಪ್ಪ ಪಾರ್ಕ್ ಸೇರಿದವು. ಜನ-ವಿರೋಧಿ ಆರ್ಥಿಕ ನೀತಿಗಳು ಮತ್ತು ಕೋಮುವಾದದ ವಿರುದ್ಧ ಘೋಷಣೆಗಳೊಂದಿಗೆ "ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರ ಮಧ್ಯ ಪ್ರವೇಶ ನಿಲ್ಲಲಿ', 'ಕಾರ್ಮಿಕ - ವಿರೋಧಿ ರಾಜ್ಯ ಸರ್ಕಾರಕ್ಕೆ ಧಿಕ್ಕಾರ' ಮುಂತಾದ ಘೋಷಣೆಗಳು ಈ ವರ್ಷ ಕೇಳಿಬಂದವು. ಇದಕ್ಕೆ ಕಾರಣವೂ ಇತ್ತು. ಮೆರವಣಿಗೆಗಳ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಕಾರ್ಮಿಕರ ಈ ಆಕ್ರೋಶಕ್ಕೆ ಕಾರಣವನ್ನು ನೀಡಿದರು. ಬಿ.ಪಿ.ಎಲ್. ಕಾರ್ಮಿಕರ ಹೋರಾಟ ಇದಕ್ಕೊಂದು ಉದಾಹರಣೆ. ಕಾರ್ಮಿಕ ಕಾನೂನುಗಳನ್ನು ಪಾಲಿಸದ ಮಾಲಿಕರ ವಿರುದ್ಧ ಕ್ರಮ ಜರುಗಿಸದ ಪಟೇಲ್ ಸರ್ಕಾರ ಕಾರ್ಮಿಕರ ಮುಖಂಡರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಜೈಲಿಗೆ ಹಾಕಿದೆ. ಕಾರ್ಮಿಕರು ಎಚ್ಚೆತ್ತುಕೊಂಡು ಇಂತಹ ಧಾಳಿ-ದಬ್ಬಾಳಿಕೆಗಳನ್ನು ಎದುರಿಸಲು ಮುಂದಾಗ ಬೇಕು ಎಂದು ವಿ.ಜೆ.ಕೆ.ನಾಯರ್ ಕರೆ ನೀಡಿದರು.

ಸಭೆಯನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಮುಖಂಡರಾದ ಹೆಚ್.ಎನ್.ಗೋಪಾಲಗೌಡ, ಇ.ಕೆ.ಎನ್.ರಾಜನ್, ಪ್ರಾಂತರೈತ ಸಂಘದ ಮುಖಂಡರಾದ ಪಿ.ಜಗನ್ನಾಥ್ ಮಾತನಾಡಿದರು. ಅದೇ ದಿನ ನಗರದ ಹೊಲವಲಯ ಆನೇಕಲ್‌ನಲ್ಲಿ ಕಾರ್ಮಿಕರ ಐಕ್ಯತೆಯನ್ನು ಮುರಿಯುವ ಕೋಮುವಾದಿ ಗೂಂಡಾಗಳ ಹಲ್ಲೆಗೊಳಗಾಗಿದ್ದ ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಸ್ವಾಗತಿಸಿದರು.

ಅವರೊಂದಿಗೆ ಇನ್ನೂ ತೀವ್ರ ಹಲ್ಲೆಗೊಳಗಾದ 'ಸಮುದಾಯ' ಸಾಂಸ್ಕೃತಿಕ ತಂಡದ ಮುಖಂಡ ಗುಂಡಣ್ಣನವರ ನೇತೃತ್ವದಲ್ಲಿ ತಲೆ-ಮುಖವೆಲ್ಲಾ ಆವರಿಸಿದ್ದ ಬ್ಯಾಂಡೇಜ್ ನಡುವೆಯೇ 'ಕೇಸರಿ ಬಿಳಿ ಹಸಿರು' ನಾಟಕ ಪ್ರದರ್ಶನಗೊಂಡಿತು.

ಕಾಂ.ಸೂರಿ ಸಂದೇಶ

ಬೆಂಗಳೂರಿನಲ್ಲಿ ಸುಮಾರು ನಾಲ್ಕೈದು ದಶಕಗಳಿಂದಲೂ ಮೇ ದಿನಾಚರಣೆಯ ಪ್ರಮುಖ ಭಾಷಣಕಾರರಾಗಿ ಕಾರ್ಮಿಕರಲ್ಲಿ ಹುಮ್ಮಸ್ಸು ತುಂಬುತ್ತಾ ಬಂದಿರುವ ಸಿಐಟಿಯು ರಾಜ್ಯ ಅಧ್ಯಕ್ಷ ಎಸ್ ಸೂರ್ಯನಾರಾಯಣ ರಾವ್ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದುದರಿಂದ ಈ ಬಾರಿಯ ಮೇ ದಿನಾಚರಣೆಯಲ್ಲಿ ಪಾಲ್ಗೊಳ್ಳಲಾಗಲಿಲ್ಲ. ಆದರೂ ಅವರು ಕಾರ್ಮಿಕರಿಗೆ ಮೇ ದಿನದ ಸಂದೇಶವನ್ನು ಕಳಿಸಿದ್ದರು. ಅದನ್ನು ಸಭೆಯಲ್ಲಿ ಓದಿ ಹೇಳಲಾಯಿತು. ಈಗಿರುವ ಸನ್ನಿವೇಶದಲ್ಲಿ ಕಾರ್ಮಿಕರು ಎಚ್ಚೆತ್ತುಕೊಂಡು ವರ್ಗ ಪ್ರಜ್ಞೆಯನ್ನು ಬೆಳೆಸಿಕೊಂಡು ಪರಿಸ್ಥಿತಿಯನ್ನು ಎದುರಿಸಬೇಕು ಎಂದು ಅವರು ತಮ್ಮ ಸಂದೇಶದಲ್ಲಿ ಕರೆ ನೀಡಿದರು.

ಗಂಗಾವತಿ ನಗರದಲ್ಲಿ ವರ್ಣರಂಜಿತ ಕಾರ್ಮಿಕರ ದಿನಾಚರಣೆ

ಗಂಗಾವತಿ ನಗರದಲ್ಲಿ ಸಿ.ಐ.ಟಿ.ಯು ನೇತೃತ್ವದಲ್ಲಿ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು. ಈ ಆಚರಣೆಯ ಮೂಲ ಉದ್ದೇಶ ಎಲ್ಲಾ ಕಾರ್ಮಿಕರಲ್ಲಿ ಐಕ್ಯತೆಯನ್ನು ಕಾಪಾಡಲು ಹಾಗೂ ಕೋಮುವಾದಿಗಳನ್ನು ಹಿಮ್ಮೆಟ್ಟಿಸಲು, ಕಾರ್ಮಿಕರ ದಿನಾಚರಣೆಯು ಕಾರ್ಮಿಕರ ಬಲವನ್ನು ಪ್ರದರ್ಶಿಸಲು ಒಂದು ಒಳ್ಳೆ ಅವಕಾಶವೆಂದು ಸಿ.ಐ.ಟಿ.ಯು ಮನಗಂಡಿದ್ದು ಅಂದು ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ಸುಮಾರು 1500 ಜನ ಕೆಂಪು ಸಮವಸ್ತ್ರದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಈ ಮೆರವಣಿಗೆಯಲ್ಲಿ ಕಾರ್ಮಿಕ ಮುಂಖಡರಾದ ಜೋತಿಬಸು, ಹರಿಕಿಷನ್‌ಸಿಂಗ್ ಸುರ್ಜಿತ್, ಲಕ್ಷ್ಮಿಸೆಹಗಲ್, ಲೆನಿನ್, ಕಾರ್ಲ್‌ಮಾರ್ಕ್ಸ್, ಎಂಗಲ್ಸ್, ಭಗತ್ ಸಿಂಗ್, ಇ.ಎಂ.ಎಸ್, ಬಿ.ಟಿ. ರಣದಿವೆ, ಪಿ.ರಾಮಚಂದ್ರರಾವ್ ಇವರ ಭಾವಚಿತ್ರಗಳನ್ನು ಹೊಂದಿದ ಕಟ್‌ಔಟ್‌ಗಳನ್ನು ಮೆರವಣಿಗೆ ಉದ್ದಕ್ಕೂ ಮೆರೆಸಲಾಯಿತು. ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ನಗರದ ಗಾಂಧಿ ಸರ್ಕಲ್‌ನಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಈ ಸಭೆಯನ್ನು ಉದ್ದೇಶಿಸಿ ಕಾಂ. ಎಸ್. ವೈ. ಗುರುಶಾಂತ್ ಯುವಜನ ಮುಖಂಡರು ಮಾತನಾಡಿದರು. ಮುಂದೆ ಬರುವ ಚುನಾವಣೆಯಲ್ಲಿ ಕೋಮುವಾದಿಗಳಿಗೆ ತಕ್ಕ ಪಾಠ ಕಲಿಸಿದರೆ ಈ ದಿನಾಚರಣೆಗೆ ಅರ್ಥ ಎಂದು ಅವರು ಹೇಳಿದರು. ಸಿಐಟಿಯು ನ ಅಧ್ಯಕ್ಷರಾದ ಎಂ. ಬಿ. ನಾಡಗೌಡ ಹೊಸ ಆರ್ಥಿಕ ನೀತಿಯಿಂದ ಗಂಗಾವತಿ ಸಣ್ಣ ಉದ್ದಿಮೆಗಳು ಮುಚ್ಚುತ್ತಿವೆ, ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನದಲ್ಲಿ ತೀವ್ರ ಹೋರಾಟ - ಮಾಡಬೇಕೆಂದು ಕರೆನೀಡಿದರು ಕಾಂ. ಬಾಲಪ್ಪ ಮಾತನಾಡಿದರು. ಎ. ಹುಲಗಪ್ಪ ವಂದನಾರ್ಪಣೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ರೈಸ್ ಮಿಲ್ ಕಾರ್ಮಿಕರು, ಬಬಾರಹಮಾಲಿ ವೈರ ಹೌಸ್ ಹಮಾಲಿ, ಎಫ್‌ಸಿಐ ಹಮಾಲಿ, ವಿಆರ್‌ಎಲ್ ಹಮಾಲಿ, ಕಾರ್ಮಿಕರು ಪಾಲ್ಗೊಂಡಿದ್ದರು. ಇವರಲ್ಲದೆ ಖಾಲಿಚೀಲ ರಿಪೇರಿ ಕಾರ್ಮಿಕರು ಹಾಗೂ ಅಂಗನವಾಡಿ ನೌಕರರು ಪಾಲ್ಗೊಂಡಿದ್ದರು ಬಂಡಿಹಮಾಲರು ಭಾಗವಹಿಸಿದ್ದು ಈ ಸಾರಿ ಕಾರ್ಮಿಕರ ದಿನಾಚರಣೆಯ ಒಂದು ವಿಶೇಷ

ಗಂಗಾವತಿಯಲ್ಲಿ



ಶ್ರೀನಿವಾಸಪುರ : ಸಿಐಟಿಯು ನೇತೃತ್ವದಲ್ಲಿ ಶ್ರೀನಿವಾಸಪುರ ಪಟ್ಟಣದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ ನಡೆಯಿತು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಕಾರ್ಮಿಕರು ಶೋಷಣೆಯ ವಿರುದ್ಧ ಹೋರಾಡಿ "ಕಾರ್ಮಿಕ ಐಕ್ಯತೆ ಚಿರಾಯುವಾಗಲಿ" ಮುಂತಾದ ಘೋಷಣೆಗಳನ್ನು ಕೂಗುತ್ತಾ ತಾಲ್ಲೂಕು ಕಛೇರಿ ಆವರಣದಲ್ಲಿ ಬಹಿರಂಗ ಸಭೆಯನ್ನು ನಡೆಸಿದರು. ಸಭೆಗೆ ಮುನ್ನ ಕಾರ್ಮಿಕರ ಹೋರಾಟದ ಸಂಕೇತವಾದ ಕೆಂಪು ಬಾವುಟವನ್ನು ಅಂಗನವಾಡಿ ನೌಕರರ ಸಂಘದ ಮುಖಂಡರಾದ ಎನ್. ಭಾಗ್ಯಲಕ್ಷ್ಮಮ್ಮ ಆರೋಹಣ ಮಾಡಿದರು. ಸಭೆಯಲ್ಲಿ ಮುಖ್ಯ ಅಥಿತಿಗಳಾಗಿ ಮಾತಾಡಿದ ಪ್ರಗತಿಪರ ಶಿಕ್ಷಕ ಹಾಗೂ ಸಾಹಿತಿ ಸಾ. ರಘುನಾಥ್ ಪ.ಬಂಗಾಳ ಮತ್ತು ಕೇರಳದ ರೈತ ಕಾರ್ಮಿಕರು ತಮ್ಮದೇ ಆದಂತಹ ಸರ್ಕಾರವನ್ನು ರಚಿಸಿಕೊಂಡು ಶೋಷಣೆಯಿಂದ ವಿಮುಕ್ತಿ ಹೊಂದುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ರೈತ ಕಾರ್ಮಿಕ ಜಿಲ್ಲಾ ಮುಖಂಡರಾದ ಕಾಂ. ಪಿ.ಆರ್. ಸೂರಿ, ಕೃಷಿ ಕೂಲಿ ಕಾರ್ಮಿಕ ಮುಖಂಡರಾದ ಬಿ.ಆಂಜನೇಯಲು ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಎನ್.ವೀರಪ್ಪರೆಡ್ಡಿ ವಹಿಸಿದ್ದರು. ರಾಜ್ಯ ಅಂಗನವಾಡಿ ನೌಕರರ ಮುಖಂಡರಾದ ವಿ.ನಾಗಪ್ಪ ಸ್ವಾಗತಿಸಿದರು ಗ್ರಾಮ ಪಂಚಾಯಿತಿ ನೌಕರರ ಸಂಘದ ಶಂಕರಪ್ಪ ವಂದಿಸಿದರು.



ಪುರಸಭೆಯ ಅಧ್ಯಕ್ಷರಾದ ಕಾಮ್ರೇಡ್ ವಿ. ನರಸಿಂಹ ವಹಿಸಿದರು. ಆರಂಭದಲ್ಲಿ ಕಾಂ. ಚಂದ್ರಶೇಖರ್. ವಿ. ಇವರು ಸ್ವಾಗತಿಸಿದರು

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಉಡುಪಿ ವಿಭಾಗದ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಕಾಂ. ಎ.ಎಸ್ ಆಚಾರ್ಯರವರು ಮಾತನಾಡುತ್ತಾ ಮೇ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಮಾನವತೆಯನ್ನು ಕಾಡುತ್ತಿರುವ ಭೀಕರ ಸಮಸ್ಯೆಗಳಿಗೆ ಸಮಾಜವಾದವೇ ಅಂತಿಮ ಪರಿಹಾರ ಎಂಬುದು ದಿನದಿಂದ ದಿನಕ್ಕೆ ಹೆಚ್ಚು ಸ್ಪಷ್ಟವಾಗುತ್ತಿದೆ ಎಂದು ವಿವರಿಸಿ, ಭಾರತ ದೇಶದಲ್ಲಿ ಕೂಡ ಇತ್ತೀಚಿಗೆ ಎಡಪ್ರಜಾಸತ್ತಾತ್ಮಕ ಶಕ್ತಿಗಳ ಹಾಗೂ ಜಾತ್ಯತೀತ ಶಕ್ತಿಗಳ ಐಕ್ಯತೆ ಬೆಳೆಯುತ್ತಿದ್ದು, ಮುಂದಿನ ಚುನಾವಣೆಯ ನಂತರ ಜಾತ್ಯತೀತ ಶಕ್ತಿಗಳ ನೇತೃತ್ವದಲ್ಲಿ ಸರಕಾರ ರಚಿಸಲಾಗುವುದು ಎಂದು ಅವರು ಹೇಳಿದರು.

ಸಿಐಟಿಯು ವಿನ ರಾಜ್ಯ ಕಾರ್ಯದರ್ಶಿಯವರಾದ ಕಾಂ. ಕೆ.ಶಂಕರ್ ಹಾಗೂ ಜಿಲ್ಲಾ ಸಿಐಟಿಯು ಮುಖಂಡರಾದ ಕಾಂ. ಸಿ. ನಾರಾಯಣನವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕುಂದಾಪುರ ಪುರಸಭಾ ಅಧ್ಯಕ್ಷರಾದ ಕಾಂ. ನರಸಿಂಹನವರು ಮಾತಾಡಿ ಕಾರ್ಮಿಕರು ಹಾಗೂ ಇತರ ದುಡಿಯುವ ಜನಸಾಮಾನ್ಯರು ಸಂಘಟನೆಯಾಗಿ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ನಿರಂತರ ಹೋರಾಟ ಮಾಡುವ ಹಾಗೂ ಜನಹಿತ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ಶ್ರಮಿಸಬೇಕೆಂದರು.

ಸಭೆಯ ಕೊನೆಗೆ ಪುರಸಭಾ ಸದಸ್ಯರಾದ ಕಾಂ. ಎಚ್. ನರಸಿಂಹನವರು ಮೆರವಣಿಗೆಯಲ್ಲಿ ಹಾಗೂ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ವಿಭಾಗದ ಜನರಿಗೂ ಅಭಿನಂದನೆ ಸಲ್ಲಿಸಿದರು. ಸಭೆ ಕಾರ್ಯಕ್ರಮ್ಮದ ಬಳಿಕ ಡಿವೈಎಫ್‌ಐ ಕಾರ್ಯಕರ್ತರಿಂದ "ತುಕ್ರನ ಕನಸು" ಎಂಬ ನಾಟಕ ಪ್ರದರ್ಶನವಾಯಿತು.

ಕುಂದಾಪುರದಲ್ಲಿ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ



ಮೇ ದಿನಾಚರಣೆಯ ಅಂಗವಾಗಿ ಕುಂದಾಪುರದಲ್ಲಿ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಹೆಂಚು, ಬೀಡಿ, ಕೆಶ್ಯೂ, ಪ್ಯಾಡ್ ಫ್ಯಾಕ್ಟರಿಯ ಕಾರ್ಮಿಕರು, ಕೃಷಿ ಕೂಲಿಗಾರರು ಹಾಗೂ ಆಟೋರಿಕ್ಷಾ ಚಾಲಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದು, ಬ್ಯಾಂಡ್ ಮತ್ತು ವೇಷಗಳೊಂದಿಗೆ ಆಕರ್ಷಣೀಯವಾಗಿತ್ತು. ನಗರದಲ್ಲಿ ಅಲ್ಲಲ್ಲಿ ಕೆಂಪು ಪತಾಕೆ ಹಾಗೂ ಬ್ಯಾನರ್‌ಗಳಿಂದ ಅಲಂಕಾರವಾಗಿದ್ದು ಕೆಂಪು ಸಮವಸ್ತ್ರದಾರಿಗಳು ಮೆರವಣಿಗೆಯಲ್ಲಿ ಮುಂದಿದ್ದು ಸ್ಫೂರ್ತಿದಾಯಕ ಮೆರವಣಿಗೆಯಾಗಿತ್ತು. ಸಂಜೆ ಘಂಟೆ 5ಕ್ಕೆ ಸರಿಯಾಗಿ ಕುಂದಾಪುರ ಗಾಂಧಿ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕುಂದಾಪುರ

ಕಂಡ್ಲೂರು ಕಂಡ ಕೆಂಪು ದಿನ!....

ಕಂಡ್ಲೂರು- ಇದು ಕುಂದಾಪುರ ತಾಲೂಕಿನ ಒಂದು ಗ್ರಾಮ ಪಂಚಾಯಿತಿ ಕೇಂದ್ರ. ಸುತ್ತಮುತ್ತ ಪ್ರದೇಶಗಳಲ್ಲಿ ಹಲವು ಹೆಂಚಿನ ಕಾರ್ಖಾನೆಗಳಿವೆ. ಕಂಡ್ಲೂರು ಸೇರಿದಂತೆ ಅಕ್ಕ ಪಕ್ಕದ ಹಳ್ಳಿಗಳಲ್ಲಿ ಬೀಡಿ ಕಟ್ಟುವ ಹೆಂಗಳೆಯರಿದ್ದಾರೆ. ರೈತರು- ಕೃಷಿಕೂಲಿಕಾರರು ಇದ್ದಾರೆ. ಹೀಗೆ ಸಾವಿರಾರು ಸಂಖ್ಯೆಯ ದುಡಿಮೆಗಾರರು ಈ ಪ್ರದೇಶದಲ್ಲಿದ್ದಾರೆ.

ದುಡಿದುಣ್ಣುವ ಈ ಶ್ರಮಜೀವಿಗಳಿಗೆ 1999 ರ ಅಂತರ್ರಾಷ್ಟ್ರೀಯ ಕಾರ್ಮಿಕ ದಿನ ಒಂದು ಮರೆಯಲಾಗದ ಮೇ ದಿನವಾಯಿತು. ಜಗತ್ತಿನ ದುಡಿಯುವ ಜನರ ಸೌಹಾರ್ದದ ದಿನವನ್ನು ಮೊದಲ ಬಾರಿಗೆ ಆಚರಿಸಿದ್ದಕ್ಕಾಗಿ ಅಲ್ಲ. ಆದರೆ ತಮ್ಮ ಉರಲ್ಲೇ ಮೇ ದಿನವನ್ನು ವಿಜ್ರಂಭಣೆಯಿಂದ ಆಚರಿಸಿ ನಲಿದಿದ್ದಕ್ಕಾಗಿ.

ಸುಮಾರು ಹತ್ತು ಕಿ.ಮೀ ವರೆಗಿನ ದೂರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸಿ ತಾಲೂಕು ಕೇಂದ್ರವಾದ ಕುಂದಾಪುರದಲ್ಲಿ ನಡೆಯುವ ಮುಖ್ಯ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿದ್ದ ಈ ಪ್ರದೇಶದ ರೈತರು, ಕಾರ್ಮಿಕರು,

ಪುಟ 9 ನೋಡಿ

ಕಲಾವಿದರ ಮೇಲೆ ಕೋಮುವಾದಿಗಳಿಂದ ಭೀಕರ ಹಲ್ಲೆ

ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಚೇತನಗಳಲ್ಲಿ ಟಿಪ್ಪುವಿನ ಹೆಸರು ಆತನ ತ್ಯಾಗ, ಬಲಿದಾನಗಳಿಂದ ಚಿರಸ್ಥಾಯಿಯಾದದ್ದು. ಬ್ರಿಟಿಷರನ್ನು ಈ ದೇಶದಿಂದ ಒದ್ದೋಡಿಸಲು ತನ್ನ ಸರ್ವಸ್ವವನ್ನು, ಮಕ್ಕಳನ್ನು ಅಂತಿಮವಾಗಿ ಪ್ರಾಣವನ್ನೇ ಅರ್ಪಿಸಿದ ಮಹಾಯೋಧ ಟಿಪ್ಪು. ಮೇ 4, 1999, ಟಿಪ್ಪು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಪ್ರಾಣ ನೀಡಿದ 200ನೇ ವರ್ಷ. ಈ ಸಂದರ್ಭದಲ್ಲಿ ಆರ್‌ಎಸ್‌ಎಸ್, ವಿ.ಹೆಚ್.ಪಿ., ಭಜರಂಗದಳ ಮುಂತಾದ ಸಂಘ ಪರಿವಾರದ ಸಂಸ್ಥೆಗಳು ಟಿಪ್ಪುವನ್ನು ಒಬ್ಬ ಮತಾಂಧ, ಹಿಂದೂ ವಿರೋಧಿ ಎಂಬ ಅಪಪ್ರಚಾರ ನಡೆಸುತ್ತಿವೆ. ಹಾಗೂ ಟಿಪ್ಪು ದ್ವಿಶತಮಾನೋತ್ಸವವನ್ನು ವಿರೋಧಿಸುತ್ತಿವೆ. ಟಿಪ್ಪು ಒಬ್ಬ ಸ್ವಾತಂತ್ರ್ಯ ಪ್ರೇಮಿ ಹಾಗೂ ಜಾತ್ಯಾತೀತ ವ್ಯಕ್ತಿಯಾಗಿದ್ದನೆಂಬುದು ಇತಿಹಾಸದ ದಾಖಲೆಗಳಿಂದ ಸ್ಪಷ್ಟ. ಆದರೆ ಸಂಘ ಪರಿವಾರ ಇತಿಹಾಸವನ್ನು ತಿರುಚಲು ಹೊರಟಿದೆ.

ಟಿಪ್ಪು ದ್ವಿಶತಮಾನೋತ್ಸವದ ಅಂಗವಾಗಿ ವಿಚಾರ ವೇದಿಕೆ ಕರ್ನಾಟಕ (ವಿವೇಕ) ಹಾಗೂ 'ಸಮುದಾಯ' ಟಿಪ್ಪುವಿನ ಜನ್ಮಸ್ಥಳ ದೇವನಹಳ್ಳಿಯಿಂದ ಅವನು ಮರಣ ಹೊಂದಿದ ಶ್ರೀರಂಗ ಪಟ್ಟಣಕ್ಕೆ ಜಾಥಾವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಈ ಜಾಥಾದಲ್ಲಿ ಕೋಮು ಸಾಮರಸ್ಯ ಮೂಡಿಸುವ ಬೋಳುವಾರು ಮಹಮದ್ ಕುಂಞ ಅವರ 'ಕೇಸರಿ ಬಿಳಿ ಹಸಿರು' ಎಂಬ ಬೀದಿ ನಾಟಕ ಹಾಗೂ ಹಾಡಿನ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು.

ಮೇ 1, ಕಾರ್ಮಿಕ ದಿನಾಚರಣೆಯಂದು ಜಾಥಾ ಆನೇಕಲ್‌ನಲ್ಲಿ ಕಾರ್ಯಕ್ರಮ ನೀಡಲು ಹೋದಾಗ ಕಲಾವಿದರ ಮೇಲೆ ಬರ್ಬರ ರೀತಿಯಲ್ಲಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಲಾಯಿತು. ನಾಟಕ ಪ್ರದರ್ಶನ ನೀಡುವ ಮುಂಚೆಯೇ ಸುಮಾರು ಮೂವತ್ತು ಜನರಿದ್ದ ಗುಂಪೊಂದು ನಾಟಕ ತಂಡದ ನೇತೃತ್ವ ವಹಿಸಿದ್ದ ಸಮುದಾಯದ ಹಿರಿಯ ಕಲಾವಿದ ಹಾಗೂ ನಾಟಕ ಅಕಾಡೆಮಿಯ ಸದಸ್ಯ ಸಿ.ಕೆ.ಗುಂಡಣ್ಣನವರ ಮೇಲೆ ರೇಜರ್, ಮರದ ಪಟ್ಟಿಗಳು ಹಾಗೂ ಕಲ್ಲುಗಳಿಂದ ಭೀಕರವಾಗಿ ದಾಳಿ ಮಾಡಿತು. ಸ್ಥಳೀಯ ಬಿಜೆಪಿಯ ಕಾರ್ಪೋರೇಟರ್ ನಾಗರಾಜ್ ಅವರ ಕುಮ್ಮಕ್ಕಿನಿಂದ ಈ ದಾಳಿ ನಡೆಯಿತು. ಈ ಧಾಳಿಯಿಂದ ಗುಂಡಣ್ಣ ತೀವ್ರವಾಗಿ ಗಾಯಗೊಂಡರೆ ಕರ್ನಾಟಕ ಪ್ರಾಂತ ರೈತ ಸಂಘದ ನಾಯಕರಾದ ಶ್ಯಾಮಣ್ಣ ರೆಡ್ಡಿ ಅವರ ಕೈ ಮುರಿಯಿತು, ಶಿವರಾಮರೆಡ್ಡಿ ಅವರೂ ಗಾಯಗೊಂಡರು. ಕಲಾವಿದರಾದ ಯಾದವ್, ಬೈಲಪ್ಪ, ಹರೀಶ್ ಹಾಗೂ ಜಾಥಾದ ವಾಹನ ಚಾಲಕರಾದ ಶಂಕರ್ ಈ ದಾಳಿಯಿಂದ ಗಾಯಗೊಂಡಿದ್ದಾರೆ.

ಇದೇ ಮತೀಯ ಶಕ್ತಿಗಳು ಅಂದು ಬೆಳಿಗ್ಗೆ ಆನೇಕಲ್‌ನಲ್ಲಿ ಸಿಐಟಿಯು ಕಾರ್ಮಿಕರು ನಡೆಸುತ್ತಿದ್ದ ಮೇ ದಿನಾಚರಣೆಯ ವೇಳೆಯಲ್ಲಿ ದಾಳಿ ಮಾಡಿ ಸಿಐಟಿಯು ಮುಖಂಡರಾದ ಮೀನಾಕ್ಷಿ ಸುಂದರಂ ಅವರ ಮೇಲೂ ಹಲ್ಲೆ ಮಾಡಿರುವುದು ಈ ದಾಳಿಗಳು ಒಂದು ವ್ಯವಸ್ಥಿತ ಯೋಜನೆ ಎನ್ನುವುದು ತಿಳಿದುಬರುತ್ತದೆ. ಈ ದಾಳಿಗಳನ್ನು ನಡೆಸಲು ಈ ಮತೀಯ ಶಕ್ತಿಗಳು ಕಾರ್ಮಿಕ ದಿನವಾದ ಮೇ 1 ನ್ನು ಆಯ್ಕೆ ಮಾಡಿಕೊಂಡಿರುವುದು ರೈತ-ಕಾರ್ಮಿಕರ ಬಗ್ಗೆ ಅವರಿಗಿರುವ ಅಸಹನೆಯನ್ನು ತೋರಿಸುತ್ತದೆ.


'ಸಮುದಾಯ' ದ ನಾಟಕದ ಒಂದು ದೃಶ್ಯ

'ನಾಥೂರಾಮ ಗೋಡ್ಸೆ ಬೋಲ್ತಾಯ್' ನಾಟಕವನ್ನು ಪ್ರಗತಿಪರ ಶಕ್ತಿಗಳು ಅಹಿಂಸಾತ್ಮಕ ರೀತಿಯಲ್ಲಿ ಶಾಂತವಾಗಿ ಪ್ರತಿಭಟಿಸುತ್ತಿದ್ದಾಗ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಹುಯಿಲೆಬ್ಬಿಸಿದ ಈ ಸಂಘ ಪರಿವಾರದ ಅಂಗ ಸಂಸ್ಥೆಗಳು ಆ ನಂತರದ ದಿನಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ತೀವ್ರವಾಗಿ ದಾಳಿ ನಡೆಸುತ್ತಿರುವುದು ಖಂಡನಾರ್ಹ. ಫೈರ್ ಸಿನಿಮಾದ ಮೇಲೆ ಧಾಳಿ, ವ್ಯಂಗ್ಯ ಚಿತ್ರ ಕಲಾವಿದ ಇರ್ಫಾನ್ ಹುಸೇನ್‌ರ ಕೊಲೆ ಹಾಗೂ ಈಗ ಆನೇಕಲ್‌ನಲ್ಲಿ 'ಸಮುದಾಯ' ಕಲಾವಿದರ ಮೇಲಿನ ಧಾಳಿ ಬಿಜೆಪಿ ಹಾಗೂ ಸಂಘ ಪರಿವಾರದವರ ದಾಳಿಕೋರ ಮನೋಭಾವವನ್ನು ಪ್ರದರ್ಶಿಸುತ್ತದೆ. ಅಧಿಕಾರ ಕೈಯಿಂದ ಜಾರಿದ ಅಸಹನೆಯಿಂದ ಮುಂದಿನ ದಿನಗಳಲ್ಲಿ ಈ ರೀತಿಯ ದಾಳಿಗಳು ಇನ್ನೂ ಹೆಚ್ಚಾಗುವ ಸಾಧ್ಯತೆಗಳಿವೆ. ಈ ದೇಶದ ದೇಶಪ್ರೇಮಿ ಜನ ಈ ಧಾಳಿಗಳನ್ನು ಎದುರಿಸಿ ಬಿಜೆಪಿ ಹಾಗೂ ಸಂಘ ಪರಿವಾರಕ್ಕೆ ಬುದ್ಧಿ ಕಲಿಸಲು ಸಿದ್ಧರಿದ್ದಾರೆ.

ಕಲಾವಿದರ ಮೇಲಿನ ಹಲ್ಲೆಗೆ ಖಂಡನೆ

ಬಿಜೆಪಿ ಮತ್ತು ಸಂಘ ಪರಿವಾರದ ಶಕ್ತಿಗಳು ಆನೇಕಲ್‌ನಲ್ಲಿ ವಿವೇಕ ಹಾಗೂ ಸಮುದಾಯದ ಜಾಥಾದ ಕಲಾವಿದರ ಮೇಲೆ ನಡೆದ ಹಲ್ಲೆಯನ್ನು ನಾಡಿನ ಪ್ರಗತಿಪರ ಶಕ್ತಿಗಳು ತೀವ್ರವಾಗಿ ಖಂಡಿಸಿವೆ.

ಮೇ ೨ ರಂದು ಬೆಂಗಳೂರಿನಲ್ಲಿ ಸಾಹಿತಿ, ಕಲಾವಿದರು, ಪ್ರಗತಿಪರ ಶಕ್ತಿಗಳು ಸಭೆ ಸೇರಿ ಈ ಹಲ್ಲೆಯನ್ನು ಖಂಡಿಸಿವೆ. ರವೀಂದ್ರ ಕಲಾಕ್ಷೇತ್ರದ ಮುಂಭಾಗದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಖ್ಯಾತ ನಿರ್ದೇಶಕ ಎಂ.ಎಸ್.ಸತ್ಯು, ಸಾಹಿತಿಗಳಾದ ಕೆ.ಮರುಳಸಿದ್ದಪ್ಪ, ಡಾ. ಜಿ.ರಾಮಕೃಷ್ಣ ಪತ್ರಕರ್ತರಾದ ರಂಜಾನ್ ದರ್ಗ, ಡಾ. ವಿಜಯಮ್ಮ, ನಿಡುಮಾಮಿಡಿ ಸ್ವಾಮೀಜಿ, ಎಸ್‌ಎಫ್‌ಐನ ಉಮೇಶ್, ರಾಮಕೃಷ್ಣ ಡಿವೈಎಫ್‌ಐನ ಗುರುಶಾಂತ್, ರೈತ ಸಂಘದ ಶಾಮಣ್ಣ ರೆಡ್ಡಿ, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ ಮುಂತಾದವರು ಭಾಗವಹಿಸಿದ್ದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಎಂ.ಎಸ್.ಸತ್ಯು ಈ ಹಲ್ಲೆಯನ್ನು ತೀವ್ರವಾಗಿ ಖಂಡಿಸಿ ಪ್ರಗತಿಪರ ಶಕ್ತಿಗಳ ಮೇಲೆ, ಸಂಘ ಪರಿವಾರಗಳು ಮಾಡುತ್ತಿರುವ ದಾಳಿಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಪ್ರಗತಿಪರ ಶಕ್ತಿಗಳು ಮತ್ತಷ್ಟು ಕ್ರಿಯಾತ್ಮಕವಾಗಿ ಇದರ ವಿರುದ್ಧ ನಿಂತು ಪ್ರತಿಭಟಿಸಬೇಕಾಗಿದೆ ಎಂದರು. ನಂತರ ಮಾತನಾಡಿದ ನಿಡುಮಾಮಿಡಿ ಸ್ವಾಮೀಜಿ ಸಂಘ ಪರಿವಾರಗಳ ಕೊಳಕುತನವನ್ನು ಬಹಿರಂಗ ಪಡಿಸಿದರು. ಕೋಮುಗಳ ನಡುವೆ ದ್ವೇಷ ಬಿತ್ತಲು ಸಂಘ ಪರಿವಾರವು ಈ ನಾಡಿನ ಹಲವು ಮಹಾತ್ಮರೂ, ಗಣ್ಯರು ಹೇಳಿದ್ದಾರೆನ್ನಲಾದ ಹಲವು ಸುಳ್ಳು ಹೇಳಿಕೆಗಳನ್ನು ಬಳಸಿಕೊಳ್ಳುತ್ತಿರುವ ಅಸಹ್ಯಕಾರಿ ತಂತ್ರವನ್ನು ಟೀಕಿಸಿದರು.

ನಂತರ ರವೀಂದ್ರ ಕಲಾಕ್ಷೇತ್ರದಿಂದ ಮೆರವಣಿಗೆಯಲ್ಲಿ ಮುಖ್ಯಮಂತ್ರಿಗಳ ನಿವಾಸಕ್ಕೆ ಹೋಗಿ ಹಲ್ಲೆ ನಡೆಸಿದ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸುವ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಲಾಯಿತು.

ಮೈಸೂರಿನಲ್ಲಿ: ಮೈಸೂರಿನಲ್ಲಿ ಪ್ರಗತಿಪರ ಶಕ್ತಿಗಳು ಮೇ ೪ ರಂದು ಇಡೀ ದಿನ ಧರಣಿ ನಡೆಸಿ ಈ ಘಟನೆಯನ್ನು ಖಂಡಿಸಿ ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳಲು ಆಗ್ರಹಿಸಿವೆ. ಈ ಧರಣಿಯಲ್ಲಿ ರಂಗಾಯಣದ ನಿರ್ದೇಶಕ ಬಸವಲಿಂಗಯ್ಯ, ಪಿ.ಗಂಗಾಧರ ಸ್ವಾಮಿ, ಸಮುದಾಯದ ರಮೇಶ್, ಸಾಹಿತಿಗಳಾದ ಲಿಂಗದೇವರು ಹಳೇಮನೆ, ಹೇಮಾ ಪಟ್ಟಣ ಶೆಟ್ಟಿ, ಅಲ್ಲಮ ಪ್ರಭು ಬೆಟ್ಟದೂರ, ಕಾಂ.ಮೋಹನ್ ಕುಮಾರ್ ಮುಂತಾದವರು ಈ ಧರಣಿಯಲ್ಲಿ ಭಾಗವಹಿಸಿದ್ದರು. ಸಂಜೆ ಹಲ್ಲೆಗೊಳಗಾದ ಕಲಾವಿದರ ತಂಡ ಬೀದಿ ನಾಟಕ ಪ್ರದರ್ಶಿಸಿತು. ನಾಟಕ ಅಕಾಡೆಮಿಯ ಅಧ್ಯಕ್ಷ, ವಿವೇಕದ ಸಂಚಾಲಕ ಸಿ.ಜಿ.ಕೃಷ್ಣಸ್ವಾಮಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಕಲಾವಿದರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿದರು.

ಇದೇ ರೀತಿಯಲ್ಲಿ ಕರ್ನಾಟಕವಷ್ಟೇ ಅಲ್ಲ ದೇಶಾದ್ಯಂತ ಆನೇಕಲ್‌ನಲ್ಲಿ ಕಲಾವಿದರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ವರದಿಗಳು ಬರುತ್ತಿವೆ.

ಧಾರವಾಡದಲ್ಲಿ: ಸಿ.ಕೆ.ಗುಂಡಣ್ಣನವರ ಮೇಲೆ ಕೆಲವು ಕೋಮುವಾದಿ ಕಿಡಿಗೇಡಿಗಳು ಪೂರ್ವ ನಿರ್ಧರಿತ ತಯಾರಿಕೆಯಿಂದ ಮರಣಾಂತಿಕ ಹಲ್ಲೆಯ ಮೂಲಕ ಜನರಲ್ಲಿ ಶಾಂತಿ ಸೌಹಾರ್ದತೆಯ ಸಂದೇಶ ಸಾರುವ ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿ ಒಡ್ಡಿದ್ದಾರೆ ಎಂದು ಧಾರವಾಡದ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಸಹಿ ಮಾಡಿದ ಮನವಿ

"ಕೆಲ ಕಾಲದಿಂದ ಕೋಮುವಾದಿಗಳು ಖ್ಯಾತ ಚಿತ್ರಗಾರ ಹುಸೇನರ ಚಿತ್ರಕಲಾ ಪ್ರದರ್ಶನಗಳನ್ನು, ಫೈರ್ ಚಲನಚಿತ್ರ ಪ್ರದರ್ಶನವನ್ನು, ಭಾರತ -ಪಾಕಿಸ್ತಾನ ಕ್ರಿಕೆಟನ್ನು, ಪಾಕಿಸ್ತಾನದ ಹಾಡುಗಾರರ ಕಾರ್ಯಕ್ರಮಗಳನ್ನು ವಿರೋಧಿಸಿ ದಾಂಧಲೆ ನಡೆಸಿರುತ್ತಾರೆ. ಆನೇಕಲ್ಲಿನಲ್ಲಿ ಕಲಾವಿದ ಗುಂಡಣ್ಣ ಅವರ ಮೇಲೆ ನಡೆದ ಧಾಳಿಯು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿ ಆಗಿದೆ. ಜಾಥಾದ ಅಂಗವಾಗಿ, ಧಾರವಾಡದ ವಿವೇಕ ತಂಡದವರು ಏಪ್ರಿಲ್ ೨೪ ರ ಸಂಜೆ ಸವದತ್ತಿಯಲ್ಲಿ ಇದೇ ನಾಟಕದ ಪ್ರದರ್ಶನ ಸಿದ್ಧತೆಯಲ್ಲಿದ್ದಾಗ ಜಾತಾ ಪ್ರಚಾರ ಸಾಹಿತ್ಯ ಮಾರಾಟ ಮಾಡುತ್ತಿದ್ದ ವಿವೇಕದ ರಾಜ್ಯ ಚಾಲನಾಸಮಿತಿ ಸದಸ್ಯರೂ, ಸಮುದಾಯದ ರಾಜ್ಯ ಉಪಾಧ್ಯಕ್ಷರೂ ಆದ ಸಿ.ಆರ್.ಭಟ್ ಅವರ ಮೇಲೆ ಕೆಲವು ಕೋಮುವಾದಿ ಯುವಕರು ಹಲ್ಲೆ ನಡೆಸಲು ಪ್ರಯತ್ನಿಸಿ ಅವರ ಟೇಬಲ್ ಕುರ್ಚಿ ಎಳೆದುಕೊಂಡರು. ಆದರೆ ತಂಡ ಧೈರ್ಯದಿಂದ ಬಿದಿ ನಾಟಕದ ಯಶಸ್ವೀ ಪ್ರದರ್ಶನ ನೀಡಿತು. ಕಾರಣ, ಈ ದುರ್ಘಟನೆಗಳನ್ನು ಹುಬ್ಬಳ್ಳಿ-ಧಾರವಾಡದ ವಿವಿಧ ಸಾಂಸ್ಕೃತಿಕ ಹಾಗೂ ಸಾಮೂಹಿಕ ಸಂಘಟನೆಗಳು ದಾರವಾಡದ ವಿದ್ಯಾವರ್ಧಕ ಸಂಘದ ಆವರಣದಲ್ಲಿ ನಡೆಸಿದ ರ್‍ಯಾಲಿಯಲ್ಲಿ ತೀವ್ರವಾಗಿ ಖಂಡಿಸಿವೆ. ಗುಂಡಣ್ಣನವರ ಮೇಲೆ ಹಲ್ಲೆ ನಡೆಸಿದ ಅಪರಾಧಿಗಳನ್ನು ಕೂಡಲೇ ದಸ್ತಗಿರಿ ಮಾಡಿ ವಿಚಾರಣೆ ನಡೆಸಿ, ಕಠಿಣ ಶಿಕ್ಷೆ ವಿಧಿಸಬೇಕೆಂದು ರ್‍ಯಾಲಿಯಲ್ಲಿ ಮುಖ್ಯಮಂತ್ರಿಗಳಾದ ತಮ್ಮನ್ನು ಒತ್ತಾಯಿಸಲಾಗಿದೆ. ಗಾಯಗೊಂಡ ಗುಂಡಣ್ಣ ಅವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಹಾಗೂ ಪರಿಹಾರ ಸರಕಾರ ಒದಗಿಸಬೇಕೆಂದು ರ್‍ಯಾಲಿ ಒತ್ತಾಯಿಸಿದೆ" ಮುಖ್ಯಮಂತ್ರಿಗಳಿಗೆ ಧಾರವಾಡ ಜಿಲ್ಲಾಧಿಕಾರಿಗಳ ಮೂಲಕ ಅರ್ಪಿಸಿದ ಈ ಮನವಿಯಲ್ಲಿ ಗಮನ ಸೆಳೆಯಲಾಗಿದೆ. ○

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಲಾವಿದರ ಪ್ರತಿಭಟನೆ



ಆನೇಕಲ್ ಘಟನೆ ಹಾಗೂ ಮಾಧ್ಯಮಗಳು

ಆನೇಕಲ್‌ನಲ್ಲಿ ಸಮುದಾಯದ ಕಲಾವಿದರ ಮೇಲೆ ನಡೆದ ಹಲ್ಲೆಯನ್ನು ಬಹುತೇಕ ಎಲ್ಲಾ ಪತ್ರಿಕೆಗಳೂ ತೀವ್ರವಾಗಿ ಖಂಡಿಸಿದವು. ವಿಶೇಷವಾಗಿ ದೃಶ್ಯಮಾಧ್ಯಮಗಳಾದ ಉದಯ ಟಿ.ವಿ. ರಾತ್ರಿಯೇ ತನ್ನ ಸುದ್ದಿ ಪ್ರಸಾರದಲ್ಲಿ ಈ ಹಲ್ಲೆಯ ಸುದ್ದಿಯನ್ನು ಪ್ರಕಟಿಸಿತು. ನಂತರ ಉದಯ ಟಿ.ವಿ. ಹಾಗೂ ಎನ್.ಡಿ.ಟಿ.ವಿ. ಹಲ್ಲೆಗೊಳಗಾದ ಕಲಾವಿದರನ್ನು ಸಂದರ್ಶಿಸಿ ಅದನ್ನು ಪ್ರಸಾರ ಮಾಡಿದವು. ಜನವಾಹಿನಿ ಹಾಗೂ ಪ್ರಜಾವಾಣಿ ಪತ್ರಿಕೆಗಳು ಈ ಘಟನೆಯ ಬಗ್ಗೆ ಸಂಪಾದಕೀಯ ಬರೆದು ಘಟನೆಯನ್ನು ಖಂಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದವು. ಆದರೆ ಸಾಹಿತಿ ವೈ.ಎನ್.ಕೆ. ಸಂಪಾದಕರಾಗಿರುವ 'ಕನ್ನಡ ಪ್ರಭ' ಈ ಘಟನೆಯ ಬಗ್ಗೆ ಒಂದೂ ಸಾಲು ಬರೆಯಲಿಲ್ಲ.


ಕರ್ನಾಟಕವನ್ನು ಕೋಮುದಳ್ಳುರಿಗೆ ತಳ್ಳಿ ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಮತಾಂಧ ಶಕ್ತಿಗಳು ಸುರತ್ಕಲ್ ಗಲಭೆ, ಬಾಬಬುಡನ್‌ಗಿರಿ ಬೆಂಗಳೂರಿನಲ್ಲಿ ಮಣ್ಣಿನ ದಿಣ್ಣೆ, ಕೊಡಗು...ಹೀಗೆ, ಹಲವಾರು ವಿವಾದಿತ ಘಟನೆಗಳನ್ನು ನಿರ್ಮಿಸಿವೆ. ಜನರ ಮನಸ್ಸನ್ನು ಹಿಂದೂ -ಮುಸ್ಲಿಂ, ಹಿಂದೂ -ಕ್ರಿಶ್ಚಿಯನ್ ಎಂದು ಒಡೆಯುವ ಹುನ್ನಾರಗಳನ್ನು ಈ ಶಕ್ತಿಗಳು ನಡೆಸಿವೆ. ಈ ಸಾಲಿಗೆ ಈಗ ಟಿಪ್ಪುವನ್ನು ಸೇರಿಸಲಾಗಿದೆ. ಟಿಪ್ಪು ದ್ವಿಶತಮಾನೋತ್ಸವವನ್ನು ಆದ್ದರಿಂದಲೇ ತೀವ್ರವಾಗಿ ವಿರೋಧಿಸಲಾಗುತ್ತಿದೆ. ಟಿಪ್ಪುವನ್ನು ಒಬ್ಬ ಮತಾಂಧ ಮುಸ್ಲಿಂ ಆಡಳಿತಗಾರನೆಂದು ಆರೋಪಿಸುವ ಸಂಘ ಪರಿವಾರದ ಪ್ರಯತ್ನಗಳನ್ನು ರಾಜ್ಯದ ಸೌಹಾರ್ದಪ್ರಿಯ ಜನತೆ ಎಚ್ಚರಿಕೆಯಿಂದ ನೋಡುವ ಅಗತ್ಯವಿದೆ.

ಮೇ 4, 1999ಕ್ಕೆ ಟಿಪ್ಪು ಮಡಿದು 200 ವರ್ಷಗಳಾಗಿವೆ. ಭಾರತದ ಚರಿತ್ರೆಯಲ್ಲಿ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಹೋರಾಟ ಮಾಡಿದವರಲ್ಲೆ ಅತ್ಯಂತ ಪ್ರಮುಖನಾದ ಟಿಪ್ಪುವನ್ನು ಒಬ್ಬ ಮತಾಂಧನೆಂದು ಮಸಿ ಬಳಿಯುವ ಹುನ್ನಾರವನ್ನು ಕೋಮುವಾದಿ ಶಕ್ತಿಗಳು ನಡೆಸಿದ್ದಾರೆ.

ಟಿಪ್ಪು ಎಂತಹ ಆಡಳಿತಗಾರನಾಗಿದ್ದ? ಟಿಪ್ಪು ಒಬ್ಬ ಜನಪರ, ಗಣತಂತ್ರವಾದಿ, ಸಮಾಜವಾದಿ ಮತ್ತು ಆಧುನಿಕತೆಯ ಅಂಶಗಳನ್ನು ಒಳಗೊಂಡ ಆಡಳಿತಗಾರನಾಗಿದ್ದ ಎಂಬುದು ಒಂದು ಕಡೆಯಾದರೆ ಮತ್ತೊಂದು ಕಡೆ ಅವನೊಬ್ಬ ಮತಾಂಧ, ಕ್ರೂರಿ ಇತ್ಯಾದಿಗಳಿಂದ ಅವನನ್ನು ಕರೆಯುವ ಪ್ರಯತ್ನ ನಡೆದಿದೆ.

ಇಂಗ್ಲೀಷರ ವಿರುದ್ಧ ಯುದ್ಧದಿಂದಲೇ..........

ಭಾರತ ಭೂಖಂಡವನ್ನು ಸಂಪೂರ್ಣವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು, ಇಲ್ಲಿ ರಾಜ-ರಾಜರ ನಡುವೆ ಅಂತರ್ಗತವಾಗಿದ್ದ ಕಿತ್ತಾಟದ ಲಾಭ ಮಾಡಿಕೊಳ್ಳಲು ಒಡೆದು ಆಳುವ ನೀತಿಗಳನ್ನು ಅನುಸರಿಸುತ್ತಿದ್ದ, ಅದಕ್ಕಾಗಿ ಎಲ್ಲಾ ರೀತಿಯ ಪಿತೂರಿಗಳನ್ನು ಬ್ರಿಟಿಷರು ನಡೆಸುತ್ತಿದ್ದ ಕಾಲಘಟ್ಟದಲ್ಲಿ ಟಿಪ್ಪು ಆಡಳಿತ ಮಾಡಿದ್ದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಟಿಪ್ಪುವಿನ ಆಡಳಿತ ಮತ್ತು ಧಾರ್ಮಿಕ ನೀತಿಗಳ ಬಗ್ಗೆ ತಿಳಿದುಕೊಳ್ಳಬೇಕಾಗಿದೆ.



ಲಭ್ಯ ದಾಖಲೆಗಳ ಪ್ರಕಾರ 156 ಹಿಂದೂ ದೇವಾಲಯಗಳಿಗೆ ಟಿಪ್ಪು ದಾನ-ದತ್ತಿಗಳನ್ನು ನೀಡಿದ ಬಗ್ಗೆ ದಾಖಲೆಗಳಿವೆ. ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದಲ್ಲಿ ಹಸಿರು ಬಣ್ಣದ ಅಂಗವೊಂದನ್ನು ಪ್ರತಿಷ್ಠಾಪನೆ ಮಾಡಿಸಿದ. ಇದೇ ಕಾರಣಕ್ಕೆ ನಂಜುಂಡೇಶ್ವರನನ್ನು "ಹಕೀಮ ನಂಜುಂಡ" ಎಂದು ಕರೆಯಲಾಗುತ್ತಿತ್ತು. ಹೈದರಾಲಿ ಕಾಲದಲ್ಲಿ ಕಂಚಿಯಲ್ಲಿ ಅಸ್ತಿಭಾರ ಹಾಕಲಾಗಿದ್ದ ಗೋಪುರ ದೇವಾಲಯದ ನಿರ್ಮಾಣ ಕಾರ್ಯವನ್ನು ಟಿಪ್ಪು ಹತ್ತು ಸಾವಿರ ಹೊನ್ನುಗಳನ್ನು ನೀಡಿ ಪೂರ್ಣಗೊಳಿಸಿದ ದಾಖಲೆಗಳಿವೆ.

ಟಿಪ್ಪುವಿನ ಆಡಳಿತಾವಧಿಯನ್ನು ಖ್ಯಾತ ಇತಿಹಾಸತಜ್ಞರಾದ ಪ್ರೊ. ಬಿ. ಷೇಕ್‌ಅಲಿಯವರು, ಇಂಗ್ಲೀಷರ ವಿರುದ್ಧದ ಯುದ್ಧದಿಂದಲೇ ಪ್ರಾರಂಭವಾಗಿ ಅವರ ವಿರುದ್ಧದ ಯುದ್ಧದಲ್ಲೇ ಕೊನೆಯಾಗಿದೆ" ಎಂದು ಹೇಳಿದ್ದಾರೆ. ಬ್ರಿಟಿಷ್ ವಸಾಹತುವಾದದ ವಿರುದ್ಧದ ಒಟ್ಟಾರೆ ಹೋರಾಟದ ಹಿನ್ನೆಲೆಯಲ್ಲಿ ಇದು ಮಹತ್ವದ್ದೆಂದು ಗಮನಿಸಬೇಕಾಗಿದೆ.

1750 ನವೆಂಬರ್ 20 ರಂದು ದೇವನಹಳ್ಳಿಯಲ್ಲಿ ಹುಟ್ಟಿದ ಟಿಪ್ಪು, ತನ್ನ ಬಾಲ್ಯದಲ್ಲಿ ಅಸಾಮಾನ್ಯವಾಗಿದ್ದನು ಮತ್ತು ವಿವಿಧ ಭಾಷೆಗಳಲ್ಲಿ, ಯುದ್ಧ ಕಲೆಗಳಲ್ಲಿ ವಿಶೇಷ ತರಬೇತಿಯನ್ನು ಪಡೆದಿದ್ದನು. 1780 ರಲ್ಲಿ ನಡೆದ ಪುಲಿಯೂರು ಯುದ್ಧದಲ್ಲಿ ತಂದೆ ಹೈದರ್‌ನೊಂದಿಗೆ ಸೇರಿಕೊಂಡು ಬ್ರಿಟಿಷ್ ಸೈನ್ಯದ ಕರ್ನಲ್ ಬೈಲಿಯನ್ನು ಸೋಲಿಸಿದ. 1782 ಡಿಸೆಂಬರ್‌ನಲ್ಲಿ ಪಾಂಡಿಚೇರಿ ಬಳಿ ಕರ್ನಲ್ ಬ್ರೈತ್‌ವೈಟ್‌ನನ್ನು ಸೋಲಿಸಿದ. ಹೈದರಾಲಿಯು ಚಿತ್ತೂರಿನ ಬಳಿ ಬ್ರಿಟಿಷರ ವಿರುದ್ಧ ಹೋರಾಡುತ್ತಲೇ ಸಾವನಪ್ಪಿದ ನಂತರ ಟಿಪ್ಪು ತಾನೇ ಅಧಿಕಾರಕ್ಕೆ ಬಂದ. ನಂತರ ತಾನು ಸಾಯುವವರೆಗೂ ಬ್ರಿಟಿಷರ ವಿರುದ್ಧದ ಹೋರಾಟ ನಡೆದೇ ಇತ್ತು.

ಬ್ರಿಟಿಷರಿಗೆ ಫ್ರೆಂಚರು ವೈರಿಗಳು ಎಂದು ತಿಳಿದು ಅವರೊಡನೆ ಸ್ನೇಹ ಬೆಳೆಸಿದ. ಜೊತೆಗೆ ಸಮಾನತೆ, ಸ್ವಾತಂತ್ರ ದಂತಹ ಘೋಷಣೆಗಳನ್ನು ಹೊತ್ತ ಫ್ರೆಂಚ್ ಕ್ರಾಂತಿಯ ಪ್ರಭಾವ ಟಿಪ್ಪುವಿನ ಮೇಲೆ ಆಯಿತು. ಇಂತಹ ಪ್ರಭಾವದ ಪರಿಣಾಮವೊ ಮುಖ್ಯವಾಗಿ ಇವನ ಆಡಳಿತದಲ್ಲಿ ಪ್ರತಿಫಲನಗೊಳ್ಳಲು ಕಾರಣವಾಯಿತು. ಟಿಪ್ಪು ಒಬ್ಬ ಪೂರ್ಣ ಪ್ರಮಾಣದ ಪಾಳೇಗಾರಿ ರಾಜನಾಗಿದ್ದರೂ ಅಂದಿನ ಉತ್ಪಾದನಾ ಪರಿಸ್ಥಿತಿಗಳನ್ನು ಬದಲಾಯಿಸಲೂ, ಸ್ವಲ್ಪಮಟ್ಟಿಗೆ ಪ್ರಯತ್ನಿಸಿದ. ತನ್ನ ಜೀವನದ ಅಂತಿಮದವರೆಗೂ ನಡೆದ ಗೆಲುವು-ಸೋಲುಗಳ ನಿರಂತರವಾದ ಹೋರಾಟದಲ್ಲಿ

ರಫ್ತು ವ್ಯವಹಾರವನ್ನು ಟಿಪ್ಪು ನಡೆಸಿದ. ಇದಕ್ಕಾಗಿ ಹೊರ ದೇಶಗಳಲ್ಲಿ - ಮಸ್ಕಾಟ್, ಜಿಡ್ಡಾ, ಬಸ್ರಾ, ಪೆಗು ಮುಂತಾದ ಕಡೆಗಳಲ್ಲಿ - ವಾಣಿಜ್ಯ ಡಿಪೋಗಳನ್ನು ಸ್ಥಾಪಿಸಿದ.

ಚೀನಾದಿಂದ ರೇಷ್ಮೆಯನ್ನು ತರಿಸುವುದರ ಬದಲಿಗೆ ರೇಷ್ಮೆಯನ್ನು ಸ್ಥಳೀಯವಾಗಿಯೇ ಉತ್ಪಾದಿಸಬೇಕೆಂದು ಯೋಚಿಸಿ ಅರಬ್ ದೇಶಗಳಿಂದ ರೇಷ್ಮೆ ಮೊಟ್ಟೆಗಳನ್ನು ತರಿಸಿ, ಇಲ್ಲೇ ಹುಳುಗಳನ್ನು ಬೆಳೆಸಿ ರೇಷ್ಮೆ ಉತ್ಪಾದನೆಯನ್ನು ಮಾಡಿಸಿದ್ದು ಮಹತ್ವದ ಸಾಧನೆ. ಕರ್ನಾಟಕವು ಇಂದು ದೇಶದಲ್ಲೇ ಅತಿ ಹೆಚ್ಚು ರೇಷ್ಮೆ ಉತ್ಪಾದನೆಯ ರಾಜ್ಯವಾಗಿರುವುದಕ್ಕೆ ಟಿಪ್ಪು ದೊಡ್ಡ ಕಾರಣ ಎಂಬುದನ್ನು ನಾವು ಮರೆಯುವಂತಿಲ್ಲ.

ಕೈಗಾರಿಕಾ ಕ್ಷೇತ್ರದಲ್ಲಿನ ಸಾಧನೆ ಗಣನೀಯವಾದದ್ದು. ಶಸ್ತ್ರಗಳು, ಗಾಜು, ಕೈಗಡಿಯಾರ, ಕಾಗದ, ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲಾಗಿತ್ತು. ಶ್ರೀರಂಗಪಟ್ಟಣ, ಬೆಂಗಳೂರು, ಚಿತ್ರದುರ್ಗ, ಬಿದನೂರುಗಳಲ್ಲಿದ್ದ ಕಬ್ಬಿಣದ ಕಾರ್ಖಾನೆಗಳನ್ನು ತಾರಾ ಮಂಡಲಗಳೆಂದು ಟಿಪ್ಪು ಹೆಸರಿಸಿದ್ದ. ಫ್ರಾನ್ಸ್, ಜರ್ಮನಿ, ಟರ್ಕಿ ದೇಶಗಳ ತಂತ್ರಜ್ಞರ ನೆರವನ್ನು ಇವುಗಳಿಗೆ ಟಿಪ್ಪು ಬಳಸಿದ. ಕಾವೇರಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಬೇಕೆಂಬುದರ ಬಗ್ಗೆ ಟಿಪ್ಪುಗಿದ್ದ ಆಸಕ್ತಿಗಳ ಕುರಿತ ವಿವರಗಳುಳ್ಳ ಶಾಸನವು ಈಗಲೂ ಕೆ.ಆರ್. ಸಾಗರದಲ್ಲಿದೆ. ತಂತ್ರಜ್ಞಾನಕ್ಕೆ ಒತ್ತುಕೊಟ್ಟು ಒಂದು ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಟಿಪ್ಪು ಯೋಚಿಸಿದ್ದನು.

ವಿವಾದ ಏಕೆ?

ಟಿಪ್ಪುವನ್ನು ಎರಡು ಶತಮಾನಗಳ ನಂತರವೂ ವಿವಾದಾತ್ಮಕ ವ್ಯಕ್ತಿಯಾಗಿಯೇ ಇಡಲಾಗಿದೆ. ಸೂರ್ಯ ಮುಳುಗದ ಸಾಮ್ರಾಜ್ಯದ ಸೈನ್ಯವನ್ನು ಹಲವಾರು ಬಾರಿ ಮಣ್ಣು ಮುಕ್ಕಿಸಿದ ಖ್ಯಾತಿ ಈ ಮೈಸೂರಿನ

ಮೈಸೂರ

ವೀರಮರಣದ

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ವ
ಎದೆಯಲ್ಲಿ ನಡುಕ ಹುಟ್ಟಿಸಿ, ವೀರ ಮ
ಸಂದಿವೆ. ನೂರಾರು ವರ್ಷ ಬ್ರಿಟಿಶರ
ಪ್ರಜಾಪ್ರಭುತ್ವವನ್ನು ಅನುಭವಿಸುತ್ತಿದ್ದೇವೆ.
ಒತ್ತೆಯಿಟ್ಟ ಆ ದೃಶ್ಯ - ಎಲ್ಲರೂ ಕಣ್ಣೀರಿ
ಮಿಡಿಯುವ ದೃಶ್ಯ ಇಂದು ಎಲ್ಲರ ಕಣ್ಣಿಗೂ
ಮತ್ತೆ ಸಾಮ್ರಾಜ್ಯಶಾಹಿ ಅಮೇರಿಕ, ಬ್ರಿ
ಹಿಂದೆಂದಿಗಿಂತಲೂ ನಮಗೆ ಟಿಪ್ಪುವಿನ ತ
ಭಾರತ ದೇಶದ ಆರ್ಥಿಕ ಸ್ವಾತಂತ್ರ್ಯ
ಶ್ರೀಮಂತರು ಸಂಭ್ರಮದಿಂದ ಆಚರಿಸುತ್ತಿ
ಏರಿಕೆ, ಉದ್ಯೋಗನಾಶದ ಬೇಗೆಯಲ್ಲಿ ಬ
ಸಂದರ್ಭದಲ್ಲಿ ದುಡಿವ ಜನರ ಪ್ರಾಣಮಿತ್ರ
ಲೇಖನಗಳನ್ನು ನಿಮ್ಮ ಮುಂದಿಟ್ಟದ್ದೇವೆ.
ದುಡಿವ ಜನರು, ಭಾರತ ದೇಶದ
ದೇಶಪ್ರೇಮಿ ಜನತೆ ಟಿಪ್ಪುವನ್ನು ನೆನೆ
ಸಂತೋಷದಿಂದ ಒಪ್ಪಿಸುತ್ತಿರುವ ಶಕ್ತಿಗಳು
ಬ್ರಿಟಿಷರೇ ಹುಟ್ಟಿಸಿದ ಹಲವಾರು ಸ
ದ್ವೇಷಿಸಬೇಕೆನ್ನುತ್ತಾರೆ. ಹೀಗೆ ಇತಿಹಾಸದ
ಸಾಮಾಜಿಕ, ಸಾಂಸ್ಕೃತಿಕ ಜೀವನದಲ್ಲಿ
ಫ್ಯಾಸಿಸಂ ಹಾಗೂ ಜಾತ್ಯಾತೀತತೆ ಪ್ರಜಾಪ್ರ
ಪತ್ರಿಕೆಯಲ್ಲೂ ಪ್ರಕಟವಾಗದ, ಅನೇಕ ಜನ
ಈ ಸಮರದಲ್ಲಿ ತನ್ನ ವಿಶೇಷ ಕಾಣಿಕೆ ಸಲ್ಲಿಸ

ಬ್ರಿಟಿಷ್ ವಸಾಹತುಶಾಹಿಯಯನ್ನು ಎದುರಿಸಿದ ಹೋರಾಟಗಾರ
ಆಧುನೀಕರಣದತ್ತ ಸಾಗಿದ ಉತ್ತಮ ಆಡಳಿತಗಾರ

ಪ್ರಕಾಶ್.ಕೆ

ಬ್ರಿಟಿಷ್ ವಸಾಹತುಶಾಹಿಯನ್ನು ಎದುರಿಸಿ ಟಿಪ್ಪು ನಾಲ್ಕನೇ ಮೈಸೂರು ಯುದ್ಧದಲ್ಲಿ ಮೃತನಾದ.

ಅಭಿವೃದ್ಧಿ ಕಾರ್ಯ

ಅಂದಿನ ಮೈಸೂರು ರಾಜ್ಯದ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಬದಲಾವಣೆಗೆ ಟಿಪ್ಪುವಿನ ನೀತಿಗಳು ಹೇಗೆ ಸಹಾಯಕವಾದವು ಎಂಬುದನ್ನು ಕೆಳಕಂಡ ಅಂಶಗಳಿಂದ ನೋಡಬಹುದಾಗಿದೆ. ಕೃಷಿ ಮತ್ತು ಕೈಗಾರಿಕೆಯ ಅಭಿವೃದ್ಧಿ , ವಾಣಿಜ್ಯ ಮತ್ತು ವ್ಯಾಪಾರಕ್ಕೆ ಒತ್ತು, ಮೈಸೂರನ್ನು ಹೊರಜಗತ್ತಿನೊಂದಿಗೆ ಸಂಪರ್ಕ ಕಲ್ಪಿಸಿದ್ದು, ಆಡಳಿತದ ಪ್ರತೀ ವಿಭಾಗವನ್ನು ಸುಧಾರಿಸಲು ಪ್ರಯತ್ನಿಸಿದ್ದು ಕೆಲವು ಪ್ರಮುಖಾಂಶಗಳು.

ರೈತರನ್ನು ಅಧಿಕಾರಿಗಳು ಹಿಂಸಿಸುವುದನ್ನು ತಡೆಗಟ್ಟಲು ಅಧಿಕಾರಿಗಳಿಂದ ಕಿರುಕುಳ ನೀಡುವುದಿಲ್ಲವೆಂದು ಆಣೆ ಮಾಡಿಕೊಳ್ಳುತ್ತಿದ್ದ ಅವರು ಕೆಲಸಕ್ಕೆ ಸೇರುವ ಮುಂಚೆ ಅವರ ಆಸ್ತಿಯನ್ನು ಘೋಷಿಸಬೇಕಾಗಿತ್ತು. ಸಣ್ಣ ರೈತರಿಗೆ ಅನುಕೂಲವಾಗಲು ತಕ್ಕಾವಿ ಸಾಲ ವ್ಯವಸ್ಥೆಯನ್ನು ರೂಪಿಸಿದ. ರೈತರು ಕಂದಾಯವನ್ನು ನೇರವಾಗಿ ಸರ್ಕಾರಕ್ಕೆ ಕಟ್ಟುವ ವ್ಯವಸ್ಥೆ ಇತ್ತು. ಕಂದಾಯ ಕಟ್ಟದಿದ್ದ ಪಕ್ಷದಲ್ಲಿ ವಿಧಿಸಲಾಗುತ್ತಿದ್ದ ದಂಡ ಸಹ ಉತ್ಪಾದನಾ ದೃಷ್ಟಿ ಕೋನವುಳ್ಳದ್ದಾಗಿತ್ತು.

ವ್ಯಾಪಾರ - ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ರಾಜ್ಯದ ಅಧೀನಕ್ಕೆ ತಂದು ಸ್ಟೇಟ್ ಟ್ರೇಡಿಂಗ್‌ನ್ನು ಟಿಪ್ಪು ಪ್ರಾರಂಭಿಸಿದರು. ಮೆಣಸು, ಯಾಲಕ್ಕಿ, ತೆಂಗು ಮುಂತಾದ ವಾಣಿಜ್ಯ ಬೆಳೆಗಳನ್ನು, ಶ್ರೀಗಂಧ, ದಂತ, ರೇಷ್ಮೆ ಮುಂತಾದ ವಸ್ತುಗಳ ಪ್ರಯೋಜನವನ್ನು ವಿದೇಶಿಯರು ಪಡೆದುಕೊಳ್ಳದಂತೆ, ಬದಲಿಗೆ ತಾನೇ ಅದರ ಪ್ರಯೋಜನವನ್ನು ಪಡೆದುಕೊಳ್ಳಲು ಪ್ರಯತ್ನಿಸಿದ. ಅಮೂಲ್ಯ ಲೋಹಗಳು ಮತ್ತು ವಾಣಿಜ್ಯ ಬೆಳೆಗಳ ಮೇಲೆ ರಾಜ್ಯದ ಹಿಡಿತವನ್ನು ಹೊಂದಲು ಟಿಪ್ಪು ಮಾಡಿದ ಪ್ರಯತ್ನ ಅಂದಿನ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯಲ್ಲಿ ಇತರೆ ರಾಜರಿಗಿಂತಲೂ ಮುಂದುವರಿದ ಅಂಶವೆಂದು ನೋಡಬೇಕಾಗುತ್ತದೆ. ತನ್ನದೇ ವ್ಯಾಪಾರೀ ಹಡಗಿನ ಮೂಲಕ ದೊಡ್ಡ ರೀತಿಯಲ್ಲಿ ಆಮದು ಮತ್ತು

ಹುಲಿಗಿದ್ದರೂ, ಇವನನ್ನು ಕ್ರೂರಿಯೆಂದು, ಮತಾಂಧನೆಂದೂ, ಹಿಂದು ದ್ವೇಷಿಯೆಂದೂ ಚಿತ್ರಿಸಲಾಗಿದೆ. ಕೆಲವು ಹಿಂದೂ ಮತಾಂಧರು ಮಾತಾಡುತ್ತಿರುವುದು, ಪರಿಸ್ಥಿತಿಯನ್ನು ಹಾಳು ಮಾಡುತ್ತಿರುವುದು ಈ ಅಂಶಗಳನ್ನು ಬಳಸಿಕೊಂಡೇ ಎಂಬುದನ್ನು ಗಮನಿಸಬೇಕಾಗಿದೆ. ಇದರ ಹಿಂದಿರುವ ಸತ್ಯಾಂಶಗಳೇನು ಎಂಬುದನ್ನು ನೋಡೋಣ.

ಪ್ರಮುಖ ಇತಿಹಾಸಜ್ಞರಾದ ಡಾ. ಎಸ್.ಚಂದ್ರಶೇಖರ್‌ರವರು ಹೇಳಿದಂತೆ 1810 ರಲ್ಲಿ ಕರ್ನಲ್ ಮಾರ್ಕ್ ವಿಲ್ಕ್ಸ್ ರವರು 'ಹಿಸ್ಟಾರಿಕಲ್ ಸ್ಕೆಚಸ್ ಆಫ್ ಸೌತ್ ಇಂಡಿಯಾ ಇನ್ ಆನ್ ಅಟೆಂಪ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರು (Historical sketches of South India in an Attemt to trace the History of Mysore) ಎಂಬ ಎರಡು ಸಂಪುಟಗಳ ಪುಸ್ತಕ ಹೊರತಂದರು. ಟಿಪ್ಪುವಿನ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದ್ದ ಇವರು ಅಂದಿನ ಘಟನೆಗಳ ಬಗ್ಗೆ ದಾಖಲಿಸಿದ ಪೈಕಿ ಮೊದಲನೆಯವರಾಗಿದ್ದಾರೆ. ಹೀಗಾಗಿ ಮುಂದಿನ ಬರಹಗಾರರಿಗೆ ಹಾಗೂ ಇತಿಹಾಸಕಾರರಿಗೆ ಇವರೇ ದಿಕ್ಸೂಚಿಯಾದರು ಮತ್ತು ಇವರೆಲ್ಲರಿಗೂ ವಿಲ್ಕ್ಸ್‌ರವರ ಪುಸ್ತಕಗಳೇ ಆಧಾರವಾದವು. ಇವು ವಸಾಹತುವಾದ ಬ್ರಿಟಿಶರ ವಿರುದ್ಧ ಯಾರೆಲ್ಲಾ ಹೋರಾಟ ಮಾಡಿದ್ದಾರೋ ಅವರ ವಿರುದ್ಧದ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಿವೆ.

ವಿಲ್ಕ್ಸನ ನಂತರ ಬರೆದ ಬೀಟ್ಸನ್, ಬುಕಾನನ್, ಬೌಡಿಂಗ್, ಕ್ಯಾಂಪ್‌ಬೆಲ್, ರೈಸ್, ಹೆಂಡರ್‌ಸನ್, ಯುನೋ, ಫಿಲಿಪ್ಸ್.ಸಿ.ಹೆಚ್., ರಾಬ್ಸನ್ ಮುಂತಾದ ಇಂಗ್ಲೀಷ್ ಬರಹಗಾರರೆಲ್ಲಾ ವಿಲ್ಕ್ಸನನ್ನು ಅನುಸರಿಸಿದ್ದಾರೆ ಮತ್ತು ಟಿಪ್ಪುವನ್ನು ಕ್ರೂರಿ, ಮತಾಂಧ ಮುಂತಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಇಂಗ್ಲೀಷರು ತಮ್ಮ ಸಹಜ ಪ್ರವೃತ್ತಿಯಾದ 'ಒಡೆದು ಆಳು' ನೀತಿಯ ಭಾಗವಾಗಿಯೇ ಈ ರೀತಿಯಲ್ಲಿ ಚಿತ್ರಿಸಿದ್ದಾರೆ. ಅದೇ ರೀತಿಯಲ್ಲಿ ವೆಲ್ಲೆಸ್ಲಿ ಮತ್ತು ವಿಲ್ಕ್ಸ್‌ರವರು, ಹೈದರಾಲಿಯ ಮೈಸೂರು ರಾಜ್ಯದ ಅಧಿಕಾರ ಪಡೆದದನ್ನು "ಕಬಳಿಸಿದ್ದ"ೆಂದು ಬರೆದಿದ್ದಾರೆ. ಮೈಸೂರನ್ನು ತಮ್ಮ

ಅಧೀನಕ್ಕೆ ತೆಗೆದುಕೊಂಡಿದ್ದನ್ನು ಸಮರ್ಥಿಸಿಕೊಳ್ಳಲು
ರೀತಿ ಕರೆಯುವುದರಲ್ಲಿ ಅವರ ಹಿತಾಸಕ್ತಿ ಇತ್ತು. ಇ
ಆಧಾರದಲ್ಲೇ ಒಡೆಯರು ಬ್ರಿಟಿಷರ ಪರ ವಹಿಸುವ
ನೋಡಿಕೊಳ್ಳಲಾಯ್ತು ಮೈಸೂರಿನ ರಾಣಿ ಲಕ್ಷ್ಮಮ್ಮ
ಬ್ರಿಟಿಷರ ಸಹಾಯದಿಂದ ಟಿಪ್ಪುವಿನ ವಿರುದ್ಧ ಪಿತೂ
ಮಾಡಿದಳೆಂಬುದಕ್ಕೆ ಹಲವಾರು ಸಾಕ್ಷಿಗಳಿವೆ.

ಕೋಮುವಾದಿ ಆರೋಪಗಳು

ಬ್ರಿಟಿಷ್ ಇತಿಹಾಸಕಾರರಿಗಿಂತ
ಆತಂಕಕಾರಿಯಾದ ಸಂಗತಿಯೆಂದರೆ ಪ್ರಾರಂ
ಭಾರತೀಯ ಇತಿಹಾಸಕಾರ ಬರವಣಿಗೆಗಳ
ಹಯವದನರಾವ್, ಜಿ.ಆರ್. ಜೋಯ್ಸ
ಮುಂತಾದವರು ಟಿಪ್ಪುವನ್ನು ಪೀಡಕ, ಮತಾಂಧ ಎಂ
ಬರೆದರು. ಹಯವದನರಾವ್ ಅವರಂತೂ, ಟಿ
ದೇವಸ್ಥಾನಗಳನ್ನು ಲೂಟಿ ಮಾಡಿದವನು, Defi
ಮುಂತಾದ ಬ್ರಿಟಿಷ್ ಬರಹಗಾರರನ್ನು ಮೀರಿ
ಬರೆದರು. ಟಿಪ್ಪು ಮದ್ಯ ವ್ಯಾರಾಟವನ್ನು
ನಿಷೇಧಿಸಿದ್ದರಿಂದ ಕಡಿಮೆಯಾದ ಆದಾಯವ
ಸರಿಯಾಗಿಸಿಕೊಳ್ಳಲು ದೇವಸ್ಥಾನಗಳ ನಿಧಿಯ
ಬಾಚಿಕೊಂಡ ಮತ್ತು ಹಿಂದೂ ಪೂಜೆಗಳನ್ನು
ಅಂತ್ಯಗೊಳಿಸಲು ಮುಂದಾದ ಎಂದೂ ಬರೆದರು
ಯಾವುದಕ್ಕೂ ಆಧಾರಗಳಿಲ್ಲ. ಸ್ಪಷ್ಟವಾಗಿ ಕೋಮುವಾ
ಆರೋಪಗಳು.

ಬ್ರಾಹ್ಮಣರನ್ನು ಚಿತ್ರಹಿಂಸೆಗೆ ಒಳಪಡಿಸಿದರು
ಮತಾಂತರಕ್ಕೆ ಪ್ರಯತ್ನಿಸಿದರು ಎನ್ನುವ ಆರೋಪ
ಸತ್ಯಾ ಸತ್ಯತೆಯ ಬಗ್ಗೆ ಬೆಳಕು ಚೆಲ್ಲಲು ಪ್ರೊ. ಶೇ
ಅಲಿಯವರು ಒಂದು ಉದಾಹರಣೆ ನೀಡುತ್ತಾರೆ:

ಡಾ|| ಬಿ.ಎನ್. ಪಾಂಡೆಯವರು 1927-28 ರ
"ಟಿಪ್ಪು ಸುಲ್ತಾನ್‌ನ ಧಾರ್ಮಿಕ ನೀತಿಗಳು"
ಸಂಶೋಧನೆ ಮಾಡುತ್ತಿರುವಾಗ ಮೆಟ್ರಿಕ್ಯುಲೇಷ
ಪಠ್ಯಪುಸ್ತಕದಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಹರಿಪ್ರಸಾ
ಶಾಸ್ತ್ರಿಯವರು ಬರೆದಿದ್ದ "ಇಸ್ಲಾಂಗೆ ಬಲವಂತದಿ

ಹುಲಿ ಟಿಪ್ಪು

200 ವರ್ಷಗಳು



...ಕೊಳ್ಳುವುದಕ್ಕಾಗಿ ಹೋರಾಡಿ, ಬ್ರಿಟಿಷರ ...ತ ಟಿಪ್ಪು ಹುತಾತ್ಮನಾಗಿ 200 ವರ್ಷಗಳು ...ಲುಗಿ ಸ್ವಾತಂತ್ರ್ಯ ಪಡೆದ ನಾವು ಇಂದು ...ತ ಸ್ವಾತಂತ್ರ್ಯಕ್ಕಾಗಿ ಟಿಪ್ಪು ತನ್ನ ಮಕ್ಕಳನ್ನೇ ...ಸುಲ್ಲಿ ಮುಳುಗಿ ಹೋಗಿರುವ ಈ ಕರುಳು ... ಭಾರತ ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ...ಾನ್‌ಗಳಿಗೆ ಬಲಿ ಕೊಡುತ್ತಿರುವ ಇಂದು ... ಹೋರಾಟಗಳು ಸ್ಫೂರ್ತಿ ನೀಡಬೇಕು. ...ಲಿಗೊಡುವ ಕ್ರಿಯೆಯನ್ನು ನಮ್ಮ ದೇಶದ ...ರ್ಮಿಕರು, ರೈತರು, ಕೂಲಿಕಾರರು ಬೆಳೆ ...ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ...ಕ್ಯರಂಗ' ಟಿಪ್ಪುವನ್ನು ನೆನೆಯುತ್ತಾ ಎರಡು

..., ಆರ್ಥಿಕ ಸ್ವಾತಂತ್ರ್ಯವನ್ನುಳಿಸಿಕೊಳ್ಳುವ ...ದರೆ ದೇಶವನ್ನು ಪರಕೀಯರ ಕೈಗೆ ...ಲ್ಲಿ ರಾಜ್ಯದ ಜನ ಮರೆಯಬೇಕೆನ್ನುತ್ತಾರೆ. ... ಕಂತೆಯ ಮೇಲೆ ಅವನನ್ನು ಜನ ...ತಿಗಳ ಬಗ್ಗೆಯೂ, ದೇಶದ ರಾಜಕೀಯ, ...ಗೂ ಸಾಗಿದೆ ಸಮರ. ಕೋಮುವಾದ, ...ನಡುವೆ ಸಮರಸಾಗಿದೆ. ಕರ್ನಾಟಕದ ಯಾವ ...ಕಾರರಿಗೂ ತಿಳಿಯದ ಅಂಶಗಳನ್ನು 'ಐಕ್ಯರಂಗ' ...ತೆ.

- ಸಂಪಾದಕರು

...ಮತಾಂತರ ಮಾಡಲು ಟಿಪ್ಪು ಬಯಸಿದ್ದರಿಂದಾಗಿ 3000 ಬ್ರಾಹ್ಮಣರು ಆತ್ಮಹತ್ಯೆ ಮಾಡಿಕೊಂಡರು ಎಂಬ ಹೇಳಿಕೆಯನ್ನು ಗಮನಿಸಿದರು. ಈ ಮಾಹಿತಿಯು ಎಲ್ಲಿಂದ ದೊರಕಿತೆಂದು ತಿಳಿಯಲು ಡಾ|| ಪಾಂಡೆಯವರು ಶಾಸ್ತ್ರಿಯವರಿಗೆ ಪತ್ರಬರೆದರು. ಅವರು ಬಹಳ ತಡಮಾಡಿ ಮೈಸೂರು ಗೆಜೆಟ್ಟಿಯರ್‌ನಲ್ಲಿ ಎಂದು ಉತ್ತರಿಸಿದರು. ಆಗ ಪಾಂಡೆಯವರು ಮೈಸೂರು ವಿ.ವಿ.ಯ ಉಪಕುಲಪತಿಗಳಾದ ಬ್ರಜೇಂದ್ರನಾಥ್ ಸೀಲ್‌ರನ್ನು ಸಂಪರ್ಕಿಸಿದರು. ಉಪಕುಲಪತಿಯವರು ಗೆಜೆಟಿಯರ್‌ನ ಸಂಪಾದಕರಾದ ಶ್ರೀಕಂಠಯ್ಯನವರನ್ನು ಸಂಪರ್ಕಿಸಿದರು. ಶ್ರೀಕಂಠಯ್ಯನವರು, 3000 ಬ್ರಾಹ್ಮಣರು ಆತ್ಮಹತ್ಯೆ ಮಾಡಿಕೊಂಡ ಅಂಶ ಮೈಸೂರು ಗೆಜೆಟಿಯರ್‌ನಲ್ಲಿ ಎಲ್ಲೂ ಇಲ್ಲ. ಮಾತ್ರವಲ್ಲ ಅಂತಹ ಘಟನೆ ನಡೆದೇ ಇಲ್ಲ ಎಂದು ಖಾತ್ರಿಪಡಿಸಿದರು.

ಟಿಪ್ಪು ಇಂದಿನ 'ಹಿಂದೂ ಧರ್ಮ ರಕ್ಷಕರು' ಆ...ಪಿಸುವಂತೆ ಮತಾಂಧನಾಗಿರಲಿಲ್ಲ. ಮತ್ತು ಇವನ ಆಡಳಿತ ಭೌಗೋಳಿಕ ಚೌಕಟ್ಟು ಅದಕ್ಕೆ ಅವಕಾಶಕೊಡುತ್ತಿರಲಿಲ್ಲ. ಮೇಲಾಗಿ ಸಾಕಷ್ಟು ಆಧುನಿಕ ಕಣ್ಣೋಟಗಳನ್ನು ಹೊಂದಿದವನಾಗಿದ್ದ ಜೊತೆಗೆ ಟಿಪ್ಪು, ತನ್ನ ವಿರುದ್ಧ ಪಿತೂರಿ ನಡೆಸಿದವರನ್ನಾಗಲೀ, ಶತ್ರುಗಳ ಜೊತೆ ಸೇರಿದವರನ್ನಾಗಲೀ ಶಿಕ್ಷಿಸದೇ ಬಿಡುತ್ತಿರಲಿಲ್ಲ. ಇದು ಬಹುಶಃ ಯಾವುದೇ ಒಂದು ಸಣ್ಣ ಊರಿನ ಗೌಡನಾದರೂ ಮಾಡುತ್ತಿದ್ದಿರಬಹುದಾದ ಕೆಲಸ. ಇಂತಹ ಶಿಕ್ಷೆಗಳಲ್ಲಿ ಇಸ್ಲಾಂಗೆ ಮತಾಂತರ ಮಾಡುವ ಬೆದರಿಕೆಯ ಅಂಶವೂ ಇತ್ತು. ಇಸ್ಲಾಂನ್ನು ಬೆಳೆಸುವುದಕ್ಕಿಂತಲೂ ಪಿತೂರಿಗಾರರನ್ನು ಅಗೌರವಿಸಲು ಅಧೀರರನ್ನಾಗಿಸಲು ಹಾಗೂ ಅವರ ಚಟುವಟಿಕೆಗಳನ್ನು ನಿಯಂತ್ರಿಸಲು ಇಂತಹ ಕ್ರಮ ಅನುಸರಿಸುತ್ತಿದ್ದನು. ಶತ್ರುಗಳು ಯಾವುದೇ ನಂಬಿಕೆ ಶ್ರದ್ಧೆಗೆ ಸೇರಿದವರಾದರೂ ಅದನ್ನು ನೋಡದೆ ಅವರನ್ನು ಶಿಕ್ಷಿಸುತ್ತಿದ್ದನು. ಹೀಗಾಗಿ ಒಬ್ಬ ಸಾಮಾನ್ಯ ರಾಜನ ರೀತಿಯಲ್ಲಿಯೇ ಹೈದರಾಬಾದಿನ ನಿಜಾಮರ ವಿರುದ್ಧ ಸವರ್ಣೀಯರು ಮತ್ತು ಕರ್ನೂಲಿನ ನವಾಬರ ವಿರುದ್ಧ ಅವರು ಇಸ್ಲಾಂಗೆ ಸೇರಿದ್ದರೂ ಅವರ ವಿರುದ್ಧ ಯುದ್ಧಗಳನ್ನು ಮಾಡಿದ್ದಾನೆ.

ಇವುಗಳನ್ನು ಗಮನದಲ್ಲಿಟ್ಟುಕೊಂಡು ಟಿಪ್ಪುವಿಗೆ ಅಂಟಿಸಿರುವ ಮತಾಂಧತೆಯ, ಪೀಡನೆಯ ಪ್ರಶ್ನೆಗಳಿಗೆ ವಸ್ತುನಿಷ್ಠ ಉತ್ತರಗಳನ್ನು ಕಂಡುಕೊಳ್ಳಬೇಕಿದೆ.

ಧಾರ್ಮಿಕ ಅಸಹಿಷ್ಣುವಾಗಿರಲಿಲ್ಲ

ದೊಡ್ಡ ಹುದ್ದೆಗಳಿಗೆ ಹಿಂದೂಗಳ ನೇಮಕ, ದೇವಸ್ಥಾನಗಳಿಗೆ ದಾನ ಮತ್ತು ದತ್ತಿ ನೀಡಿರುವುದು ಟಿಪ್ಪು ಹಿಂದೂ ಧರ್ಮದ ಬಗ್ಗೆ, ಧರ್ಮೀಯರ ಬಗ್ಗೆ ಅಸಹಿಷ್ಣುವಾಗಿರಲಿಲ್ಲ ಎಂದು ಸಾಬೀತುಪಡಿಸುತ್ತದೆ. ಆಡಳಿತದಲ್ಲಿ ಹಿಂದೂ-ಮುಸ್ಲಿಂ ಅಂತರ್ ಹೆಣೆಯುವಿಕೆಯನ್ನು ಸ್ಪಷ್ಟವಾಗಿ ಕಾಣಬಹುದು. ಪೂರ್ಣಯ್ಯನವರು ದಿವಾನರಾಗಿದ್ದರು, ಕೃಷ್ಣರಾವ್ ಹಣಕಾಸಿಗೆ ಮುಖ್ಯಸ್ಥರಾಗಿದ್ದರು, ಶಾಮಯ್ಯನವರು ಅಂಚಿ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಅಪ್ಪಾಜಿ ರಾವ್, ಸುಬ್ಬಾರಾವ್, ಶ್ರೀನಿವಾಸ್ ರಾವ್, ಸಜ್ಜನ್‌ಲಾಲಾ, ಮೂಲ್‌ಚಂದ್ ಮುಂತಾದವರು ರಾಜಕೀಯ ವ್ಯವಹಾರ ಸೇವೆಯಲ್ಲಿದ್ದರು, ಹರಿಸಿಂಗ್ ರಾಮರಾವ್, ಮತ್ತು ಶ್ರೀಪತ್‌ರಾವ್ ಮಿಲಿಟರಿ ಸೇವೆಯಲ್ಲಿದ್ದರು. ಲೆಕ್ಕಾಚಾರಗಳ ವಿಭಾಗವು ಪೂರ್ತಿಯಾಗಿ ಹಿಂದೂ ಅಧಿಕಾರಿಗಳಿಂದಲೇ ನಿರ್ವಹಣೆಯಾಗುತ್ತಿತ್ತು.

ಟಿಪ್ಪು, ಹಿಂದೂ-ಮುಸ್ಲಿಂ ಐಕ್ಯತೆಯ ಮೂರ್ತರೂಪ ಎಂದು ಗಾಂಧೀಜಿಯವರು ತಮ್ಮ ಯಂಗ್-ಇಂಡಿಯಾದಲ್ಲಿ ಪ್ರಸ್ತಾಪಿಸಿರುವ ಬಗ್ಗೆ ಪ್ರೊ. ಫೇಕ್ ಅಲಿಯವರು ಗಮನಕ್ಕೆ ತಂದಿದ್ದಾರೆ.

ಶೃಂಗೇರಿ ಮಠಕ್ಕೆ ಟಿಪ್ಪು ನೀಡಿದ ಕೊಡುಗೆಗಳು ಜಗತ್ತಿಗೇ ಗೊತ್ತಿವೆ. ಮೈಸೂರು-ಮರಾಠಾ ಯುದ್ಧದ ಸಂದರ್ಭದಲ್ಲಿ "ಹಿಂದೂ ಧರ್ಮದ ಗುತ್ತಿಗೆ" ಹಿಡಿದವರೆಂದು ಹೇಳುವ ಮರಾಠಾ ಸೈನ್ಯದ ಮುಖಂಡ ಪುರುಷೋತ್ತಮ ಬಾವು ಶೃಂಗೇರಿಯ ಶಾರದಾ ಮಠದ ಮೇಲೆ ದಾಳಿಮಾಡಿ ಲೂಟಿ ಮಾಡಿ ಮಠಕ್ಕೆ ನಷ್ಟವುಂಟು ಮಾಡಿದಾಗ ಟಿಪ್ಪುವಿನ ನಡವಳಿಕೆ ಅತ್ಯಂತ ಪ್ರಶಂಸಾರ್ಹವಾಗಿದೆ. ಮಠದ ಪುನರುದ್ಧಾರಕ್ಕೆ ಟಿಪ್ಪು ಉದಾರ ಧನಸಹಾಯ ಮಾಡಿದ. ಈ ಸಂದರ್ಭದಲ್ಲಿ ಮಠಕ್ಕೆ ಮತ್ತು ಟಿಪ್ಪುವಿನ ನಡುವೆ ನಡೆದ ಪತ್ರ ವ್ಯವಹಾರಗಳಿಗೆ ಸಂಬಂಧಿಸಿ 30 ಪತ್ರಗಳು ಇಂದಿಗೂ ಲಭ್ಯವಿದೆ. ಹಿಂದೂ ಧರ್ಮದ ಬಗ್ಗೆ ಟಿಪ್ಪುವಿಗಿದ್ದ ಆಳವಾದ ಗೌರವದ ಸಂಕೇತವಾಗಿ ಈ ಪತ್ರಗಳು ಇವೆ ಎಂಬುದು ಕೋಮುವಾದಿಗಳಿಗೆ ಇಷ್ಟವಾಗದ ಅಂಶಗಳಾಗಿವೆ.

ಲಭ್ಯ ದಾಖಲೆಗಳ ಪ್ರಕಾರ 156 ಹಿಂದೂ ದೇವಾಲಯಗಳಿಗೆ ಟಿಪ್ಪು ದಾನ-ದತ್ತಿಗಳನ್ನು ನೀಡಿದ ಬಗ್ಗೆ ದಾಖಲೆಗಳಿವೆ. ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದಲ್ಲಿ ಹಸಿರು ಬಣ್ಣದ ಅಂಗಿವೊಂದನ್ನು ಪ್ರತಿಸ್ಥಾಪನೆ ಮಾಡಿಸಿದ. ಇದೇ ಕಾರಣಕ್ಕೆ ನಂಜುಂಡೇಶ್ವರನನ್ನು "ಹಕೀಮ ನಂಜುಂಡ" ಎಂದು ಕರೆಯಲಾಗಿತ್ತು. ಹೈದರಾಲಿ ಕಾಲದಲ್ಲಿ ಕಂಚಿಯಲ್ಲಿ

ಪುಟ 8 ನೋಡಿ

ಭಾರತ ದೇಶದ ಪ್ರಪ್ರಥಮ ಪ್ರಜೆ 'ಸಿಟಿಜನ್' ಟಿಪ್ಪು

● ಜಿ.ಎನ್.ನಾಗರಾಜ್

ಭಾರತದ ರಾಜ, ಸುಲ್ತಾನರುಗಳು ತಮ್ಮ ರಾಜ್ಯಗಳನ್ನು ಬ್ರಿಟಿಶರ ಆಕ್ರಮಣದಿಂದ ಉಳಿಸಿಕೊಳ್ಳುವ ಹೋರಾಟದಲ್ಲಿ ಭಾರತವನ್ನು ವಸಾಹತು ಶಾಹಿಗಳ ಸುಲಿಗೆಯಿಂದ ತಪ್ಪಿಸುವ ಮೊದಲ ಸ್ವಾತಂತ್ರ್ಯ ವೀರ ಸಂಗ್ರಾಮಗಳಲ್ಲಿ ಸ್ಮರಣೀಯ ಅಧ್ಯಾಯ 'ಮೈಸೂರು ಯುದ್ಧ'ಗಳ ಪರಂಪರೆ. ಈ ಯುದ್ಧಗಳಲ್ಲಿ ಟಿಪ್ಪು ಹುಟ್ಟಿಸಿದ ಎದೆ ನಡುಕ ಬ್ರಿಟನ್‌ನಲ್ಲಿ ಮನೆ ಮಾತು. 1799 ರ ಮೇ 4 ರಂದು ಟಿಪ್ಪು ಮಡಿದು ಶ್ರೀರಂಗ ಪಟ್ಟಣ ಬ್ರಿಟಿಷರ ಕೈವಶವಾದ ಸುದ್ದಿ ಕಲ್ಕತ್ತಾದಲ್ಲಿ ಬಂಗಾಲದ ಗವರ್ನರನಾಗಿದ್ದ ಆರ್ಥರ್ ವೆಲ್ಲೆಸ್ಲಿಗೆ ತಲುಪಿದಾಗ ಅವನು ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮಂಡಳಿಯ ಸಭೆಯೊಂದರಲ್ಲಿದ್ದನಂತೆ. ತಕ್ಷಣವೇ ಅತಿ ಮಧುರವಾದ ಅಪರೂಪದ ಮದ್ಯಗಳನ್ನು ತರಿಸಿ ಸಂತಸದ ಕುಡಿತ, ಕುಣಿತಗಳ ಗೋಷ್ಠಿಯನ್ನು ಟೋಸ್ಟ್ (ಕುಡಿತಕ್ಕೆ ಮೊದಲು ಶುಭಾಶಯ ಹೇಳುವ ಪದ್ಧತಿ) ಮೂಲಕ ಉದ್ಘಾಟನೆ ಮಾಡುತ್ತಾ ಘೋಷಿಸಿದನಂತೆ 'ಇನ್ನು ಭಾರತ ಮರಣವನ್ನಪ್ಪಿತು'(India is dead)

ಭಾರತದಲ್ಲಿ ಅಂದು ಅಸಂಖ್ಯ ಸಂಸ್ಥಾನಗಳು - ಅದಕ್ಕೆ ಅನೇಕ ಸುಲ್ತಾನರುಗಳು, ರಾಜ, ರಾಣಿಯರಿದ್ದರೂ ಟಿಪ್ಪು ಆ ಪರಿ ಬ್ರಿಟಿಶರಿಗೆ ಭಯಂಕರನಾಗಿ ಕಂಡಿದ್ದೇಕೆ? ತನ್ನ ಮಕ್ಕಳನ್ನೇ ಬ್ರಿಟಿಶರ ಒತ್ತೆಯಾಳಾಗಿಡುವ ತ್ಯಾಗಕ್ಕೆ - ಯಾವ ರಾಜ, ಮಹಾರಾಜರೂ ಯೋಚನೆ ಮಾಡದ ತ್ಯಾಗಕ್ಕೆ, ತನ್ನ ಧರ್ಮದವರಲ್ಲದ ಕನ್ನಡಿಗರ ಗುಲಾಮಗಿರಿಯನ್ನು ತಪ್ಪಿಸುವುದಕ್ಕೆ ಹೈದರಾಬಾದಿನ ನಿಜಾಮ ಬ್ರಿಟಿಶರ ಜೊತೆಗೂಡಿ ತನ್ನ ಸಂಪತ್ತನ್ನು, ಆಳ್ವಿಕೆಯನ್ನು ರಕ್ಷಿಸಿಕೊಂಡಿರುವುದನ್ನು ಕಣ್ಣಿಗೆ ಕಾಣುತ್ತಿದ್ದರೂ ಮರಣವನ್ನಪ್ಪುವವರೆಗೆ ಸಾಗಿಸಿದ ಹೋರಾಟಕ್ಕೆ ತೊಡಗಿದ್ದು ಹೇಗೆ? ಹೀಗೆ ಹತ್ತಾರು ಪ್ರಶ್ನೆಗಳು ಕಾಡುತ್ತವೆ.

ಕರ್ನಾಟಕ ತುಂಬೆಲ್ಲಾ ಪತ್ರಿಕೆಗಳು ಲೇಖನಗಳ ಮಾಲೆಯನ್ನು ವಾದ ವಿವಾದಗಳನ್ನು ಪ್ರಕಟಿಸಿವೆ. ಈ ಯಾವ ಪತ್ರಿಕೆಯೂ ಪ್ರಕಟಿಸದ ಟಿಪ್ಪು ಜೀವನದ ಅರಿವಿನ ಅಧ್ಯಾಯದ ಕಡೆಗೆ, ಅವರ ಸ್ವಾತಂತ್ರ್ಯ ಪ್ರೇಮದ ಮೂಲದ ಕಡೆಗೆ ನಿಮ್ಮ ಗಮನ ಸೆಳೆಯಬಯಸುತ್ತೇವೆ.

ಒಂದು ದಿನ ಅಂದಿನ ಮೈಸೂರು ಸಂಸ್ಥಾನದ ರಾಜಧಾನಿ ಶ್ರೀರಂಗ ಪಟ್ಟಣದಲ್ಲಿ 21 ಕುಶಾಲು ತೋಪುಗಳು ಹಾರಿದವು. ಪಟ್ಟಣದ ಜನಕ್ಕೆಲ್ಲಾ ಆಶ್ಚರ್ಯ, ಕುತೂಹಲ. ಸುಲ್ತಾನರ ದರ್ಬಾರಿನ ಮಂತ್ರಿ ಮಾನ್ಯರಿಗೂ ಕೂಡ, ಒಬ್ಬರ ಮುಖ ಒಬ್ಬರು ನೋಡುತ್ತಿದ್ದಾರೆ. ಯಾರಿಗೂ ತಿಳಿಯದು. 21 ತೋಪುಗಳ ವಿಶೇಷ ವೀರ ವಂದನಕ್ಕೆ ಅರ್ಹವಾದ ಆ ಐತಿಹಾಸಿಕ ಘಟನೆ ತಮಗೆ ಗೊತ್ತಿಲ್ಲದಂತೆ ತಮ್ಮ ರಾಜ್ಯದಲ್ಲಿ ಹೇಗೆ ಸಂಭವಿಸಿದೆ? ಯಾವುದದು? ವಿಚಾರಿಸಿದರೆ ಕುಶಾಲು ತೋಪುಗಳನ್ನು ಸಿಡಿಸಲು ಆಜ್ಞೆ ಹೊರಟದ್ದು ನೇರವಾಗಿ ಸುಲ್ತಾನರಿಂದಲೇ! ಅಂಜುತ್ತಾ, ಅಳುಕುತ್ತಾ ವಿಚಾರಿಸಿದರೆ ಸುಲ್ತಾನರು ಹೇಳುವ ಮಾತುಗಳು ಯಾರಿಗೂ ಅರ್ಥವಾಗದು. ಅದೇನೊ ಅಮೆರಿಕಾವಂತೆ, ಅವರಿಗೆ ಸ್ವಾತಂತ್ರ್ಯ ಸಿಕ್ಕಿತಂತೆ. ಸ್ವಾತಂತ್ರ್ಯ ಪಡೆದ ಈ ವೀರರಿಗೆ ವಂದನೆ ಸಲ್ಲಿಸಲು ತೋಪುಗಳ ಹಾರಿಕೆಯಂತೆ. ಕೈಯಲ್ಲಿ ಪತ್ರವೊಂದನ್ನು ಹಿಡಿದು ನೋಡುತ್ತಾ ಸುಲ್ತಾನರು ತಮಗೆ ಹೊಸ ರಾಜ್ಯವೊಂದು ಸಿಕ್ಕಿದಂತೆ ಸಂಭ್ರಮಿಸುತ್ತಿದ್ದಾರೆ. ಅವರು ಹೇಳಿದ ಮಾತುಗಳಲ್ಲಿ ಒಂದು ಸ್ಪಷ್ಟವಾಗಿ ಅರ್ಥವಾಯಿತು. ದರ್ಬಾರಿನ ಸಭಾಸದರಿಗೆ ಮೈಸೂರು ಸಂಸ್ಥಾನವನ್ನು ಆಕ್ರಮಿಸುವುದಕ್ಕೆ ಘನಘೋರ ಸಂಗ್ರಾಮ ಸಾಗಿಸಿದ್ದ ಪರಮವೈರಿಯನ್ನು ಅಮೆರಿಕಾ ದೇಶದಿಂದ ಓಡಿಸಿ ಅಲ್ಲಿಯ ಜನರು ಸ್ವಾತಂತ್ರ್ಯ ಘೋಷಣೆ ಮಾಡಿದ್ದಾರೆ ಎನ್ನುವುದು. ಇನ್ನು ರಿಪಬ್ಲಿಕ್(ಗಣರಾಜ್ಯ), ಡೆಮಾಕ್ರಸಿ(ಪ್ರಜಾಪ್ರಭುತ್ವ), ಡಿಕ್ಲರೇಷನ್ ಆಫ್ ಇಂಡಿಪೆಂಡನ್ಸ್, ಬಿಲ್ ಆಫ್ ರೈಟ್ಸ್ (ಹಕ್ಕುಗಳ ಘೋಷಣೆ) ಈ ಯಾವ ಮಾತೂ ಅರ್ಥವಾಗಲಿಲ್ಲ. ಮತ್ತೊಮ್ಮೆ ತಂತಮ್ಮ ಮುಖಗಳನ್ನೇ ನೋಡಿಕೊಂಡರು. ಹೀಗೆ ಟಿಪ್ಪು ತಮ್ಮ ಕಾಲದ ಭಾರತದ ದೇಶದ ಸಮಾಜಕ್ಕಿಂತ ಬಹಳ ಮುಂದೆ ಇದ್ದರು. ತಮ್ಮ ಕಾಲದ ನವಾಬ ಸುಲ್ತಾನ, ರಾಜ, ಮಹಾರಾಜರ ಭೋಗ ಲಾಲಸೆಯ, ಅದಕ್ಕಾಗಿಯೇ ರಾಜ್ಯ, ರಾಜ್ಯದ ಎಲ್ಲಾ ಜನ ಎನ್ನುವ ದರ್ಪ ದೌಲತ್ತುಗಳ ಬಲುಗಟ್ಟಿ ಚಿಪ್ಪನ್ನೊಡೆದು ಮುಂದೆ ಸಾಗಿದ್ದರು. ಕೇವಲ ಭಾರತವಷ್ಟೇ ಅಲ್ಲ ಅಂದಿನ ಜಗತ್ತಿನ ಅತ್ಯಂತ ಮುಂದುವರಿದ ತಿಳುವಳಿಕೆಯ ಜೊತೆ, ಬ್ರಿಟನ್, ಜರ್ಮನಿ ಮೊದಲಾದ ಯುರೋಪಿನ ಇತರ ಪ್ರದೇಶಗಳಿಗಿಂತ ಮೀರಿ ಮುನ್ನಡೆದಿದ್ದರು. ಫ್ರೆಂಚ್ ಕ್ರಾಂತಿಯ ಜೊತೆ ಮಾನಸಿಕ ಹೆಜ್ಜೆ ಹಾಕಿದ್ದರು.

ಟಿಪ್ಪುವಿನ ಈ ಅಂದಿನ ನೆಗೆತಕ್ಕೆ ಒಂದು ದೀರ್ಘ ಹಿನ್ನೆಲೆಯೇ ಇದೆ. ಟಿಪ್ಪುವಿನ ತಂದೆ ಹೈದರ್ ಅಲಿಯವರ ವಿದ್ಯಾಭ್ಯಾಸದ ಬಗ್ಗೆ ಇರುವ ಜೋಕ್‌ಗಳು ಜನಜನಿತವಾಗಿವೆ. ಕಷ್ಟಪಟ್ಟು ಸಹಿ ಹಾಕುತ್ತಿದ್ದ ಅವರು ತಮ್ಮ ಸಮಯಕ್ಕಾಗಲೇ ಪ್ರಬಲರಾಗುತ್ತಿದ್ದ ಬ್ರಿಟಿಶರನ್ನು ಎದುರಿಸಲು ತಮ್ಮ ಕಾಲದ ರಾಜ್ಯಾಡಳಿತ, ಸೈನ್ಯ ತರಬೇತಿಗಳು ಸಾಲುವುದಿಲ್ಲ ಎಂದು ತಿಳಿದುಕೊಂಡಿದ್ದರು. ಜೊತೆಗೆ ದ. ಭಾರತದಲ್ಲಿ ಅಷ್ಟು ಹೊತ್ತಿಗೆಗಾಗಲೇ ಬಲವಾಗುತ್ತಿದ್ದ ಫ್ರೆಂಚ್-ಬ್ರಿಟಿಷ್ ವೈಷಮ್ಯವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅವರು ತಮ್ಮ ಮಗನಿಗೆ ಬ್ರಿಟಿಷರಿಗೆ ಸವಾಲಾಗಬಹುದಾದ ಶಿಕ್ಷಣ ನೀಡಲು ಫ್ರೆಂಚರೇ ಸರಿ ಎಂದು ತೀರ್ಮಾನಿಸಿದರು. ಪಾಂಡಿಚೆರಿಯಲ್ಲಿದ್ದ ಫ್ರೆಂಚರನ್ನು ಸಂಪರ್ಕಿಸಿ ಬುಮಾರ್ಷ್(Bumarch) ಎನ್ನುವ ಅಧ್ಯಾಪಕನನ್ನು ಗೊತ್ತು ಮಾಡಿದರು. ಅಂದಿನ ಫ್ರಾನ್ಸ್ ಜಗತ್ತಿನಲ್ಲೆಲ್ಲಾ ಅತ್ಯಂತ ಮುಂದುವರಿದ ವಿದ್ವಾಂಸರಿಂದ, ವಾದ, ವಿವಾದಗಳಿಂದ ತುಂಬಿಹೋಗಿತ್ತು. ವಾಲ್ಟೇರ್,

ಪುಟ 8ಕ್ಕೆ



ಕೃಪೆ: ಇಂಡಿಯಾ ಕಾರ್ಟೂನ್ಸ್

ಸಿಟಿಜನ್ ಟಿಪ್ಪು

ಪುಟ 7 ರಿಂದ

ರೂಸೋಗಳ ಕಾಲ ಅದು. ಅದಕ್ಕೆ ಒಂದು ಶತಮಾನ ಮೊದಲೇ ಅಲ್ಲಿ ಆರಂಭವಾಗಿದ್ದ ಜ್ಞಾನೋದಯ ಕಾಲ (Age of enlightenment) ಸಾಮಾನ್ಯ ಪ್ರಜೆಗಳವರೆಗೂ ಹರಡಲಾರಂಭವಾಗಿತ್ತು. ಅಧ್ಯಾಪಕ ಬುಮಾರ್ಷ್‌ನ ಹೊಸಯುಗದ ಜ್ಞಾನದ ಪ್ರವಾಹದಲ್ಲಿ ತೇಲಾಡಿದವನಾಗಿದ್ದ.

ಬೂಮಾರ್ಷ್‌ನ ಶಿಕ್ಷಣದ ಪರಿಣಾಮ ಟಿಪ್ಪುವಿಗೂ ಜ್ಞಾನದಾಹ ಅಂಟಿಕೊಂಡಿತು. ಅದರ ಫಲವಾಗಿ ಮಗನ ಮದುವೆಯ ಸಮಯದಲ್ಲಿ ತಂದೆ ಹೈದರಾಲಿ ನೀನು ಬಯಸುವ ಕೊಡುಗೆ ಏನು ಎಂದು ಕೇಳಿದರೆ ಮಗ ಬಯಸಿದ್ದು ಪುಸ್ತಕ ಭಂಡಾರವನ್ನು. ಹೈದರಾಲಿಗೆ ಆಶ್ಚರ್ಯ. ಅಷ್ಟೊಂದು ಅರಾಬಿಕ್, ಪರ್ಷಿಯನ್ ಪುಸ್ತಕಗಳಿವೆ. ಕುರಾನ್ ಅನ್ನು ಬಗೆ ಬಗೆಯಲ್ಲಿ ಅಲ್ಲಿ ವರ್ಣಿಸಲಾಗಿದೆ, ಇನ್ನು ಏಕೆ ಪುಸ್ತಕಗಳು ಎಂದು. ನಾನು ಬಯಸಿದ್ದು ಈ ಪುಸ್ತಕಗಳನ್ನಲ್ಲ ಹೊಸಯುಗದ ಜ್ಞಾನಗಂಗೆಯನ್ನು ಎಂದು ಮಗ ವಿವರಿಸಿದ. ತಂದೆ ಮತ್ತೆ ಬೂಮಾರ್ಷ್‌ನ್ನು ಸಂಪರ್ಕಿಸಿ ಪುಸ್ತಕಗಳಿಗಾಗಿ ಯಾಚಿಸಿದಾಗ ಬುಮಾರ್ಷ್‌ನು ಫ್ರಾನ್ಸ್ ದೇಶವನ್ನು, ಅಲ್ಲಿ ಅಂದಿನ ಅತ್ಯಂತ ಹೆಸರು ಮಾಡಿದ್ದ ವಿದ್ವಾಂಸರಲ್ಲೊಬ್ಬನಾದ ವಾಲ್ಟೇರ್‌ನನ್ನು ಸಂಪರ್ಕಿಸಿದನಂತೆ. ಈಗ ವಾಲ್ಟೇರ್ ದರ್ಪ, ದಬ್ಬಾಳಿಕೆಗಳ ರಾಜ ಪ್ರಭುತ್ವವಿರುವ ಭಾರತದ ಒಂದು ರಾಜ್ಯದ ಸುಲ್ತಾನನಾಗುವವನಿಗೆ ಸ್ವಲ್ಪ ಜನಗಳ ಭಯ ಉಂಟಾಗುವಂತೆ ಮಾಡುತ್ತೇನೆ ಎಂದು ಯೋಚಿಸಿದನಂತೆ. (I will put the fear of the people into his head) ಅವುಗಳ ಫಲವಾಗಿ ಅಂದಿನ ಜ್ಞಾನ ಸಂಪತ್ತು ಪರ್ಷಿಯನ್, ಅರೇಬಿಕ್ ಭಾಷೆಗಳಿಗೆ ತರ್ಜುಮೆಯಾಗಿ ಟಿಪ್ಪುವಿನ ವಶವಾಯಿತು. ಅದರಲ್ಲಿ ಪ್ರಜಾ ಪ್ರಭುತ್ವದ ಮೊತ್ತಮೊದಲ ಗೀತೆ 'ಮಾನವನ ಹಕ್ಕುಗಳು' (Rights of Man) ಕೂಡ ಸೇರಿತ್ತು. ಈ ಎಲ್ಲ ಜ್ಞಾನದ ಫಲವಾಗಿ ಟಿಪ್ಪುವಿನಲ್ಲಿ ಅದಮ್ಯ ಜ್ಞಾನ ದಾಹ ಬೆಳೆಯಿತು. ಅಂದಿನಿಂದ ಫ್ರಾನ್ಸ್ ದೇಶದ ವಿದ್ವಾಂಸರ ಜೊತೆ ಸಂಪರ್ಕ ಬೆಳೆಸಿದ. ಅವನು ಅಂದು ಬರೆದ ಪತ್ರಗಳಿಗೆ ಟಿಪ್ಪು ಸುಲ್ತಾನ್ ಎಂದು ಸಹಿ ಹಾಕಲಿಲ್ಲ ಬದಲಾಗಿ 'ಸಿಟಿಜನ್ ಟಿಪ್ಪು' (ಟಿಪ್ಪು ಎಂಬ ಪ್ರಜೆ) ಎಂದು ಸಹಿ ಹಾಕಿದ್ದಾನೆ. ಅಂದು ಫ್ರಾನ್ಸ್‌ನಲ್ಲಿ ಸಿಟಿಜನ್ ಎಂದು ಕರೆದುಕೊಳ್ಳುವುದು ಫ್ರೆಂಚ್ ಕ್ರಾಂತಿಕಾರರಲ್ಲಿ ಅತ್ಯಂತ ತೀವ್ರಗಾಮಿಗಳಾಗಿದ್ದ ಜಾಕೋಬಿನ್ ಎಂಬ ಪಂಗಡದ್ದಾಗಿತ್ತು. ಈ ಜಾಕೋಬಿನ್‌ಗಳೋ ಫ್ರಾನ್ಸ್ ನಲ್ಲಿ ರಾಜಮನೆತನವನ್ನು ಬಂಧನದಲ್ಲಿರಿಸಿದ್ದು ಮತ್ತು ಅವರಿಗೆ ಗಿಲೆಟಿನ್ ಎಂಬ ಉಪಕರಣದ ಮೂಲಕ ಮರಣದಂಡನೆ ವಿಧಿಸಿದ್ದು. ಹೀಗೆ ಟಿಪ್ಪು ಗಣರಾಜ್ಯ, ಸ್ವಾತಂತ್ರ್ಯ, ಸಮಾನತೆಗಳ ಅರ್ಥವನ್ನು ಮೌಲ್ಯವನ್ನು ತಿಳಿದವನಾಗಿದ್ದ. ಅಮೇರಿಕನ್ ಸ್ವಾತಂತ್ರ್ಯದ ಹೋರಾಟವನ್ನು ಗಮನಿಸುತ್ತಿದ್ದ ಅವರ ಹೋರಾಟ ತನ್ನದೇ ಹೋರಾಟದ ಭಾಗವೆಂದು ಅವನಿಗೆ ಸಂತಸ ತಂದಿತ್ತು. ಇದೇ ಅವನನ್ನು ಸ್ವಾತಂತ್ರ್ಯಕ್ಕಾಗಿ ಪ್ರಾಣ ಅರ್ಪಿಸುವಂತೆ ಮಾಡಿತ್ತು. ಈ ಕಾರಣಕ್ಕಾಗಿಯೇ ಈ ಬರಹದಲ್ಲಿ ಎಲ್ಲಿಯೂ ಟಿಪ್ಪುವನ್ನು ಸಾಮಾನ್ಯವಾಗಿ ಇಂದು ಎಲ್ಲ ಕಡೆ ಕರೆಯುವಂತೆ ಟಿಪ್ಪುಸುಲ್ತಾನ್ ಎಂದು ಕರೆಯಲಿಲ್ಲ.



ವಿಚಾರಗಳನ್ನು ಅಂದಿನ ಸಮಯದ ನವಾಬಗಿರಿ, ರಾಜಶಾಹಿಯ ಸಂದರ್ಭದಲ್ಲಿ ಎಷ್ಟು ಜಾರಿಗೆ ತರಲು ಟಿಪ್ಪುವಿಗೆ ಸಾಧ್ಯವಾಯಿತು ಎಂಬುದು ಪ್ರತ್ಯೇಕ ಅಧ್ಯಯನದ ವಿಷಯ. ಒಂದು ಘಟನೆಯನ್ನು ಮಾತ್ರ ಇಲ್ಲಿ ನೆನಪಿಸಲಾಗುವುದು.

ಕೇರಳದ ರಾಜರುಗಳ ಜೊತೆ ಯುದ್ಧ ಮಾಡಿ ಮಲಬಾರ್ ಪ್ರದೇಶವನ್ನು ವಶಪಡಿಸಿಕೊಂಡಾಗ ಅಲ್ಲಿ ಕೆಳಜಾತಿಗಳ ಹೆಂಗಸರು ಸೊಂಟದ ಮೇಲೆ ಬಟ್ಟೆಯನ್ನೇ ಧರಿಸುವಂತಿರಲಿಲ್ಲ. ಆ ಸ್ಥಿತಿ ಇವನ ಗಮನಕ್ಕೆ ಬಂದಾಗ, ಟಿಪ್ಪು ಘೋಷಿಸಿದನಂತೆ "ಪುರುಷರಿಗೆ ಸರಿಯಾದದ್ದು ಮಹಿಳೆಯರಿಗೂ ಸರಿಯೇ" ಎಂದು ಅಂದರೆ ಪುರುಷರು ಸೊಂಟದ ಮೇಲೆ ಬಟ್ಟೆ ಧರಿಸುತ್ತಾರೆ ಎಂದರೆ ಮಹಿಳೆಯರಿಗೂ ಅದನ್ನು ಧರಿಸಲು ಅವಕಾಶವಿರಬೇಕು ಎಂದು. ಅದೇ ರೀತಿ ಭೂಮಿ ಯಾರದು ಎಂಬ ವಿಷಯದಲ್ಲಿಯೂ 'ಯಾರು ಭೂಮಿಯನ್ನು ಉಳುತ್ತಾರೋ ಅವರದೇ ಭೂಮಿ' ಎಂದನಂತೆ. ಉಳುವವನೇ ಹೊಲದೊಡೆಯ ಎನ್ನುವ ಮಾತು ಇನ್ನೂ ಬಹುಭಾಗಗಳಲ್ಲಿ ಕನಸಾಗಿರುವ ಕರ್ನಾಟಕದಲ್ಲಿ ಈ ಮಾತುಗಳನ್ನು ಇಂದು ನೆನಸಿಕೊಳ್ಳಬೇಕು. ಈ ವಿಚಾರಗಳನ್ನು ಮುಂದುವರೆಸಬೇಕು, ಬೆಳೆಸಬೇಕು.

ಹೋರಾಟಗಾರ........ ಆಡಳಿತಗಾರ


ಪುಟ 7 ರಿಂದ

ಅಸ್ತಿಭಾರ ಹಾಕಲಾಗಿದ್ದ 'ಗೋಪುರ ದೇವಾಲಯದ' ನಿರ್ಮಾಣ ಕಾರ್ಯವನ್ನು ಟಿಪ್ಪು ಹತ್ತು ಸಾವಿರ ಹೊನ್ನುಗಳನ್ನು ನೀಡಿ ಪೂರೈಸಿದ ದಾಖಲೆಗಳಿವೆ.

ಆದ್ದರಿಂದ ಇತಿಹಾಸವನ್ನು ತಿರುಚುವ ಕೋಮುವಾದಿಗಳ ಪ್ರಯತ್ನ ಇದರಲ್ಲಿ ಎದ್ದು ಕಾಣುತ್ತದೆ. ನಮಗೆ ಟಿಪ್ಪುವನ್ನು ವೈಭವೀಕರಿಸುವುದಾಗಲೀ, ಅಥವಾ ಮತಾಂಧತೆಯ ಮಸಿ ಬಳಿಯುವುದಾಗಲೀ ಆಗಬಾರದು. ಅದೇ ಸಂದರ್ಭದಲ್ಲಿ ಬ್ರಿಟಿಷ್ ಸಾಹತುಶಾಹಿಯ ವಿರುದ್ಧದ ಟಿಪ್ಪುವಿನ ಹೋರಾಟವನ್ನು ಮರೆಯಬಾರದು. ಅಂದೂ ವ್ಯವಸ್ಥೆಯ ಪರವಾಗಿದ್ದು, ಬ್ರಿಟಿಷರ ಜೊತೆ ಸೇರಿ ಟಿಪ್ಪುವನ್ನು ವಿರೋಧಿಸಿದ ಶಕ್ತಿಗಳು ಮತ್ತು ಇಂದಿಗೂ ಆ ವ್ಯವಸ್ಥೆಯನ್ನು ರಕ್ಷಿಸುವ ಸಂಘ ಪರಿವಾರದ ಜನಗಳು ಟಿಪ್ಪುವಿನಲ್ಲಿ ಮತಾಂಧತೆಯ ವಾಸನೆಯನ್ನು ಹುಡುಕುತ್ತಾ ಇತಿಹಾಸವನ್ನು ತಿರುಚಲು ಹೊರಟಿದ್ದಾರೆ. ಆದರೆ ಜನತೆ ಅಂದೂ ಇಂತಹ ಪ್ರಯತ್ನಗಳನ್ನು ತಿರಸ್ಕರಿಸಿದ್ದಾರೆ. ಇಂದೂ ಸಂಘ ಪರಿವಾರದ ಪ್ರಯತ್ನಗಳನ್ನು ಸೋಲಿಸುತ್ತಾರೆ. ಇತಿಹಾಸ ಸತ್ಯವನ್ನು ಮಾತ್ರ ಸರ್ವಥಾ ಉಳಿಸಿಕೊಳ್ಳುತ್ತದೆ.

ಟಿಪ್ಪು ವೀರಮರಣ ಅಪ್ಪಿದ ನಾಲ್ಕನೇ ಮೈಸೂರು ಯುದ್ಧದ ಒಂದು ದೃಶ್ಯ - ಕಲಾವಿದ ಕಂಡಂತೆ





ಇ.ಎಂ.ಎಸ್. ಭವನ ನಿಧಿ

ಹಿಂದಿನ ಮೊತ್ತ	ರೂ. 10,57,486-50
ಎನ್. ಅನಂತ ಪದ್ಮ ನಭಎಲ್.ಐ.ಸಿ	500
ಜಿ. ಸ್ವರ್ಣಲತ	101
ಕೆ. ನಾಗರತ್ನ	100
ಎಸ್.ಕೆ. ಜಗದೀಶ್	50
ಡಿ.ಬಿ. ರಾಜಶೇಖರ್	100
ಸಂಧ್ಯಾ .ಆರ್	100
ಎಂ.ವಿ. ವೆಂಕಮ್ಮ	100
ಪ್ರೇಮಲತಾ ಪಿ. ಕೌಶಿಕ್	100
ಎಲ್. ರೋಜಮಣಿ	100
ಬಿ. ಶ್ರೀನಿವಾಸ್	100
ಅರುಣಲತ	100
ಬೆಂಗಳೂರು ಎಲ್.ಐ.ಸಿ. ಸಂಗಾತಿಗಳು	2250
ಬಿ. ಭಾಸ್ಕರ ಸೋಮಯಾಜಿ	1000
ಎನ್. ನಾಗರಾಜ್	250
ಡಿ. ಸುರೇಶ್	250
ಪ್ರಭಾಕರ ಕುಳಗೋಡು	250
ಎನ್. ಹೆಚ್. ವಿಜಯ ಕುಮಾರ್	200
ಎಸ್. ವೆಂಕಟಕೃಷ್ಣ (ಜಿ.ಐ.ಸಿ.)	300
	13595
ಇ.ಎಂ.ಎಸ್ ಭವನ ನಿಧಿ	
ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯಿಂದ	
ಡಾ. ರಮೇಶ್ ಜಗಳೂರು	50
ಕೆ.ಪಿಯಾಸಾಬಾ ಹರಪನಹಳ್ಳಿ	1000
ಶ್ರೀಮತಿ ಮಧುಮಾಲ ಬಡಿಗೇರ್	500
ಸುರೇಶ್ ಪತ್ತರ್ ಹರಿಹರ	500
ಆರ್.ಬಿ.ಅಂಗಡಿ	500
ವಿ.ವಿಜಯಭಾಸ್ಕರ್	500
ಡಿ.ಶ್ರೀನಿವಾಸ್ ಜಗಳೂರು	5000
ಲತೀಫ್ ಸಾಬ್	50
ಕೆ.ಎ.ದಾರಾಪೀರ್	100
ವೈ.ಹನುಮಂತಪ್ಪ	100
ಬಿ.ಎಸ್.ಪ್ರಕಾಶ್ ಹರಿಹರ	100
ಬೊಂಗಾಳೆ & Sons	101
ರಾಘವೇಂದ್ರ ಸ್ಟೋರ್ಸ್	51
ಪಿ.ವೈ.ಪಾಟೀಲ್	100
ಜಬ್ಬಾರ್ ಸಾಬ್	40
ಬಾಬಾಜಾನ್	50
ಡಿ.ಜಿ.ಜೋಶಿ	100
ಪಿ.ಜಿ.ಗೌಡರ್	100
ಅಕ್ರಮ್ ಭಕ್ಷ್	50
ಯಾಸಿನ್	101
ಕೆ.ಮಹಂತೇಶ್ ದಾವಣಗೆರೆ	500
ರಾಣೆಬೆನ್ನೂರು ನೇಕಾರರ ಸಂಘದ ಸದಸ್ಯರಿಂದ	2005
ವಿ.ಟಿ.ಸುಂದರ್ ದಾವಣಗೆರೆ	100
ಡಾ. ಗೋಪಾಲ್ ದಾಖಡೆ ಧಾರವಾಡ	200
ಡಾ. ವಿ.ಎನ್.ದೇಶಪಾಂಡೆ, ಧಾರವಾಡ	400
ಪ್ರೊ. ಅಶೋಕ್ ಸೆಟ್ಟರ್	100
ಕೆ.ಆರ್. ಭಟ್, ಹೋಟೆಲ್ ಅರ್ಜುನ್, ಹರಿಹರ	501
ಸಿಪಿಐ(ಎಂ) ಮಂಡ್ಯ ಪ್ರಾದೇಶಿಕ ಸಮಿತಿಯಿಂದ	
ಟಿ.ಯಶವಂತ	100
ಎನ್.ಎಸ್. ನಂದೀಶ್	100
ನಾರಾಯಣ	200
ಪಿ.ಕೆ.ವಿ.ಲತೀಪ್	500
ನಾಗರಾಜಯ್ಯ	500
ಜವರಯ್ಯ	200
ಜಿ.ರಾಮಕೃಷ್ಣ	200
ಎನ್.ಎಲ್.ಭರತ್ ರಾಜ್	500
ಡಿ.ಪ್ರಕಾಶ್	500
ಟಿ.ಎಲ್.ಕೃಷ್ಣೇಗೌಡ	500
ಎಂ.ಪುಟ್ಟಮಾದಯ್ಯ	200
ಕೃಷ್ಣ	50
ಗಂಗಾಧರ	200
ಕೆ.ಎಂ.ಪುಟ್ಟಣ್ಣ	50
ತಮ್ಮಯ್ಯ	50
ಜಯಕುಮಾರ್	50
ಲಿಂಗರಾಜು	50
ಒಟ್ಟು	10,80,286.50

ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಿಂದ ಮಾನ್ಸಂಟೋ ಸಂಶೋಧನಾ ಕೇಂದ್ರವನ್ನು ಹೊರ ಹಾಕಬೇಕು

ಮುಖ್ಯಮಂತ್ರಿಗಳಿಗೆ ಶ್ರೀನಿವಾಸಪುರ ರೈತರ ಮನವಿ

ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ಮಾನ್ಸಂಟೋ ಕಂಪನಿಯ ಸಂಶೋಧನಾ ಕೇಂದ್ರ ಸ್ಥಾಪಿಸಲು ಅವಕಾಶ ನೀಡಿರುವುದರಿಂದ ಸಾರ್ವಜನಿಕ ರಂಗದಲ್ಲಿ ರಚಿಸಲ್ಪಟ್ಟ ಹಾಗೂ ದೇಶದ ಸ್ವಾವಲಂಬಿ ತಂತ್ರಜ್ಞಾನವನ್ನು, ವಿಜ್ಞಾನವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿದ್ದ ಭಾರತೀಯ ವಿಜ್ಞಾನ ಸಂಸ್ಥೆ ಸ್ವಾತಂತ್ರ್ಯ, ಸ್ವಾವಲಂಬನೆಗೆ ತಿಲಾಂಜಲಿ ನೀಡಿ ವಿದೇಶಿ ಬಂಡವಾಳದಾರರ ಕಾಲ ಬುಡಕ್ಕೆ ಸ್ವಾವಲಂಬಿ ಕೃಷಿಯನ್ನು ತಳ್ಳಿ ತನ್ನನ್ನು ಸೇವಕನನ್ನಾಗಿ ಮಾಡಿಕೊಂಡಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಶ್ರೀನಿವಾಸಪುರ ತಾಲೂಕು ಸಮಿತಿ ಮುಖ್ಯಮಂತ್ರಿಗಳಿಗೆ ಕಳಿಸಿರುವ ಮನವಿ ಪತ್ರದಲ್ಲಿ ಖೇದ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರ ಕೃಷಿ ಸಂಶೋಧನೆಗೆ ವ್ಯಾಪಕ ಹಣ ನೀಡದೆ ಅಭಿವೃದ್ಧಿಗೆ ಅಡ್ಡಿ ಉಂಟಾಗಿದೆ. ಬಹು ರಾಷ್ಟ್ರೀಯ ಕಂಪನಿಗಳಿಗೆ ಬೀಜದ ಮಾರುಕಟ್ಟೆಯ ಮೇಲೆ ನಿಯಂತ್ರಣ ಹೊಂದಲು ದೇಶದ ಆರ್ಥಿಕತೆಯನ್ನು ಕೊಳ್ಳೆ ಹೊಡೆಯಲು ಅವಕಾಶ ನೀಡಿದೆ.

ದೇಶೀಯ ಸಂಶೋಧನೆಯನ್ನು ಮುಂದುವರೆಸಿ, ಸ್ವಾವಲಂಬಿ ಹಾದಿ ಹಿಡಿಯಲು ನೆರವಾಗುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ಕ್ಷೇತ್ರದಲ್ಲಿ ಹೆಚ್ಚಿನ ಹಣ ಹೂಡಿಕೆ ಮಾಡಬೇಕು ಮತ್ತು ಮಾನ್ಸಂಟೋ ಕಂಪನಿಯನ್ನು ವಿಜ್ಞಾನ ಮಂದಿರದ ಆವರಣದಿಂದ ಹೊರ ಹಾಕಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಘಟಕ ಒತ್ತಾಯಿಸಿದೆ.

ಬೆಳ್ತಂಗಡಿ ತಾಲೂಕು ರೈತಸಂಘದ ಧರಣಿ

ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲೂಕು ಸಮಿತಿ ವಿದ್ಯುತ್ ಸಮಸ್ಯೆವಿರುದ್ಧ ಕೆ.ಇ.ಬಿ. ಕಚೇರಿಯಲ್ಲಿ, ಸ್ಥಳೀಯ ರೈತರ ಇತರ ಸಮಸ್ಯೆಗಳ ವಿರುದ್ಧ ತಾಲೂಕು ಕಚೇರಿಯೆದುರು ಧರಣಿ ನಡೆಸಿತು. ಪ್ರತಿಭಟನೆಯ ನೇತೃತ್ವವನ್ನು ತಾಲೂಕು ರೈತಸಂಘದ ಅಧ್ಯಕ್ಷ ರುಕ್ಮಯ ಭಂಡಾರಿ, ಕಾರ್ಯದರ್ಶಿ ಹರಿದಾಸ್ ವಹಿಸಿದ್ದರು. ಜಿಲ್ಲಾ ರೈತ ಸಂಘದ ಅಧ್ಯಕ್ಷ ಅಬ್ರಾಹಂ ಕರ್ಕಡ, ಜೊತೆ ಕಾರ್ಯದರ್ಶಿ ಬಿ.ಎಂ. ಭಟ್, ಸಿ.ಪಿ.ಐ(ಎಂ) ತಾಲೂಕು ಕಾರ್ಯದರ್ಶಿ ಶಿವಕುಮಾರ್, ತಾಲೂಕು ಬೀಡಿ ಕೆಲಸಗಾರ ಸಂಘದ ಕಾರ್ಯದರ್ಶಿ ಮಂಜುನಾಥ ಮೊದಲಾದವರು ಉಪಸ್ಥಿತರಿದ್ದರು.

ಮೊದಲಿಗೆ ಮೆರವಣಿಗೆಯಲ್ಲಿ ಕೆ.ಇ.ಬಿ.ಗೆ ತೆರಳಿದ ರೈತರು ಅಲ್ಲಿ ಮುಖ್ಯಮಂತ್ರಿಗೆ ಒಂದು ಮನವಿ ಕಳುಹಿಸಿ, ಸ್ಥಳೀಯ ಸಮಸ್ಯೆಗಳ ಪರಿಹರಿಸುವ ಭರವಸೆ ಪಡೆದು ಹಿಂತಿರುಗಿದರು. ಮೆರವಣಿಗೆಯಲ್ಲಿ ತಾಲೂತು ಕಚೇರಿಗೆ ತೆರಳಿ ಧರಣಿ ಕೂತ ರೈತರನ್ನುದ್ದೇಶಿಸಿ ಅಬ್ರಾಹಂ ಕರ್ಕಡ ಹರಿದಾಸ್, ಬಿ.ಎಂ. ಭಟ್ ಮಾತನಾಡಿದರು. ಅಕ್ರಮ ಸಕ್ರಮ ಅರ್ಜಿಯ ತ್ವರಿತ ವಿಲೇವಾರಿ ಮಾಡಿ ರೈತರಿಗೆ ಹಕ್ಕುಪತ್ರ ಒದಗಿಸಲು ಕ್ರಮ, 5 ಸೆಂಟ್ಸ್ ನಿವೇಶನದಾರರು ಸುಮಾರು 25 ವರ್ಷಗಳಿಂದ ಕೂತವರಿಗೆ ನಿವೇಶನ ಹಕ್ಕುಪತ್ರ ತಕ್ಷಣ ಕೊಡಬೇಕು. ಅಕ್ರಮ ಸಕ್ರಮ ಫಲಾನುಭವಿಗಳ ಭೂಮಿ ಲಂಚ ಪಡೆಯದೆ ಉಚಿತ ಅಳತೆ ಆಗಬೇಕು, ರೈತರ ದಾಖಲೆಗಳು ತಕ್ಷಣ ಸಿಗಬೇಕು, ರೈತರ ಪಂಪಿಗೆ ಉಚಿತ ವಿದ್ಯುತ್ ಸಿಗಬೇಕು, ಅರಣ್ಯ ಇಲಾಖಾ ಭೂಮಿಯಲ್ಲಿ ಕುಳಿತ ರೈತರಿಗೂ ಹಕ್ಕು ಪತ್ರ ನೀಡಬೇಕು, ಅವರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಅಧಿಕೃತ ಪ್ರಕಟಣೆ ಮಾಡಬೇಕು, ರೇಶನ್ ಅಕ್ಕಿ, ಸಕ್ಕರೆ ಮೊದಲಾದ ವಸ್ತುಗಳ ಬೆಲೆ ಇಳಿಸಬೇಕು ಇವೇ ಮೊದಲಾದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲಾಯ್ತು. ತಹಶೀಲ್ದಾರರು ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಬಳಿಕ ಧರಣಿ ಕೂತ ರೈತರು ಹಿಂತಿರುಗಿದರು. ಶಿವಕುಮಾರ್ ವಂದಿಸಿದರು.



ಕುಂದಾಪುರದ ಬಹಿರಂಗ ಸಭೆಯ ದೃಶ್ಯ

ಪುಟ 4 ರಿಂದ

ಕೃಷಿ ಕೂಲಿಗಾರರು ಇದೇ ಮೊದಲ ಬಾರಿಗೆ ಸುತ್ತಮುತ್ತಲ ಊರುಗಳಿಂದ ನಾಲ್ಕು ಮೆರವಣಿಗೆಗಳಲ್ಲಿ ಬಂದು ಕಂಡ್ಲೂರಿನಲ್ಲಿ ಸಮಾವೇಶಗೊಂಡು ಸಾರ್ವಜನಿಕ ಸಭೆಯನ್ನು ನಡೆಸಿದರು. ಮೂಡ್ಲುಕಟ್ಟೆ, ಮಾವಿನ ಕಟ್ಟೆ, ಗುಲ್ವಾಡಿ ಮತ್ತು ನೆಲ್ಲಿಕಟ್ಟೆಗಳಿಂದ ಕೆಂಪು ಸಮವಸ್ತ್ರಧಾರಿ ಸ್ವಯಂ ಸೇವಕರ ಮುಂಚೂಣಿಯಲ್ಲಿ ಬ್ಯಾಂಡ್ ವಾದ್ಯ ವೇಷಭೂಷಣಗಳೊಂದಿಗೆ ನಾಲ್ಕು ಮೆರವಣಿಗೆಯಲ್ಲಿ ಬಂದ ಶ್ರಮಜೀವಿಗಳು ಈ ಪ್ರದೇಶಗಳಲ್ಲಿ ಕೆಂಬಾವುಟದ ಕಂಪನ್ನು ಪಸರಿಸಿದರು. ಘೋಷಣೆಗಳನ್ನು ಮುಗಿಲು ಮುಟ್ಟಿಸಿದರು.

ಕಂಡ್ಲೂರು ಗ್ರಾಮಪಂಚಾಯಿತಿ ಕಚೇರಿ ಬಳಿಯ ಮೈದಾನದಲ್ಲಿ ಕೆಂಪು ಪತಾಕೆ ಬಾವುಟಗಳಿಂದ ಅಲಂಕೃತಗೊಂಡ ವೇದಿಕೆ ಬಳಿ ನೆರೆದ ಜನರನ್ನುದ್ದೇಶಿಸಿ ಪತ್ರಕರ್ತ ವಿಶ್ವ ಕುಂದಾಪುರ ಅಭಿನಂದಿಸಿದರು. ಬೀಡಿ ಕಾರ್ಮಿಕರ ಮುಖಂಡ ಮಹಾಬಲ ಹೊಡೇರ ಹೋಬಳಿ ಮಾತನಾಡಿದರು.

ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಸದಸ್ಯ ಅಬ್ರಹಾಂ ಕಾರ್ಕಡ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯದಲ್ಲಿ ಬಿಜೆಪಿ ನಡೆಸಿದ ಸಂಕಲ್ಪ ಯಾತ್ರೆಯನ್ನು ಪ್ರಸ್ತಾಪಿಸಿದ ಅವರು ರಥಯಾತ್ರೆಯಿಂದ ಈ ಸಂಕಲ್ಪಯಾತ್ರೆವರೆಗೆ ಬಿಜೆಪಿ ನಡೆಸಿರುವುದೆಲ್ಲ ದುರಂತಕ್ಕೆ ಎಡೆಕೊಟ್ಟ ದುಷ್ಕೃತ್ಯಗಳೇ ಎಂದು ಲೇವಡಿ ಮಾಡಿದರು.

ಹಲವು ಪಂಚಾಯಿತಿ ಸದಸ್ಯರು ಉಪಾಧ್ಯಕ್ಷರು, ಅಧ್ಯಕ್ಷರು, ಸ್ಥಳೀಯ ಮುಖಂಡರ ಸಹಿತ ಅನೇಕ ಸಂಗಾತಿಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶೀನ ಭಂಡಾರಿ ಸ್ವಾಗತಿಸಿದರು. ಗೋಪಾಲ ಕುಲಾಲ್ ವಂದಿಸಿದರು.

ಮೆರವಣಿಗೆ ಹಾಗೂ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ 2000ಕ್ಕೂ ಮಿಕ್ಕಿದ ಜನರಲ್ಲಿ ಸುಮಾರು ಅರ್ಧದಷ್ಟು ಮಹಿಳೆಯರೇ ಇದ್ದದ್ದು ವಿಶೇಷವಾಗಿತ್ತು. ವೇದಿಕೆ ಮೇಲೆಯೂ ಬೀಡಿ ಕಾರ್ಮಿಕರನ್ನು ಪ್ರತಿನಿಧಿಸುವ ಮೂವರು ಮುಖಂಡರು ಇದ್ದರು.

ಉಡುಪಿಯಲ್ಲಿ ಮೆರವಣಿಗೆ - ಸಭೆ

ಉಡುಪಿಯ ಕಲ್ಯಾಣಂ ಸಂತೆ ಕಟ್ಟೆಯಲ್ಲಿ ನಡೆದ ಮೇ ದಿನಾಚರಣೆಯ ಸಭೆಯ ಮೊದಲು ಅಂಬಾಗಿಲಿನಿಂದ ಕಲ್ಯಾಣಪುರ ಸಂತೆಕಟ್ಟೆವರೆಗೆ ಬ್ಯಾಂಡ್ ವೇಷಭೂಷಣಗಳಿಂದ ಕೂಡಿದ ಹಂಚು ಕಾರ್ಮಿಕರ, ಬೀಡಿ ಕಾರ್ಮಿಕರ, ಗೋಡಂಬಿ ಕಾರ್ಮಿಕರ ಬೃಹತ್ ಮೆರವಣಿಗೆ ನಡೆಯಿತು. ಈ ಮೆರವಣಿಗೆಯ ನೇತೃತ್ವವನ್ನು ಸಾಧು ಅಮೀನ್, ಗುರುರಾಜ್ ಸೆಟ್ಟಿಗಾರ್, ದೋಗು ಸುವರ್ಣ, ಗೋಪಾಲ ಶೆಟ್ಟಿಗಾರ್ ಇವರು ವಹಿಸಿದ್ದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯುನ ಉಡುಪಿ ದ.ಜಿಲ್ಲಾ ಅಧ್ಯಕ್ಷ ಸಿ. ನಂಜುಂಡೇಶ್‌ರವರು ಇನ್ನು ಮುಂದೆ ಬಿ.ಜೆ.ಪಿ ಅಧಿಕಾರಕ್ಕೆ ಬಂದರೆ ಈ ದೇಶದ ಕಾರ್ಮಿಕರು ತಮ್ಮ ಹಕ್ಕುಗಳನ್ನು ಕಳೆದುಕೊಂಡು ತೀವ್ರವಾದ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ ಎಂದರು.

ಸಿ.ಐ.ಟಿ.ಯು ಹಿರಿಯ ಮುಂದಾಳು ಡೇವಿಡ್ ಎ. ಕರ್ಕಡರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಆರಂಭದಲ್ಲಿ ಸಿ.ಐ.ಟಿ.ಯು ಜಿಲ್ಲಾ ಸಮಿತಿ ಉಪಾಧ್ಯಕ್ಷ ಪಿ. ವಿಶ್ವನಾಥ ರೈ ಸ್ವಾಗತ ಭಾಷಣ ಮಾಡಿದರು. ಸಂಜೀವ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ರಮೇಶ ಮೆಂಡನ್ ವಂದನಾರ್ಪಣೆ ಮಾಡಿದರು.

ಬಂಟ್ವಾಳ: ತಾಲ್ಲೂಕಿನ ಮಾಣಿ ಕಾಫಿಕಾಡು ಎಂಬಲ್ಲಿಂದ ಬೀಡಿ ಕಾರ್ಮಿಕರ ಮೆರವಣಿಗೆಯನ್ನು ಸಂಘಟಿಸಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಬಂಟ್ವಾಳ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಎ.ವಿ. ರಮೇಶರು ವಹಿಸಿದರು.

ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಬಿ. ವಾಸುಗಟ್ಟಿಯವರು ಸಭೆಯನ್ನುದ್ದೇಶಿಸಿ ಮಾತನಾಡಿ ಆರ್ಥಿಕ ಸ್ವಾವಲಂಬನೆ, ಸಾರ್ವಭೌಮತೆ, ಸಮಗ್ರತೆಗಳನ್ನು ರಕ್ಷಿಸಿಕೊಳ್ಳಲು ಕಾರ್ಮಿಕ ವರ್ಗ ವಿನಾಶಕಾರಿ ಆರ್ಥಿಕ ನೀತಿಯ ವಿರುದ್ಧ ತನ್ನ ಹೋರಾಟವನ್ನು ಮುಂದುವರಿಸುವುದು ಎಂದು ತಿಳಿಸಿದರು.

ವೇದಿಕೆಯಲ್ಲಿ ಬಂಟ್ವಾಳ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಬಿ.ನಾರಾಯಣ ಬಂಟ್ವಾಳ ತಾಲೂಕು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಬಿ. ಸಂಜೀವ ಬಂಗ್ರ ಮೊದಲಾದವರು ಉಪಸ್ಥಿತರಿದ್ದರು.

ಬಿಜಾಪುರದಲ್ಲಿ ವೈಶಿಷ್ಟ್ಯ ಪೂರ್ಣ ಮೇ ದಿನಾಚರಣೆ : ಸಿಐಟಿಯು ಒಳಗೊಂಡ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯು ಬಿಜಾಪುರದಲ್ಲಿ ಜಿಲ್ಲಾ ಸಮಿತಿ ಮತ್ತು ರಾಜ್ಯ ಅಲ್ಪಸಂಖ್ಯಾತ ಕಲ್ಯಾಣ ಸಂಸ್ಥೆಗಳ ನೇತೃತ್ವದಲ್ಲಿ ಬಿಜಾಪುರದಲ್ಲಿ ವೈಶಿಷ್ಟ್ಯಪೂರ್ಣ ಮೇ ದಿನಾಚರಣೆ ಆಚರಿಸಲಾಯಿತು. ಕೆಂಪುವಸ್ತ್ರ ಧರಿಸಿದ ಹಮಾಲರು, ಬ್ಯಾಂಕ್, ಎಲ್‌ಐಸಿ, ನಗರ ಸಭೆ ನೌಕರರು, ಔಷಧ ಕಂಪನಿಗಳ ಪ್ರತಿನಿಧಿಗಳು, ಜನವಾದಿ ಮಹಿಳಾ ಸಂಘಟನೆಯ ಮಹಿಳೆಯರ ಜೊತೆಯಲ್ಲಿ ಕಿರಾಣಿ ಬಜಾರ ಹಮಾಲರ ಸಂಘ ಮತ್ತು ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಸಂಸ್ಥೆಯವರು ಬಾಲ ಕಾರ್ಮಿಕರಿಗಾಗಿ ಬಿಜಾಪುರ - ಬಾಗಲಕೋಟೆ ಜಿಲ್ಲೆಗಳಲ್ಲಿ ಶಿಕ್ಷಕಿಯರು, ಮೇಲ್ವಿಚಾರ ನಡೆಸುತ್ತಿರುವ ಶಾಲೆಗಳ ಮೂರು ನೂರಕ್ಕೂ ಮೀರಿದ ಶಿಕ್ಷಕಿಯರು ಅವರ ಮೇಲ್ವಿಚಾರಕರು ಸೇರಿಕೊಂಡು ಮೇ ದಿನದ ಮೆರವಣಿಗೆಗೆ ಹೊಸ ಮೆರಗುಂಟು ಮಾಡಿದರು. ಕಾರ್ಮಿಕ ಸಂಘಗಳ ರಾಷ್ಟ್ರೀಯ ವೇದಿಕೆ, ಸಿಐಟಿಯು, ರೈತ ಸಂಘ, ಅಲ್ಪಸಂಖ್ಯಾತರ ಕಲ್ಯಾಣ ಸಂಸ್ಥೆಗಳ ಜೊತೆಯಲ್ಲಿ ಕೆಂಬಾವುಟ ಮೆರೆಯುತ್ತಿತ್ತು. 'ವಿಶ್ವದ ಕಾರ್ಮಿಕರೇ ಒಂದಾಗಿ' ಎಂಬ ಘೋಷಣೆಯ ಜೊತೆಯಲ್ಲಿ ಯುಗೋಸ್ಲಾವಿಯ - ಇರಾಕ್ ಮೇಲೆ ಬಾಂಬ್ ದಾಳಿ ಮಾಡುವ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ ಎಂಬ ಘೋಷಣೆಗಳು ಗಗನ ಮುಟ್ಟುತ್ತಿದ್ದವು. ಮತೀಯ ಶಕ್ತಿಗಳ ಒಕ್ಕೂಟದ ವಾಜಪೇಯಿ ಸರಕಾರದ ಪತನದ ಹಿನ್ನೆಲೆಯಲ್ಲಿ ದೇಶದ ಐಕ್ಯತೆ - ಸಾರ್ವಭೌಮತ್ವವನ್ನುಳಿಸಲು ಕಾರ್ಮಿಕರ-ದುಡಿಯುವ ಜನರ ಹಿತರಕ್ಷಣೆಗಾಗಿ ಕಾರ್ಮಿಕರೂ, ಮಧ್ಯಮ ವರ್ಗದ ನೌಕರರೂ ಮಹಿಳೆಯರೂ, ಶಿಕ್ಷಕರೆಲ್ಲಾ ಒಂದಾಗಿ ಹೋರಾಟ ನಡೆಸಬೇಕೆಂಬ ಸಂದೇಶವನ್ನು ಬೀರುವ ಸಂಕೇತ ವಿಜಾಪುರದಲ್ಲಿ ನಡೆದ ಮೇ ದಿನಾಚರಣೆಯಾಗಿತ್ತು.

ಸಿದ್ದೇಶ್ವರ ಗುಡಿಯಿಂದ ಹೊರಟ ಬೃಹತ್ ಮೆರವಣಿಗೆ ಊರಲ್ಲಿ ಸಂಚರಿಸಿ ಕೆಂಗಲ್ ಹನುಮಂತರಾಯ್ ರಂಗ ಮಂದಿರದಲ್ಲಿ ಸಾರ್ವಜನಿಕ ಸಭೆಯಾಗಿ ಪರಿವರ್ತನೆ ಗೊಂಡಿತು. ಹಿರಿಯ ಕಾರ್ಮಿಕ ಮುಖಂಡ ಎನ್.ಕೆ. ಉಪಾಧ್ಯಾಯರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜನತಾ ದಳದ ಶಾಸಕ ಶಿವಾನಂದಪಾಟೀಲ, ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಮನ್ನೂ ಸಾಬ ಕಲಾದಗಿ, ಬ್ಯಾಂಕ್ ನೌಕರರ ಅಧ್ಯಕ್ಷ ವಿ.ಎಂ.ಕಾಳೆ, ಮಾಜಿ ಶಾಸಕ ಬೆಕಿನಾಳಕರ, ಹಮಾಜಿ ಬಿ.ಎಲ್.ಡಿ. ಅಧ್ಯಕ್ಷ ರಿಯಾಜ್ ಫರೂಕಿ, ಅಲ್ಪಸಂಖ್ಯಾತರ ಕಲ್ಯಾಣ ಸಂಸ್ಥೆಯ ಕಾರ್ಯದರ್ಶಿ ಎ.ವೈ.ಮುದ್ನಾಳ್ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಎನ್.ಕೆ. ಉಪಾಧ್ಯಾಯ ಬಿಜಾಪುರದಲ್ಲಿ 1945 ರಲ್ಲಿ ಪ್ರಥಮ ಮೇ ದಿನ ಆಚರಿಸಿದ್ದನ್ನು ನೆನಪಿಸಿ, ಶೋಷಣೆ ರಹಿತ ಸಮಾಜ ನಿರ್ಮಾಣಕ್ಕೆ ಕಾರ್ಮಿಕ ವರ್ಗ ದುಡಿಯಬೇಕೆಂದರು.

ಶಾಸಕ ಶಿವಾನಂದ ಪಾಟೀಲರು ಭಾಷಣ ಮಾಡುತ್ತಾ ಕಾರ್ಮಿಕರನ್ನು ಶೋಷಣೆಯಿಂದ ಪಾರು ಮಾಡಲು ಕಾರ್ಲ್‌ಮಾರ್ಕ್ಸ್‌ರ ಧ್ಯೇಯ ಮತ್ತು ಪ್ರಯತ್ನವನ್ನು ವಿವರಿಸಿ, ಸೋವಿಯತ್ ದೇಶದಲ್ಲಿ ಕಮ್ಯುನಿಸ್ಟ್ ಆಡಳಿತ ಇಲ್ಲದಂತಾಗಿ, ಜಗತ್ತಿನ ಕಾರ್ಮಿಕರಿಗೆ ಅಪಾರ ಹಾನಿಯಾಗಿದೆಯೆಂದು ಹೇಳಿ, ಕೆಲಸಗಾರರು ಶೋಷಣೆಯ ವಿರುದ್ಧ ಹೋರಾಡಲು ಕರೆ ನೀಡಿದರು. ರಿಯಾಜ್ ಫರೂಕಿಯವರು ತಮ್ಮ ಭಾಷಣದಲ್ಲಿ ರೈತ-ಕಾರ್ಮಿಕ ಶೋಷಣೆ ಯಾವ ರೀತಿ ನಡೆಯುತ್ತಿದೆಂಬುದನ್ನು ವಿವರಿಸಿ, ಕಮ್ಯುನಿಸ್ಟ್ ಪಾರ್ಟಿಯಿಂದಲೇ ಶೋಷಿತ ವರ್ಗಕ್ಕೆ ರಕ್ಷಣೆ ದೊರಕುತ್ತದೆಂದರು. ಸುರೇಕಾ ರಜಪೂತ ಅವರು ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ಅನ್ಯಾಯ, ಶೋಷಣೆಗಳನ್ನು ವಿವರಿಸಿ ನೆರೆದಿದ್ದ ಮಧ್ಯಮ ವರ್ಗದ ಮಹಿಳೆಯರಲ್ಲಿ ಸ್ಫೂರ್ತಿ ತುಂಬಿದರು. ರೈತ ಮುಖಂಡ ಭೀಮಸಿ ಕಲಾದಗಿಯವರು ರೈತ-ಕಾರ್ಮಿಕರ ಶೋಷಣೆ, ಭ್ರಷ್ಟಾಚಾರ, ಲಂಚಗುಳಿತನಗಳ ಕುರಿತು ವೀರಾವೇಶದಿಂದ ಭಾಷಣ ಮಾಡಿ ಹುರಿದುಂಬಿಸಿದರು. ಮನ್ನೂ ಸಾಬ ಕಲಾದಗಿ ಮತ್ತು ಎ.ವೈ.ಮುದ್ನಾಳ್ ಅವರು ಜಾತಿ ಸೌಹಾರ್ದತೆ, ದುಡಿಯುವ ಜನರ ಐಕ್ಯತೆ ಕುರಿತು ಮಾತಾಡಿದರು. ಸೀತಾರಾಂ ಯೆಚೂರಿಯವರು ಬರೆದ 'ಬಿಜೆಪಿಯ ಒಂದು ವರ್ಷದ ವಿನಾಶಕಾರಿ ಆಡಳಿತೆ' ಪುಸ್ತಕವನ್ನು ಜನ ಆತುರದಿಂದ ಕೊಂಡುಕೊಂಡರು.

ರಾಯಚೂರಲ್ಲಿ: ರಾಯಚೂರಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯಡಿಯಲ್ಲಿ ಮೇ ದಿನಾಚರಣೆ ಮಾಡಲಾಯಿತು. ಸಾಮೂಹಿಕ ಸಂಘಟನೆಯ ಜಿಲ್ಲಾ ಸಂಚಾಲಕರಾದ ಜೆ. ಸುರೇಶ, ಡಾ. ಸುನೀಲ್‌ಕುಮಾರ ಎ.ಐ.ಟಿ.ಯು.ಸಿ. ವಿಭಾಗೀಯ ಅಧ್ಯಕ್ಷರಾದ ಡಾ. ಸೋಮಶೇಖರ ಮಾತನಾಡಿದರು. ಅದಕ್ಕೆ ಮುಂಚೆ ನಗರದಲ್ಲಿ ಮೆರವಣಿಗೆ ಮಾಡಲಾಯಿತು. ಸಿ.ಐ.ಟಿ.ಯು ಕಛೇರಿ ಮುಂದೆ ಭಹಿರಂಗ ಸಭೆ ಏರ್ಪಡಿಸಲಾಗಿತ್ತು. ಸ್ವಾಗತ ಎಸ್.ಎಫ್.ಐ ಮುಖಂಡ ಕೆ. ಜಿ ವೀರೇಶ ನಿರುದಿನಿ ವೈ. ಈರಣ್ಣ, ವಿ.ಎಸ್. ಯಲ್ಲಪ್ಪ ವಂದನಾರ್ಪಣೆ ಮಾಡಿದರು.

ಹಟ್ಟಿಯಲ್ಲಿ ಹಾಡು-ಕುಣಿತದೊಂದಿಗೆ ಆಚರಣೆ.

ವಿಶ್ವ ಕಾರ್ಮಿಕ ದಿನಾಚರಣೆ ಅಂಗವಾಗಿ ಹಟ್ಟಿಯಲ್ಲಿ ಹಿಂದಿನ ದಿನದ ರಾತ್ರಿ ಅಗ್ನಿಕುಂಡ ಮಾಡಿ ರಾತ್ರಿ 9 ಗಂಟೆಯ ಬೆಳಿಗ್ಗೆ 2 ಗಂಟೆ ತನಕ ಮಕ್ಕಳೂ ಸೇರಿದಂತೆ ಅಗ್ನಿ ಸುತ್ತಿ ಹಾಡುತ್ತಾ ಕುಣಿದಾಡಿ ಸಂತೋಷ ವ್ಯಕ್ತಪಡಿಸಿದರು.

ಮೇ 1 ರಂದು ಬೆಳಿಗ್ಗೆ 10 ಗಂಟೆಗೆ ಪೈ ಭವನದ ಮೇಲೆ ಧ್ವಜಾರೋಹಣ ಮಾಡಿ ಅಲ್ಲಿಂದ ಸುಮಾರು 500ಕ್ಕೂ ಮೇಲ್ಪಟ್ಟ ಕಾರ್ಮಿಕರು ಹಟ್ಟಿ ಪ್ರಮುಖ ಬೀದಿಗಳಲ್ಲಿ ಡೋಲು, ಕಾನಲುಗಳನ್ನು ಬಾರಿಸುತ್ತಾ ಎ.ಜಿ. ಪೈರವರ ಫೋಟೋವನ್ನಿಟ್ಟು ಮೆರವಣಿಗೆ ಮಾಡಲಾಯಿತು. ಮೆರವಣಿಗೆ ಮುಗಿದ ಮೇಲೆ ಗ್ರಾಮಸ್ಥರಿಗೆ, ಕಾರ್ಮಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಕಾರ್ಮಿಕ ಮುಖಂಡ ಮೌಲ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಅಮರಗುಂಡಪ್ಪ ಮಾತನಾಡಿದರು. ಕಾರ್ಮಿಕರ ದಿನಾಚರಣೆ ಅಂಗವಾಗಿ ವಾಲಿಬಾಲ್ ಪಂದ್ಯಾವಳಿ ಏರ್ಪಡಿಸಲಾಗಿತ್ತು. ಅತಿ ವಿಜೃಂಭಣೆಯಿಂದ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು.

ಬಿಜಾಪುರ: ಮೇ ದಿನದ ಮೆರವಣಿಗೆ



ಆಂಧ್ರಪ್ರದೇಶದಲ್ಲಿ ಮೂರನೇ ಪರ್ಯಾಯಕ್ಕೆ ಎಡಪಕ್ಷಗಳ ಮುತುವರ್ಜಿ ಧೋರಣಾ ಹೇಳಿಕೆ ಬಿಡುಗಡೆ

ಆಂಧ್ರಪ್ರದೇಶದಲ್ಲಿ ಒಂದೆಡೆ ಆಳುವ ತೆಲುಗುದೇಶಂ ಪಕ್ಷ ಮತ್ತು ಬಿಜೆಪಿ ಹಾಗೂ ಇನ್ನೊಂದೆಡೆ ಕಾಂಗ್ರೆಸ್ ಇವೆರಡಕ್ಕೂ ಪರ್ಯಾಯವನ್ನು ಕಟ್ಟಲು ಎಡ ಪಕ್ಷಗಳ ನಿರಂತರ ಪ್ರಯತ್ನ ಏಪ್ರಿಲ್ 17 ರಂದು ವಿಜಯವಾಡದಲ್ಲಿ ನಡೆದ ಬೃಹತ್ ರ್‍ಯಾಲಿಯೊಂದಿಗೆ ಹೊಸ ಹಂತಕ್ಕೇರಿದೆ. ಸಿಪಿಐ(ಎಂ) ಹಾಗೂ ಸಿಪಿಐ ರಾಜ್ಯ ಘಟಕಗಳು ಸಂಘಟಿಸಿದ್ದ ಈ ರ್‍ಯಾಲಿಯಲ್ಲಿ 3 ಲಕ್ಷದಷ್ಟು ಮಂದಿ ಭಾಗವಹಿಸಿದ್ದರು.

ಇದಕ್ಕೆ ಮೊದಲು ಸಿಪಿಐ(ಎಂ) ಹಾಗೂ ಸಿಪಿಐ ಜಂಟಿಯಾಗಿ ತಯಾರಿಸಿದ್ದ 25 ಅಂಶಗಳ 'ಧೋರಣಾ ಹೇಳಿಕೆ' ಯನ್ನು ಬಿಡುಗಡೆಗೊಳಿಸಿ ರಾಜ್ಯಾದ್ಯಂತ ಇದನ್ನು ಜನಜನಿತಗೊಳಿಸಲು ಎಲ್ಲಾ ಜಿಲ್ಲೆಗಳಲ್ಲಿ ಸಮಾವೇಶಗಳು ನಡೆದವು. ಈ ಹೇಳಿಕೆಯಲ್ಲಿ ಮುಂದಿಟ್ಟ ಕಾರ್ಯಕ್ರಮ ರಾಜ್ಯದ ಹಲವು ಪ್ರಗತಿಪರ ಹಾಗೂ ಧರ್ಮನಿರಪೇಕ್ಷ ಸಂಘಟನೆಗಳು ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಬೆಂಬಲ ಗಳಿಸಿದೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ಈ ಧೋರಣಾ ಹೇಳಿಕೆ ಮುಂದಿಟ್ಟಿರುವ ಗುರಿ. ಇದು ರಾಜ್ಯದಲ್ಲಿ ನಿರ್ದಿಷ್ಟ ಜನಪರ ನೀತಿಗಳ ಆಧಾರದಲ್ಲಿ ರಾಜಕೀಯ ಮರುಹೊಂದಾಣಿಕೆಯಾಗುವ ಸಾಧ್ಯತೆಗಳಿವೆ.

ಕಳೆದ ವರ್ಷದ ತೆಲುಗುದೇಶಂ ಕೇಂದ್ರದ ಬಿಜೆಪಿ ಸರ್ಕಾರ ರಚನೆಯಾಗುವಲ್ಲಿ ವಹಿಸಿದ ಪಾತ್ರವನ್ನು ವಿರೋಧಿಸಿ ಆ ಪಕ್ಷದೊಂದಿಗೆ ಎಡಪಕ್ಷಗಳು ತಮ್ಮ ಸಂಬಂಧವನ್ನು ಕಡಿದುಕೊಂಡಿದ್ದವು. ಇತ್ತೀಚೆಗೆ ಕೂಡಾ ಟಿ.ಡಿ.ಪಿ.ಯ ಪಾತ್ರವನ್ನು ನೋಡಿದ ನಂತರ ಈ ಪಕ್ಷದೊಂದಿಗೆ ಯಾವುದೇ ಹೊಂದಾಣಿಕೆಗೆ ಅವಕಾಶವಿಲ್ಲ, ಅಲ್ಲದೆ ವಿಶ್ವಬ್ಯಾಂಕ್ ಹೇರಿದ ಆರ್ಥಿಕ ನೀತಿಗಳನ್ನು ಅನುಸರಿಸುವ ಪಕ್ಷದೊಂದಿಗೆ ಮೈತ್ರಿ ಸಾಧ್ಯವೂ ಇಲ್ಲ ಎಂದು ಎಡಪಕ್ಷಗಳು ಸ್ಪಷ್ಟಪಡಿಸಿವೆ.

ಸಿಪಿಐ(ಎಂ) - ಸಿಪಿಐನ ಜಂಟಿ 'ಧೋರಣಾ ಹೇಳಿಕೆ' ಯನ್ನು ಪೂರ್ಣವಾಗಿ ಒಪ್ಪದಿದ್ದರೂ ಜಾತ್ಯಾತೀತತೆ, ಒಕ್ಕೂಟ ತತ್ವ ಹಾಗೂ ವಿಶ್ವಬ್ಯಾಂಕ್ ಹೇರಿದ ದಾರಿಗೆ ವಿರೋಧ, ಹಾಗೂ ಸಾಮಾಜಿಕ ನ್ಯಾಯ ಈ ಮೂಲಭೂತ ನೀತಿಗಳಿಗೆ ಬದ್ಧವಾಗಿರುವ ಯಾವುದೇ ಶಕ್ತಿಗಳೊಂದಿಗೆ ಐಕ್ಯತೆ ಬೆಸೆಯಲು ತಾವು ಸಿದ್ಧ ಎಂದು ಸಿಪಿಐ(ಎಂ) ಹಾಗೂ ಸಿಪಿಐನ ರಾಜ್ಯ ಮುಖಂಡರು ಸ್ಪಷ್ಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಎನ್.ಟಿ.ಆರ್.ಪುತ್ರ ಎನ್.ಹರಿಕೃಷ್ಣ ಅವರ ನೇತೃತ್ವದ ಅಣ್ಣ ತೆಲುಗುದೇಶಂ ಹಾಗೂ ಚುನಾವಣೆಗಳಲ್ಲಿ ಭಾಗವಹಿಸುವ ಕೆಲವು ನಕ್ಸಲೀಯ ಗುಂಪುಗಳೊಂದಿಗೆ ಮಾತುಕತೆ ನಡೆಸುತ್ತಿದೆ.

ಪಶ್ಚಿಮ ಬಂಗಾಳ: ಬರ ಪರಿಸ್ಥಿತಿ ಎದುರಿಸಲು ಸಿದ್ಧತೆ

ಪಶ್ಚಿಮ ಬಂಗಾಳ ರಾಜ್ಯದ ದಕ್ಷಿಣ ಭಾಗ ಈ ಬಾರಿ ಅಭೂತಪೂರ್ವ ಬರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಮಳೆ ಕೇವಲ 20% ರಷ್ಟಾಗಿದೆ. ಭೂ ಜಲಮಟ್ಟ 15 ರಿಂದ 40 ಅಡಿಗಿಳಿದಿದೆ. ದಕ್ಷಿಣದ ನಾಲ್ಕು ಜಿಲ್ಲೆಗಳಲ್ಲಿ 100 ಕೋಟಿ ರೂ.ಗಳಷ್ಟು ಬೆಳೆ ನಷ್ಟವಾಗಲಿದೆ ಎಂದು ಅಂದಾಜು ಮಾಡಲಾಗಿದೆ.

ಎಡರಂಗ ಸರ್ಕಾರ ಈ ಪರಿಸ್ಥಿತಿಯನ್ನು ಎದುರಿಸಲು ಸರಕಾರೀ ಯಂತ್ರವನ್ನು ಚುರುಕುಗೊಳಿಸಿದೆ. ಈಗಾಗಲೇ ಉಷ್ಣ ಅಲೆಯ ಪರಿಣಾಮಗಳನ್ನು ಎದುರಿಸಲು 115 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಕೃಷಿ ಕಾರ್ಮಿಕರಿಗೆ ಕಾಮಗಾರಿ ನಿರ್ಮಿಸಲು, ಕುಡಿಯುವ ನೀರಿನ ಮೂಲಗಳನ್ನು ಪಡೆಯಲು ಹಾಗೂ ಸಣ್ಣ ನೀರಾವರಿಗಾಗಿ ವಿದ್ಯುತ್ ಲೈನ್‌ಗಳನ್ನು ರಿಪೇರಿ ಮಾಡಲು ಈ ಮೊತ್ತವನ್ನು ಬಳಸಲಾಗುವುದು ಎಂದು ಸರಕಾರದ ವಕ್ತಾರರು ಹೇಳಿದ್ದಾರೆ.

ಕೃಷಿ ಸಾಲಗಳ ಮನ್ನಾ, ಸಾಲ ಮರುಪಾವತಿಗೆ ಅವಧಿ ವಿಸ್ತರಣೆ ಇತ್ಯಾದಿ ಕ್ರಮಗಳ ಬಗ್ಗೆಯೂ ಸರಕಾರ ಆಲೋಚಿಸುತ್ತಿದೆ.

ಈಗಾಗಲೇ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಜನಗಳಿಗೆ, ಅದರಲ್ಲೂ ರೈತರಿಗೆ ಪರಿಹಾರ ಒದಗಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜ್ಯದ 2.5 ಲಕ್ಷ ಕೊಳವೆ ಬಾವಿಗಳಲ್ಲಿ ಮೂರನೇ ಎರಡರಷ್ಟು ಈಗ ಕೆಲಸ ಮಾಡುತ್ತಿವೆ. ಕೆಲವು ನದಿಗಳ ಮಟ್ಟ ಇಳಿದಿದೆ. ಈ ಪರಿಸ್ಥಿತಿಯನ್ನು ಎದುರಿಸಲು ದಾಮೋದರ ಕಣಿವೆ ಯೋಜನೆಯಿಂದ ಒಂದೂವರೆ ತಿಂಗಳ ಕಾಲ 47000 ಎಕ್ರೆ ಅಡಿ ನೀರನ್ನು ಪಂಪ್ ಮಾಡಿ ನೀರಾವರಿಗೆಂದು ಹಾಯಿಸಲಾಗಿದೆ. ಮಂಜೂರಾವ್ರೋ ಮತ್ತು ನಾಗ್‌ಸಮಿತಿ ಜಲಾಶಯಗಳಿಂದಲೂ ನೀರು ಪೂರೈಕೆ ಮಾಡಲಾಗಿದೆ ಎಂದು ರಾಜ್ಯ ಹಣಕಾಸು ಮಂತ್ರಿ ಡಾ. ಅಶೀಮ್ ದಾಸ್‌ಗುಪ್ತಾ ಹೇಳಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆ ಹೆಚ್ಚಿಸಲು ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ಇಲಾಖೆ 25 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಅಭಿವೃದ್ಧಿ ಮತ್ತು ಯೋಜನಾ ಇಲಾಖೆಯೂ 18 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಪರಿಹಾರ ಇಲಾಖೆ 6 ಕೋಟಿ ರೂ.ಗಳನ್ನು ನೀಡಿದೆ. ಬರ ಪೀಡಿತ ಜನಗಳಿಗೆ ಪರಿಹಾರ ಒದಗಿಸಲು ರಾಜ್ಯ ಸರಕಾರ ಇದುವರೆಗೆ 50 ಕೋಟಿ ರೂ.ಗಳನ್ನು ನೀಡಿದೆ ಎಂದು ಡಾ. ದಾಸ್‌ಗುಪ್ತಾ ಹೇಳಿದ್ದಾರೆ. 1982 ರಿಂದ ಇಂತಹ ತೀವ್ರ ಪರಿಸ್ಥಿತಿ ಬಂದಿರಲಿಲ್ಲ, ಆಗಲೂ ಪರಿಸ್ಥಿತಿ ಇಷ್ಟು ತೀವ್ರವಾಗಿರಲಿಲ್ಲ ಎಂದು ಅವರು ಹೇಳಿದ್ದಾರೆ.

ತ್ರಿಪುರಾದಲ್ಲಿ ಭೀಕರ ಬರ

ದೇಶವನ್ನೆಲ್ಲಾ ವ್ಯಾಪಿಸಿರುವ ತಾಪದ ಬೇಗೆ ತ್ರಿಪುರಾವನ್ನು ಅತಿ ಹೆಚ್ಚಾಗಿ ತಟ್ಟಿದಂತಿದೆ. ಆರ್ಥಿಕವಾಗಿ ಹಿಂದುಳಿದ ಈ ರಾಜ್ಯದ ಬೆಳೆದು ನಿಂತ ಪೈರುಗಳು ನಾಶವಾಗಿ 80 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಇನ್ನಷ್ಟು ಹಾನಿಯ ಭಯ ತಲೆದೋರಿದೆ. ಕಳೆದ ನವೆಂಬರ್‌ನಿಂದಲೇ ಈ ಅಭೂತ ಪೂರ್ವ ಪರಿಸ್ಥಿತಿ ರಾಜ್ಯವನ್ನು ಬಾಧಿಸುತ್ತಿದೆ. 600 ಎಂ.ಎಂ.ಮಳೆಯಾಗಿ ಕುಡಿಯುವ ನೀರಿನ ಬರ ಬಯಲು ಪ್ರದೇಶದಲ್ಲೂ ಕಂಡು ಬಂದಿದೆ. ಗುಡ್ಡಗಾಡು ಪ್ರದೇಶದಲ್ಲಿಯೂ ಪರಿಸ್ಥಿತಿ ಇನ್ನಷ್ಟು ಭೀಕರವಾಗಿದೆ.

ಇಂತಹ ಪರಿಸ್ಥಿತಿಯಲ್ಲೂ ತ್ರಿಪುರಾದ ಎಡರಂಗ ಸರ್ಕಾರ ಈ ಗಂಭೀರ ಸವಾಲನ್ನು ತನ್ನ ಸೀಮಿತ ಸಾಧನಗಳಿಂದಲೇ ಎದುರಿಸುತ್ತಿದೆ. ಕುಡಿಯುವ ನೀರನ್ನು ಒದಗಿಸಲು ಸಮರೋಪಾದಿಯಲ್ಲಿ ಕೆಲಸ ಸಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳನ್ನು, ಉದ್ಯೋಗವಕಾಶಗಳನ್ನು ಒದಗಿಸುವ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ. 50 ಕೋಟಿ . ರೂ.ಗಳಷ್ಟು ಹಣಕಾಸು ನೆರವು ನೀಡಬೇಕು ಎಂದು ಈಗಾಗಲೇ ಕೇಂದ್ರ ಸರ್ಕಾರವನ್ನು ಕೇಳಲಾಗಿದೆ. ಆದರೆ ವಿಶ್ವಾಸಮತ ಕಳಕೊಂಡಿರುವ ಬಿಜೆಪಿ ಕೇಂದ್ರ ಸರಕಾರದಿಂದ ಇಂತಹ ನೆರವಿನ ನಿರೀಕ್ಷೆಯೂ ಇಲ್ಲ.

ತ್ರಿಪುರಾದಂತಹ ರಾಜ್ಯಗಳಿಗೆ ಅಗತ್ಯವಾಗಿದ್ದ ರಾಷ್ಟ್ರೀಯ ಪ್ರಾಥಮಿಕ ಪೋಷಣಾಂಶ ಯೋಜನೆಯನ್ನು ರದ್ದು ಮಾಡಿರುವ ಸರಕಾರವಿದು. ಅಷ್ಟೇ ಅಲ್ಲ, ಕಳೆದ ವರ್ಷ ಪ್ರವಾಹ ಪರಿಹಾರಕ್ಕೆಂದು ಎಡರಂಗ ಸರಕಾರ ಕೇಳಿದ ಹಣದಲ್ಲಿ ಕೇವಲ 4 ಕೋಟಿ ರೂ.ಗಳನ್ನು ಮೊನ್ನೆ-ಮೊನ್ನೆಯಷ್ಟೇ ಕಳಿಸಿದ ಸರಕಾರ ಅದು.

ಪ್ರವಾಸಿ ಕೇಂದ್ರವಾಗಿ ಗುಮ್ಮನಾಯ್ಕನ ಪಾಳ್ಯ

ಬಾಗೇಪಲ್ಲಿ ತಾಲ್ಲೂಕಿನ ಗುಮ್ಮಾಯಕನಪಾಳ್ಯ ಈಗ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ. ಈ ಯೋಜನೆಯನ್ನು ಉದ್ಘಾಟಿಸುತ್ತಾ ಮತ್ತು ಅರಣ್ಯ ಅತಿಥಿ ಗೃಹಕ್ಕೆ ಅಡಿಗಲ್ಲನ್ನು ಅರಣ್ಯ ಖಾತೆ ಸಚಿವ ಡಿ.ಮಂಜುನಾಥ್ ಹಾಕಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಈ ಐತಿಹಾಸಿಕ ಗುಮ್ಮಾಯಕನಪಾಳ್ಯವನ್ನು ಪ್ರವಾಸಿ ಕೇಂದ್ರವನ್ನಾಗಿ ಸರ್ಕಾರ ಗುರ್ತಿಸುವ ಹಾಗೇ ಮಾಡಿದ ಕೀರ್ತಿ ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿಯವರಿಗೆ ಸಲ್ಲುತ್ತದೆ ಎಂದು ಅವರು ಅಭಿನಂದಿಸಿದರು.

ಪ್ರವಾಸಿ ಕೇಂದ್ರದಲ್ಲಿ ದೋಣಿ ವಿಹಾರ ಕೇಂದ್ರವನ್ನು ಸಮಾಜ ಕಲ್ಯಾಣ ಮಂತ್ರಿಗಳಾದ ಕೃಷ್ಣಾರೆಡ್ಡಿಯವರು ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದು ಸಿ.ಪಿ.ಐ.(ಎಂ) ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಶಿಲ್ಪಕಲೆ ಸಂಸ್ಕೃತಿಗಳಿಗೆ ನಮ್ಮ ದೇಶ ತವರು ಮನೆ ಎಂದು ತಿಳಿಸಿದರು. ಗುಮ್ಮನಾಯಕನ ಪಾಳ್ಯವು ವಿಜಯನಗರ ಶಿಲ್ಪಕಲೆಯನ್ನು ಹೋಲುತ್ತದೆ. ಅಂತಹ ಶಿಲ್ಪಕಲೆಯನ್ನು ಉಳಿಸಿಕೊಳ್ಳಬೇಕು. ವಿಜಯನಗರದ ಸಾಮ್ರಾಜ್ಯದ ಕಾಲದಲ್ಲಿ ಭವ್ಯವಾಗಿ ಮೆರೆದ ಈ ಪಾಳ್ಯ ಶಿಥಿಲವಾಗಿದ್ದು ಅದನ್ನು ಅಭಿವೃದ್ಧಿ ಪಡಿಸಲು ಸಾಧ್ಯವಿಲ್ಲವೆಂದು ಕೆಲವರು ಆಕ್ಷೇಪಿಸಿದರೂ ತಾನು ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೇನೆಂದರು.

50 ವರ್ಷಗಳ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೂಲೆಯಲ್ಲಿರುವ ಇಂತಹ ಗ್ರಾಮಗಳು ರಸ್ತೆ ಸಾರಿಗೆ ಸೌಲಭ್ಯಗಳಿಲ್ಲದೆ ಕೊರಗಿವೆ. ಇದೊಂದು ಅತ್ಯುತ್ತಮ ಪ್ರವಾಸಿ ಕೇಂದ್ರವಾಗತಕ್ಕ ಪ್ರದೇಶ, ಇಲ್ಲಿನ ದೇವಾಲಯಗಳಲ್ಲಿ ಅತ್ಯುತ್ತಮ ವಿಗ್ರಹಗಳಿದ್ದವು ಅದನ್ನು ದೇವರನ್ನು ನಂಬುವ ಜನರೇ ಕಳ್ಳತನ ಮಾಡಿದ್ದಾರೆ ಎಂದು ವಿಷಾದಿಸಿದರು. ಕೆಲವು ಟ್ರೆಜರಿಯಲ್ಲಿದ್ದು ಅವನ್ನು ಮರಳಿ ಕೊಡಿಸಬೇಕೆಂದು ಅವರು ಜಿಲ್ಲಾಧಿಕಾರಿಗಳನ್ನು ಕೋರಿದರು.

ಜೊತೆಗೆ, 10 ಲಕ್ಷ ರೂ.ಗಳ ಬಾಲಭವನವೊಂದು ಇಲ್ಲಿಗೆ ಮಂಜೂರಾಗಿದೆ. ವನವಿಜ್ಞಾನ ಕೇಂದ್ರ ಮತ್ತು ಜಿಂಕೆ ವನವನ್ನು ಕೆಲವೇ ತಿಂಗಳುಗಳಲ್ಲಿ ಪ್ರಾರಂಭಿಸಲಾಗುವುದೆಂದೂ ಶ್ರೀರಾಮರೆಡ್ಡಿ ತಿಳಿಸಿದರು.

ದೋಣಿ ಸರೋವರದ ಸುತ್ತ ಸಾಂಕೇತಿಕವಾಗಿ ಬಿದಿರು ಗಿಡಗಳನ್ನು ಸಚಿವರು ಮತ್ತು ಶಾಸಕರು ನೆಟ್ಟರು. ಕಾರ್ಯಕ್ರಮದಲ್ಲಿ ಅರಣ್ಯ ಸಂರಕ್ಷಣಾಧಿಕಾರಿ, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸದಸ್ಯರಾದ ಸಿ.ಡಿ. ಗಂಗುಲಪ್ಪ, ತಾ.ಪ. ಸದಸ್ಯರಾದ ಕೃಷ್ಣಪ್ಪರವರುಗಳು ಭಾಗವಹಿಸಿದರು. ಭಗತ್‌ಸಿಂಗ್ ಎಜುಕೇಷನಲ್ ಮತ್ತು ಸೋಷಿಯಲ್ ಟ್ರಸ್ಟ್ ಅಧ್ಯಕ್ಷ ಮಹಮದ್ ಅಕ್ರಂ, ಸಿ.ಪಿ.ಐ.(ಎಂ) ಕಾರ್ಯದರ್ಶಿ ವೆಂಕಟಸ್ವಾಮಿ ರೆಡ್ಡಿ ಭಾಗವಹಿಸಿದ್ದರು. ತುಂಬಾ ಅಚ್ಚುಕಟ್ಟಾಗಿ ನಡೆದ ಸಮಾರಂಭಕ್ಕೆ ಸಂಚಾರದ ವ್ಯವಸ್ಥೆ ಇಲ್ಲದಿದ್ದರೂ ದೂರ-ದೂರದಿಂದ ನಡೆದುಕೊಂಡೇ ಬಂದು ಸುಮಾರು 5000 ಜನರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಉದಯ ಕುಮಾರ್ ನಿರೂಪಿಸಿದರು. ಪ್ರವೀಣ್‌ಚಂದ್ರ ಸ್ವಾಗತಿಸಿ, ಬಾಸ್ಕರರೆಡ್ಡಿ ವಂದಿಸಿದರು. ಜಾನಪದ ಕಲಾಕಾರರಾದ ಅಪ್ಪಗೆರೆ ತಿಮ್ಮರಾಜು ಮತ್ತು ರಮಾ ಅರವಿಂದರವರು ಜಾನಪದ ಹಾಡುಗಳಿಂದ ಕಾರ್ಯಕ್ರಮಕ್ಕೆ ಮೆರಗನ್ನು ನೀಡಿದರು.

ನಂಜನಗೂಡು-ಗುಂಡ್ಲುಪೇಟೆ-ವೈನಾಡು ರೈಲು ಮಾರ್ಗಕ್ಕೆ ಒತ್ತಾಯ

ಸ್ವತಂತ್ರ ಪೂರ್ವದ ಈ ಮಾರ್ಗದಲ್ಲಿ ರೈಲ್ವೆ ಮಾರ್ಗ ಹಾಕಬೇಕೆಂಬ ಯೋಜನೆ ಸಿದ್ಧವಾಗಿ ಸರ್ವೆ ಕೆಲಸಗಳನ್ನು ಪೂರೈಸಿತ್ತು. ಸ್ವತಂತ್ರಾನಂತರ ಈ ಯೋಜನೆಯನ್ನು ಕೈಬಿಡಲಾಯಿತು. ಕೆಲವು ಸಂಸತ್ ಸದಸ್ಯರ ಗಮನಕ್ಕೆ ಈ ಯೋಜನೆಯ ಅಂಶ ತಿಳಿದಾಗ ಕೇಂದ್ರ ಸರ್ಕಾರದಲ್ಲಿ ಮಾತುಕತೆ ನಡೆಸಿ ಅವರು 1996 ರೈಲ್ವೆ ಬಜೆಟ್‌ನಲ್ಲಿ ಈ ಯೋಜನೆಯನ್ನೂ ಅಳವಡಿಸಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದರು. ಆದರೆ ವಾಜಪೇಯಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಪುನಃ ಈ ಯೋಜನೆ ಯನ್ನು ಕೇಂದ್ರ ಸರ್ಕಾರ ಗಮನಕ್ಕೆ ತೆಗೆದುಕೊಳ್ಳದೆ ಈಗಿನ ರೈಲ್ವೆ ಬಜೆಟ್‌ನಲ್ಲಿ ಕೈಬಿಡಲಾಗಿದೆ.

ಈ ರೈಲುಮಾರ್ಗ ಕರ್ನಾಟಕ ಮತ್ತು ಕೇರಳ ರಾಜ್ಯಗಳಿಗೆ ಅತ್ಯಾವಶ್ಯಕವಾದ ರೈಲು ಮಾರ್ಗವಾಗಿದೆ. ಪಾಲ್ಘಾಟಿನಿಂದ ಮಂಗಳೂರಿಗೆ ಸಾಗುವ ರೈಲು ಮಾರ್ಗದಲ್ಲಿ ವಡಗರ ರೈಲು ನಿಲ್ದಾಣವಿದೆ. ಕೇರಳದ ಸಾಕಷ್ಟು ಜನರು ಕೊಚ್ಚಿನ್‌ನಿಂದ ಬೆಂಗಳೂರಿಗೆ ಬರಲು ಕೋಯಮತ್ತೂರಿಗೆ ಹೋಗಬೇಕು. ಆದರಿಂದ ಸುಮಾರು 200ಕ್ಕೂ ಹೆಚ್ಚು ಕಿಲೋಮೀಟರ್ ಉದ್ದ ಅನಾವಶ್ಯಕವಾಗಿ ಕ್ರಮಿಸಬೇಕು. ಮೈಸೂರಿನಿಂದ ಕೊಚ್ಚಿನ್‌ಗೆ ಹೋಗಬೇಕಾದರೆ ಬೆಂಗಳೂರು ಮೂಲಕ ಹೋಗಬೇಕಿದೆ. ನಂಜನಗೂಡು, ಗುಂಡ್ಲುಪೇಟೆ, ಸುಲ್ತಾನ್ ಬತೇರಿ ವೈನಾಡು ಮಾರ್ಗ ವಡಗರಕ್ಕೆ ರೈಲು ಸಂಪರ್ಕವಿದ್ದರೆ ಮುಂಬೈಗೆ ಹೋಗುವ ಪ್ರಯಾಣಿಕರು ಕೊಂಕಣ ರೈಲು ಸಂಪರ್ಕ ದೊರಕಿಸಿಕೊಳ್ಳಬಹುದು. ಈ ರೈಲು ಮಾರ್ಗದ ಯೋಜನೆಯಿಂದ ಅಭಿವೃದ್ಧಿಯನ್ನು ಕಾಣದ ಗುಂಡ್ಲುಪೇಟೆಗೆ ತುಂಬಾ ಪ್ರಯೋಜನ ವಿದೆ. ಹಲವಾರು ಕೈಗಾರಿಕೆಗಳು ಬಂದಲ್ಲಿ ಗುಂಡ್ಲುಪೇಟೆಯ ಅಭಿವೃದ್ಧಿಗೆ ಈ ಮಾರ್ಗ ಎಂದು ತಾಲೂಕಿನ ಜನ ಭಾವಿಸಿದ್ದಾರೆ.

ಈ ರೈಲು ಮಾರ್ಗದ ಅನುಷ್ಠಾನದ ಒತ್ತಾಯಕ್ಕಾಗಿ ಮೈಸೂರಿನಲ್ಲಿರುವ ದಕ್ಷಿಣ ವಿಭಾಗೀಯ ರೈಲ್ವೆ ಕಛೇರಿಯ ಎದುರು ಧರಣಿ ಮತ್ತು ಮಾನವ ಸರಪಳಿ ನಡೆಸಿ ಒತ್ತಾಯಿಸಲು ಮಾರ್ಚ್ 13 ರಂದು ಕೇರಳದ ವೈನಾಡು ಜಿಲ್ಲೆಯ ಭಾರತ ಯುವಜನ ಒಕ್ಕೂಟವು ಸಂಘಟಿಸಿದ್ದ ಸುಮಾರು 300 ಮಂದಿ ಮುಖಂಡರು ಜೀಪುಗಳಲ್ಲಿ ಸಾಗಿಬಂದರು.

ಗುಂಡ್ಲು ಪೇಟೆಯಲ್ಲಿ ವೈನಾಡಿನಿಂದ ಬಂದ ಜಾಥಾವನ್ನು ಸ್ವಾಗತಿಸಲು ಸಾವಿರಾರು ಜನರು ಪುರಸಭೆಯ ಮುಂದೆ ಸೇರಿದರು. ಪುರಸಭಾ ಕಛೇರಿಯಲ್ಲಿ ಸ್ವಾಗತ ಸಮಾರಂಭದ ಸಭೆ ನಡೆಯಿತು. ಪುರಸಭಾಧ್ಯಕ್ಷ ಜಿ.ಕೆ. ನಾಜಿಮುದ್ದೀನ್ ಅಧ್ಯಕ್ಷತೆ ವಹಿಸಿದ್ದರು. ಬೀಡಿ ಕಾರ್ಮಿಕರ ಪರವಾಗಿ ಎಂ.ಎನ್. ಉಗ್ರಪ್ಪನವರು ಜಾಥಾದವರನ್ನು ಸಭಿಕರನ್ನೂ ಸ್ವಾಗತಿಸಿದರು. ಜಾಥಾದ ಮುಖಂಡರಾದ ವೈನಾಡು ಘಟಕದ ಭಾರತ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟದ ಉಪಾಧ್ಯಕ್ಷರು ಪಿ.ಕೆ. ಬಾಬುರಾಜುರವರು ಮತ್ತು ಕಾರ್ಯದರ್ಶಿಯಾದ ಕೆ.ಎನ್. ಬಾಬುರವರು ರೈಲು ಮಾರ್ಗದ ಬಗ್ಗೆ ಕೆಲವು ಅಂಶಗಳನ್ನು ತಿಳಿಸಿಕೊಟ್ಟರು. ಗುಂಡ್ಲು ಪೇಟೆಯ ಹೆಸರಾಂತ ವೈದ್ಯರಾದ ಡಾ. ಬ. ನಾಗರಾಜ್‌ರವರು ನಿಮ್ಮ ಬೇಡಿಕೆ ನಮ್ಮ ಬೇಡಿಕೆಯೂ ಆಗಿದೆ. ಅದಕ್ಕಾಗಿ ನಾವು ಇಲ್ಲಿ ಒಂದು ಕ್ರಿಯಾಸಮಿತಿಯನ್ನು ರಚಿಸುತ್ತೇವೆ. ಆ ಮೂಲಕ ನಾವು ಈ ಚಳುವಳಿಯನ್ನು ಬೆಳೆಸುತ್ತೇವೆ ಎಂದು ಹೇಳಿ ಸಹಕಾರ ಹಸ್ತವನ್ನು ನೀಡಿದರು. ಸಮಾರಂಭದ ಅಧ್ಯಕ್ಷರು ಮಾತನಾಡಿ ಈ ಯೋಜನೆಯ ಬಗ್ಗೆ ನನಗೆ ಅರಿವಿತ್ತು. ಈಗ ಅದಕ್ಕೆ ನೀವು ಚಾಲನೆ ಕೊಟ್ಟಿದ್ದೀರಿ. ನೀವು ಅಭಿನಂದನಾರ್ಹರು ಎಂದು ಹೇಳಿ ಹೃತ್ಪೂರ್ವಕ ಬೆಂಬಲವನ್ನು ಘೋಷಿಸಿದರು.

ಈ ಸಮಾರಂಭ ಮುಕ್ತಾಯಗೊಂಡ ನಂತರ ಗುಂಡ್ಲುಪೇಟೆಯ ಸಾರ್ವಜನಿಕರು, ಬೀಡಿ ಕಾರ್ಮಿಕ ಮುಖಂಡರು, ವಿದ್ಯಾರ್ಥಿ ಯುವಜನರು, ಜಾಥಾದವರು ಒಟ್ಟಾಗಿ ಪುರ ಸಭಾ ಕಾರ್ಯಾಲಯದಿಂದ ಬಸ್ ನಿಲ್ದಾಣದವರೆಗೆ ಜತೆಜತೆಯಾಗಿ ಹೆಜ್ಜೆ ಹಾಕಿದರು.

ಜಾಥಾವನ್ನು ಹರಿಸಿ ಮೈಸೂರಿಗೆ ಹೋಗಲು ಆತ್ಮೀಯವಾಗಿ ಬೀಳ್ಕೊಟ್ಟರು.

ಮೈಸೂರಿನಲ್ಲಿ:

'ವೈನಾಡಿನಿಂದ ಗುಂಡ್ಲುಪೇಟೆ ಮಾರ್ಗ' ಈ ಜಾಥಾ ಮೈಸೂರು ತಲುಪುವುದು ನಾಲ್ಕು ಘಂಟೆಯಾಯಿತು.

ಜಾಥಾದ ಯುವಜನ ಮುಖಂಡರಾದ ಬಾಬುರಾಜು ಮತ್ತು ಬಾಬುರವರು ರೈಲ್ವೆ ಮಾರ್ಗದ ಚರಿತ್ರೆಯನ್ನು ಪ್ರಯತ್ನಗಳನ್ನು ಮುಂದಿನ ಹೋರಾಟದ ಯೋಜನೆಗಳನ್ನು ವಿವರವಾಗಿ ತಿಳಿಸಿದರು. ಸ್ಥಳೀಯ ಮುಖಂಡರಾದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎಂ.ಎನ್. ಉಗ್ರಪ್ಪ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮೋಹನ್‌ಕುಮಾರ್ ಹಾಗೂ ಜಿಲ್ಲಾ ಡಿ.ವೈ.ಎಫ್.ಐ. ಜಿಲ್ಲಾ ಸಮಿತಿ ಸದಸ್ಯರು ಕೆ. ಬಸವರಾಜುರವರು ಮಾತನಾಡಿ ಈ ಬೇಡಿಕೆಯ ಈಡೇರಿಕೆಗಾಗಿ ಎಲ್ಲಾ ಸಹಾಯ ಸಹಕಾರಗಳನ್ನು ನೀಡುವುದಾಗಿ ಆಶ್ವಾಸನೆ ಇತ್ತರು.


ಸಭೆಯ ನಂತರ ಜಾಥಾದಲ್ಲಿದ್ದ 300 ಜನರು ಮತ್ತು ಕೆಲವು ಸ್ಥಳೀಯ ಮುಖಂಡರು ರೈಲ್ವೆ ಕಛೇರಿಯ ಮುಂದೆ ಸಲಾಗಿ ರೈಲ್ವೆ ಹಳಿಯಂತೆ 2 ಸಾಲಿನಲ್ಲಿ ಒಬ್ಬರ ಪಾದಕ್ಕೆ ಒಬ್ಬರ ಶಿರಸ್ಸು ತಾಕುವ ಹಾಗೆ ಉದ್ದಕ್ಕೆ 15 ನಿಮಿಷಗಳ ಕಾಲ ಮಲಗಿ ಮಾನವ ರೈಲು ಇದು ನಮ್ಮ ರೈಲು ಇದು ನಿರ್ಮಾಣವಾಗಬೇಕು ಅಲ್ಲಿಯವರೆಗೆ ಹೋರಾಟ ಎಂಬ ಧೃಡ ನಿಲುಮೆಯನ್ನು ವ್ಯಕ್ತಪಡಿಸಿದರು.

ಮಾನವ ಸರಪಳಿ ಕಾರ್ಯಕ್ರಮದ ನಂತರ ರೈಲ್ವೆ ಉನ್ನತಾಧಿಕಾರಿಯನ್ನು ಬೇಟಿಯಾಗಿ ಮನವಿ ಪತ್ರ ಸಲ್ಲಿಸಲಾಯಿತು.

ಯುಗೋಸ್ಲಾವಿಯ ಬೆಂಕಿ ಹೊಗೆಯ ಕರಿ ನೆರಳಿನಲ್ಲಿ ನಾಟೋ ಸುವರ್ಣ ಉತ್ಸವ

ಊರಿಗೆ ಬೆಂಕಿ ಹಚ್ಚಿ ಪಿಟೀಲು ಬಾರಿಸುವ ಐಲು ದೊರೆಗಳು

"ನಾಟೋ ಅಂದರೆ ಉತ್ತರ ಅಟ್ಲಾಂಟಿಕ್ ಭಯೋತ್ಪಾದಕ ಸಂಘಟನೆ" - ಈ ಘೋಷಣಾ ಫಲಕಗಳನ್ನು ಹೊಸ, ಅಮೆರಿಕಾದ ಬಾವುಟದ ಮುಸುಕು ಹೊದ್ದ ಪ್ರದರ್ಶನಕಾರರಿಂದ ವಾಶಿಂಗ್‌ಟನ್‌ನಲ್ಲಿ ನಾಟೋ ಸುವರ್ಣ ಸಮಾರಂಭದ ಸಮ್ಮುಖ ಪ್ರತಿಭಟನೆ



ರೋಮಿಗೆ ಬೆಂಕಿ ಬಿದ್ದಾಗ ಆರಾಮಾಗಿ ಪಿಟೀಲು ಬಾರಿಸುತ್ತಿದ್ದ ಐಲು ದೊರೆ ನೀರೋನ ಕಥೆ ನೀವು ಕೇಳಿರಬಹುದು. 20ನೇ ಶತಮಾನದ ಕೊನೆಯ ದಶಕದಲ್ಲಿ ಜಗತ್ತಿನ ಏಕಚಕ್ರಾಧಿಪತ್ಯ ವಹಿಸಿಕೊಂಡಿರುವ ಐಲು ದೊರೆಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ತಾವೇ ಊರಿಗೆ ಬೆಂಕಿ ಹಚ್ಚಿ ಪಿಟೀಲು ಬಾರಿಸುತ್ತಿದ್ದಾರೆ.

ಸೋವಿಯೆತ್ ಒಕ್ಕೂಟ ಮತ್ತು ಪೂರ್ವಯುರೋಪಿನ ಸಮಾಜವಾದಿ ದೇಶಗಳ ಪತನದ ನಂತರ ತಾವೇ ಏಕಚಕ್ರಾಧಿಪತಿಗಳು ಎಂದು ಬೀಗುತ್ತಿರುವ ಅಮೇರಿಕದ ಅಧಿಪತ್ಯದಲ್ಲಿರುವ ನಾಟೋ ದುಷ್ಟ ಮಿಲಿಟರಿ ಕೂಟ ಇತ್ತೀಚೆಗೆ ತನ್ನ ಸುವರ್ಣ ಹೋತ್ಸವವನ್ನು ಸಂಭ್ರಮದಿಂದ ವಾಶಿಂಗ್‌ಟನ್ ನಲ್ಲಿ ಆಚರಿಸಿತು. ಅತ್ತ ನಾಟೋ ಪಡೆಗಳು ಯುಗೋಸ್ಲಾವಿಯಾದ ಮೇಲೆ ವಿಯೇಟ್ನಾಂನ ಯುದ್ಧ 90ರ ದಶಕದ ಕೊಲ್ಲಿಯುದ್ಧದ ನಂತರ ಜಗತ್ತು ಎಂದೂ ಕಾಣದ ಅರಿಯದ ರೀತಿಯ ಬಾಂಬ್ ಮಳೆಗರೆಯುತ್ತಿದ್ದವು. ಇದು ಊರಿಗೆ ಬೆಂಕಿ ಹಚ್ಚಿ ಪಿಟೀಲ್ ಬಾರಿಸುವುದಲ್ಲದೆ ಇನ್ನೇನು?

ನಾಟೋ ಹುಟ್ಟಿದ್ದು ಹೇಗೆ?

ನಾಟೋ ಎಂಬುದು 50 ವರ್ಷಗಳ ಹಿಂದೆ ಅಂದರೆ 1949 ರಲ್ಲಿ ಎಪ್ರಿಲ್ 23 ರಂದು ಅಮೆರಿಕ, ಕೆನಡಾ, ಮತ್ತು ಪಶ್ಚಿಮ ಯುರೋಪಿನ ಹಲವು ದೇಶಗಳು ಸೇರಿ ರಚಿಸಿದ ಮಿಲಿಟರಿ ಕೂಟ ಸಂಧಿ ಉತ್ತರ ಅಟ್ಲಾಂಟಿಕ್ ಸಂಘಟನೆ ; ಇಂಗ್ಲೀಷಿನಲ್ಲಿ North Atlantic Treaty Organistion (NATO) ಅಟ್ಲಾಂಟಿಕ್ ಸಮುದ್ರದ ಉತ್ತರ ಭಾಗದಲ್ಲಿ ಇಕ್ಕೆಲಗಳಲ್ಲಿರುವ ದೇಶಗಳ ಮಿಲಿಟರಿ ಒಪ್ಪಂದ. ಈ ಮಿಲಿಟರಿ ದುಷ್ಟಕೂಟದ ಘೋಷಿತ ಉದ್ದೇಶ ಸದಸ್ಯ ದೇಶಗಳ ಆತ್ಮರಕ್ಷಣೆ. ಒಂದು ಸದಸ್ಯ ದೇಶದ ಮೇಲೆ ಮಿಲಿಟರಿ ದಾಳಿಮಾಡಿದರೆ, ಉಳಿದ ಸದಸ್ಯ ದೇಶಗಳು ಅದರ ರಕ್ಷಣೆಗೆ ಧಾವಿಸು ವುದು. ಆದರೆ ನಾಟೋದ ನಿಜವಾದ ಉದ್ದೇಶವೇ ಬೇರೆ.

ಎರಡನೇ ಮಹಾಯುದ್ಧದ ಫ್ಯಾಸಿಸ್ಟ್-ವಿರೋಧಿ ಹೋರಾಟದಲ್ಲಿ ಮಹಾನ್ ವಿಜಯದ ನಂತರ ಯುರೋಪಿನಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಕಮ್ಯುನಿಸ್ಟರ ಪ್ರತಿಷ್ಠೆ, ಪ್ರಭಾವ ಅಭೂತಪೂರ್ವ ಮಟ್ಟಕ್ಕೇರಿತ್ತು. ಕಮ್ಯುನಿಸ್ಟ್ ನೇತೃತ್ವದ ಸೋವಿಯತ್ ಒಕ್ಕೂಟದ ಪ್ರತಿಷ್ಠೆಯಂತೂ ತುತ್ತ ತುದಿಯಲ್ಲಿತ್ತು. ಇಡೀ ಪೂರ್ವ ಯುರೋಪ್ ಫ್ಯಾಸಿಸ್ಟ್-ವಿರೋಧಿ ಸಶಸ್ತ್ರ ಹೋರಾಟದ ನಾಯಕತ್ವ ವಹಿಸಿದ ಕಮ್ಯುನಿಸ್ಟರ ನಾಯಕತ್ವದಲ್ಲಿ ಸಮಾಜವಾದಿ ಹಾದಿ ತುಳಿದಿತ್ತು. ಪಶ್ಚಿಮ ಯುರೋಪಿನ ಹೆಚ್ಚಿನ ದೇಶಗಳಲ್ಲೂ ಕಮ್ಯುನಿಸ್ಟರ ಪ್ರಭಾವ, ಪ್ರತಿಷ್ಠೆ ಗಮನಾರ್ಹವಾಗಿತ್ತು. ಮಹಾಯುದ್ಧಾ ನಂತರ ಹೆಚ್ಚಿನ ಪಶ್ಚಿಮ ಯುರೋಪಿನ ದೇಶಗಳಲ್ಲಿ ಅತಿ ದೊಡ್ಡ ವಿರೋಧ ಪಕ್ಷವಾಗಿ ಗಮನಾರ್ಹ ರಾಜಕೀಯ ಶಕ್ತಿಯಾಗಿ ಹೊಮ್ಮಿದ್ದರು. ಇಟಲಿಯಲ್ಲಿ ಕಮ್ಯುನಿಸ್ಟ್ ಪಕ್ಷ ಶೇಕಡಾ 35 ಮತಗಳಿಸಿದರೆ, ಫ್ರಾನ್ಸ್ ನೆದರ್‌ಲ್ಯಾಂಡ್‌ಗಳಲ್ಲಿ ಶೇಕಡಾ 20 ರಷ್ಟು ಮತಗಳಿಸಿತ್ತು. ಪಶ್ಚಿಮ ಯುರೋಪಿನ ದೇಶಗಳ ಬೂರ್ಜ್ವಾ ವರ್ಗಗಳ ಪಕ್ಷಗಳು, ನಾಯಕರುಗಳ ಪ್ರತಿಷ್ಠೆ ಪ್ರಭಾವ ಪಾತಾಳಕ್ಕಿಳಿದಿತ್ತು. ಇವರಲ್ಲಿ ಹೆಚ್ಚಿನವರು ಹಿಟ್ಲರನ ನಾಜೀಶಕ್ತಿಯೆದುರು ಕುಸಿದು ಬಿದ್ದಿದ್ದರು, ಇಲ್ಲವೇ ಶಾಮೀಲಾಗಿದ್ದರು, ಇಲ್ಲವೇ ದೇಶಾಂತರ ಓಡಿಹೋಗಿದ್ದರು. ಇಟಲಿಯಲ್ಲಿ ಕಮ್ಯುನಿಸ್ಟ್ ಪಕ್ಷ ಇಲ್ಲದೆ ಸರ್ಕಾರ ಮಾಡಲು ಸಾಧ್ಯವಿಲ್ಲ ಎಂಬ ಸ್ಥಿತಿ ಮೂಡಿತ್ತು. ಇಟಲಿ ಸೇರಿದಂತೆ ಹಲವು ದೇಶಗಳಲ್ಲಿ ಕಮ್ಯುನಿಸ್ಟ್, ಸೋಶಲಿಸ್ಟರು ಸೇರಿದರೆ ನಿಚ್ಚಳ ಬಹುಮತ ಇತ್ತು.

ಇದಲ್ಲದೆ ಪೂರ್ವದಲ್ಲಿ ಚೀನಾ ಸಮಾಜವಾದಿ ಕ್ರಾಂತಿಯ ಹೊಸ್ತಿಲಲ್ಲಿ ಇತ್ತು. ದಕ್ಷಿಣ-ಪೂರ್ವ ಏಶ್ಯಾದ ಎಲ್ಲಾ ದೇಶಗಳಲ್ಲು ಕಮ್ಯುನಿಸ್ಟ್ ಪಕ್ಷ ಪ್ರಬಲ ಶಕ್ತಿಯಾಗಿ ಹೊಮ್ಮಿತ್ತು, ವಿಮೋಚನಾ ಹೋರಾಟ ಸಮಾಜವಾದಿ ಹಾರಿತುಳಿಯುವ ಸ್ಪಷ್ಟ ಸೂಚನೆಗಳಿದ್ದವು. ಇತರೆಡೆ ಆಫ್ರಿಕಾದಲ್ಲಿ ಮುಖ್ಯವಾಗಿ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಕಿತ್ತೆಸೆಯುವ ಹೋರಾಟ ತೀವ್ರವಾಗಿದ್ದವು.

ಸಮಾಜವಾದಿ ಅಲೆ ತಡೆಯಲು ನಾಟೋ:

ಸಮಾಜವಾದಿ ಕ್ರಾಂತಿಗಳ ಅಲೆ, ಮತ್ತು ವಸಾಹತು-ಶಾಹಿ ವಿರೋಧಿ ಹೋರಾಟಗಳ ಮಹಾಮಾರದಲ್ಲಿ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ವ್ಯವಸ್ಥೆ ಮುಳುಗಿ ಹೋಗಬಹುದು ಎಂಬ ಭಯ ಅಮೇರಿಕ, ಯುರೋಪುಗಳ ಬಂಡವಾಳ ಶಾಹಿ ಆಳುವ ವರ್ಗದಲ್ಲಿ ತೀವ್ರವಾಗಿತ್ತು. ರಾಜಕೀಯವಾಗಿ, ಸೈದ್ಧಾಂತಿಕವಾಗಿ ಯುರೋಪಿನಲ್ಲಿ ಜಗತ್ತಿನಾದ್ಯಂತ ಸೋತಿದ್ದ ಅವರು ಮಿಲಿಟರಿ ಬಲವೇ ತಮ್ಮ ರಕ್ಷಣೆಗೆ ದಾರಿ ಎಂದು ನಂಬಿದ್ದು ನಾಟೋ ಹುಟ್ಟಿಗೆ ಕಾರಣವಾಯಿತು. ಬಂಡವಾಳಶಾಹಿ ಶಕ್ತಿಗಳ ಮಿಲಿಟರಿ ಬಲವೂ ಯುದ್ಧದಲ್ಲಿ (ಮುಖ್ಯವಾಗಿ ಇಟಲಿ, ಫ್ರಾನ್ಸ್‌ಗಳು) ಸಾಕಷ್ಟು ನಷ್ಟವಾಗಿತ್ತು. ಆದರೆ ಅಮೇರಿಕದ ಅಣು ಬಾಂಬು ಅವರಿಗೆ ಮಿಲಿಟರಿ ಬಲದಲ್ಲಿ ಮೇಲುಗೈ ನೀಡಿತ್ತು. ಆದ್ದರಿಂದ ನಾಟೋದ ನಿಜವಾದ ಉದ್ದೇಶ- ಪಶ್ಚಿಮ ಯುರೋಪಿನಲ್ಲಿ ಸಮಾಜವಾದಿ ಕ್ರಾಂತಿ ತಡೆಯುವುದು ಆಗಿತ್ತು. ಹೊಸದಾಗಿ ಉದಯಿಸಿದ ಸಮಾಜವಾದಿ ದೇಶಗಳಲ್ಲಿ ಮಿಲಿಟರಿ ಬಲ ಉಪಯೋಗಿಸಿ, ಸಮಾಜವಾದಕ್ಕೆ ತೊಂದರೆ ಕೊಡುವುದೇ ಉದ್ದೇಶವಾಗಿದ್ದ ನಾಟೋ ನಿಜವಾಗಿ ರಕ್ಷಣಾತ್ಮಕ ಅಲ್ಲ, ಆಕ್ರಾಮಕ ಮಿಲಿಟರಿ ಒಪ್ಪಂದ ಎಂದು ಗಮನಿಸಬೇಕು. ಯುರೋಪಿನ ಬಂಡವಾಳಶಾಹಿಗಳಿಗೆ ಅಮೇರಿಕದ ಬಂಡವಾಳ ಶಾಹಿಗಳ ಮಿಲಿಟರಿ ಕೊಡೆ.

ಶೀತ ಸಮರದತ್ತ

ಬಂಡವಾಳಶಾಹಿ- ಸಾಮ್ರಾಜ್ಯಶಾಹಿಗಳ ಈ ಆಕ್ರಾಮಕ ಮಿಲಿಟರಿ ಕೂಟಕ್ಕೆ ಪ್ರತಿಯಾಗಿ ಸೋವಿಯೆತ್ ಒಕ್ಕೂಟದ ನಾಯಕತ್ವದಲ್ಲಿ ಮಿಲಿಟರಿ ಕೂಟ ರಚಿಸಬೇಕಾಯಿತು. 1955ರಲ್ಲಿ ಸಮಾಜವಾದಿ ದೇಶಗಳ ವಾರ್ಸಾ ಒಪ್ಪಂದ ಅಸ್ತಿತ್ವಕ್ಕೆ ಬಂತು. ಇದು ನಿಜವಾಗಿಯೂ ರಕ್ಷಣಾತ್ಮಕವಾಗಿತ್ತು. ನಾಟೋದ ರಚನೆ, ಅದಕ್ಕೆ ಪ್ರತಿಯಾಗಿ ವಾರ್ಸಾ ಒಪ್ಪಂದದ ರಚನೆ ಜಗತ್ತಿನಲ್ಲಿ ಹಿಂದೆಂದೂ ಕಾಣದ ಭೀಕರ ಶಸ್ತ್ರಾಸ್ತ್ರ ಪೈಪೋಟಿಗೆ ಹಾದಿ ಮಾಡಿಕೊಟ್ಟಿತ್ತು. ಅದರಲ್ಲೂ ಜಗತ್ತನ್ನು ಹಲವು ಬಾರಿ ವಿನಾಶ ಮಾಡಬಲ್ಲ ಮಾರಕ ಅಣ್ವಸ್ತ್ರಗಳ ಮಹಾಪೂರ ಹರಿಯಿತು. ಇಲ್ಲಿಯೂ ಪ್ರತಿಬಾರಿ ಹೊಸ ರೀತಿಯ ಮಾರಕ ಅಣ್ವಸ್ತ್ರಗಳನ್ನು ತಯಾರಿಸುತ್ತಿದ್ದುದ್ದು ನಾಟೋ ದುಷ್ಟಕೂಟವೇ. ಪ್ರತಿಕ್ರಿಯೆಯಾಗಿ ವಾರ್ಸಾ ಒಪ್ಪಂದ ತಯಾರಿಸಲೇ ಬೇಕಾಗಿತ್ತು. 50 ರ ದಶಕದಿಂದ 80ರ ದಶಕದವರೆಗೆ ಪಸರಿಸಿದ ಈ ಅವಧಿಯನ್ನು ಶೀತ ಸಮರದ ಕಾಲ ಎನ್ನುತ್ತಾರೆ. ಎರಡೂ ಕಡೆ ಅಪಾರ ಮಾರಕ ಶಸ್ತ್ರಾಸ್ತ್ರಗಳು ಪೇರಿಸಲ್ಪಡುತ್ತಿದ್ದರೂ ಯುದ್ಧವಾಗಲಿಲ್ಲ ಎಂಬುದಕ್ಕಾಗಿ ಈ ಹೆಸರು. ಎರಡನೇ ಮಹಾಯುದ್ಧ ಮುಗಿದು 50 ವರ್ಷಗಳ ವರೆಗೆ ಯುರೋಪಿನಲ್ಲಿ ಯುದ್ಧ ಆಗಲಿಲ್ಲ. ಇನ್ನೊಂದು ಮಹಾಯುದ್ಧ ಮರುಕಳಿಸಲಿಲ್ಲ. ಇದು ವಾರ್ಸಾ ಒಪ್ಪಂದದ ಕೊಡುಗೆ. ನಾಟೋಗೆ ಎದುರಾಗಿ ವಾರ್ಸಾ ಒಪ್ಪಂದದ ಸಮಾಜವಾದಿ ದೇಶಗಳು ತಮ್ಮ ಸಂಪನ್ಮೂಲಗಳ ದೊಡ್ಡ ಭಾಗ ತ್ಯಾಗಮಾಡಿ ಪೈಪೋಟಿ ನಡೆಸದಿದ್ದರೆ, ಖಂಡಿತ ಯುದ್ಧ ಆಗುತ್ತಿತ್ತು. ಈ 50 ವರ್ಷಗಳಲ್ಲಿ ವಾರ್ಸಾ ಒಪ್ಪಂದ ದೇಶಗಳು ಎಂದೂ ನಾಟೋ ಮಿಲಿಟರಿ ಪೈಪೋಟಿಯಲ್ಲಿ ಮುನ್ನಡೆ ಸಾಧಿಸಲು ಬಿಡಲಿಲ್ಲ. ಆದರೆ ಈ ಶಾಂತಿ ಸಾಧಿಸಿದ್ದು ಎರಡೂ ಬಣದ (ಅಷ್ಟೇ ಏಕೆ, ಜಗತ್ತಿನ ದೊಡ್ಡ ಭಾಗದ) ದೇಶಗಳ ಸಂಪನ್ಮೂಲಗಳ ದೊಡ್ಡ ಭಾಗವನ್ನು ಪೋಲು ಮಾಡಿ ಜನರ ಜೀವನಮಟ್ಟ ಇನ್ನಷ್ಟು ಏರಿಸಬಹುದಾಗಿದ್ದ ಸಾಧ್ಯತೆಯನ್ನು ಮೂಲೆಗುಂಪು ಮಾಡಿತು. ನಾಟೋ ಈ ಶಸ್ತ್ರಾಸ್ತ್ರ ಪೈಪೋಟಿಯನ್ನು ಸಮಾಜವಾದಿ ದೇಶಗಳನ್ನು ಆರ್ಥಿಕವಾಗಿ ಹಿಸುಕಿ ಹಾಕಲು ಬಳಸಿತು. ಯುರೋಪಿನಲ್ಲಿ ಸಮಾಜವಾದಿ ಬಣದ ವಿಘಟನೆಗೆ ಈ ಮಹಾನ್ ಪೋಲು ಒಂದು ಕಾರಣವಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಇಡೀ ಜಗತ್ತಿನ ಸಾಮ್ರಾಜ್ಯ ಶಾಹಿಯ ಲೂಟಿ ಹೊಂದಿದ್ದ ನಾಟೋದ ಸಂಪನ್ಮೂಲಗಳಿಗೂ, ಸಮಾಜವಾದಿ ದೇಶಗಳ ಸಂಪನ್ಮೂಲಗಳಿಗೂ ಅಜಗಜಾಂತರವಿತ್ತು.

ವಾರ್ಸಾ ಒಪ್ಪಂದದ ಏಕ ಪಕ್ಷೀಯ ಶಾಂತಿ ಕ್ರಮಗಳು:

80ರ ದಶಕದ ವ್ಯಾಪಕವಾಗಿ ಬೆಳೆದ ಶಾಂತಿ ಚಳುವಳಿಗಳು ಎರಡೂ ಮಿಲಿಟರಿ ಬಣಗಳನ್ನು ವಿಸರ್ಜಿಸಬೇಕು, ಜಗತ್ತನ್ನು ವಿನಾಶಕಾರಿ ಅಣ್ವಸ್ತ್ರಯುದ್ಧದ ಭೀತಿಯಿಂದ ಪಾರುಮಾಡುವ ನಿಗ್ರಹದ ಕ್ರಮಗಳನ್ನು ಕೈಗೊಳ್ಳ ಬೇಕೆಂದು ಒತ್ತಾಯಿಸಿದವು. ಇವುಗಳಲ್ಲಿ ಮುಖ್ಯವಾದುವು ಅಣ್ವಸ್ತ್ರಗಳ ಮೊದಲ ಬಳಕೆ ಮಾಡದಿರುವ ಬಗ್ಗೆ ಘೋಷಣೆ. ಅಣ್ವಸ್ತ್ರಗಳ ಆಕಸ್ಮಿಕ ಬಳಕೆ ತಡೆಯಲು ಕ್ರಮಗಳು, ಅಣ್ವಸ್ತ್ರಗಳ ಸಂಖ್ಯೆ-ವೈವಿಧ್ಯ ಕಡಿಮೆ ಮಾಡುವುದು, ತಾರಾಸಮರದಂತಹ ಹೊಸ ಅಸ್ತ್ರಗಳ ಬೆಳವಣಿಗೆ ತಡೆಯುವುದು, ಅಣ್ವಸ್ತ್ರ ತಂತ್ರಜ್ಞಾನ ವ್ಯಾಪಕವಾಗಿ ಹರಡದಂತೆ ತಡೆಯುವುದು ಇತ್ಯಾದಿ. ಇವೆಲ್ಲದಕ್ಕೂ ನಾಟೋ ಉತ್ತರ ದಿವ್ಯ ತಿರಸ್ಕಾರವಾಗಿತ್ತು. ಆದರೆ ಸೋವಿಯೆತ್ ಒಕ್ಕೂಟದ ಆಗಿನ ಅಧ್ಯಕ್ಷ ಗೋರ್ಬಚೇವ್ ನಾಯಕತ್ವದಲ್ಲಿ ಇದರಲ್ಲಿ ಹಲವು ಕ್ರಮಗಳನ್ನು ವಾರ್ಸಾ ಒಪ್ಪಂದದ ದೇಶಗಳು ಕೈಗೊಂಡವು - ಮೊದಲ ಬಳಕೆ ಮಾಡದಿರುವ ಬಗ್ಗೆ ಘೋಷಣೆ, ಅಣ್ವಸ್ತ್ರಗಳಲ್ಲಿ, ಕ್ಷಿಪಣಿಗಳಲ್ಲಿ, ಏಕಪಕ್ಷೀಯ ಕಡಿತ, ತಾರಾಸಮರದ ವ್ಯವಸ್ಥೆ ಬೆಳವಣಿಗೆ ಕೈಗೆತ್ತಿಕೊಳ್ಳದಿರುವುದು ಇತ್ಯಾದಿ. ಆದರೆ ಇದಕ್ಕೆ ನಾಟೋದಿಂದ ತಕ್ಕ ಪ್ರತಿಕ್ರಿಯೆ ಬರಲಿಲ್ಲ. ಕೊನೆಗೆ ಸಮಾಜವಾದಿ ವ್ಯವಸ್ಥೆ ಪೂರ್ವ ಯುರೋಪಿನಲ್ಲಿ ಸಡಿಲಾಗುತ್ತಿದ್ದಂತೆ ವಾರ್ಸಾ ಒಪ್ಪಂದವನ್ನು ವಿಸರ್ಜಿಸಲಾಯಿತು. ನಾಟೋ ಸಹ ಇದನ್ನೇ ಮಾಡಬೇಕೆಂದು ಶಾಂತಿ ಚಳುವಳಿ ಒತ್ತಾಯಿಸಿತು. ಆದರೆ ನಾಟೋದ ಪ್ರತಿಕ್ರಿಯೆ ಪುನಃ ದಿವ್ಯ ತಿರಸ್ಕಾರವಾಗಿತ್ತು. ವಾರ್ಸಾ ಒಪ್ಪಂದವನ್ನು ವಿಸರ್ಜಿಸಿದರೆ ನಾಟೋವನ್ನು ವಿಸರ್ಜಿಸಲಾಗುವುದು ಎಂದು ತನಗೆ ಭರವಸೆ ಕೊಟ್ಟಿದ್ದರು ಎಂದು ಗೋರ್ಬಚೆವ್ ಇತ್ತೀಚೆಗೆ ಹೇಳಿದ್ದಾರೆ. ಶಾಂತಿ ಚಳುವಳಿಗಳ ಒತ್ತಾಯಕ್ಕೆ ಮಣಿದು ನಾಟೋದ ಆಕ್ರಮಣ ಸಾಮ್ರಾಜ್ಯಶಾಹಿ ಸ್ವರೂಪವನ್ನು ಗಣನೆಗೆ ತೆಗೆದುಕೊಂಡದ್ದು ಏಕಪಕ್ಷೀಯವಾಗಿ ಶಾಂತಿ ಕ್ರಮಗಳನ್ನು ಉತ್ಸಾಹದಿಂದ ತೆಗೆದು ಕೊಟ್ಟದ್ದು ಸಮಾಜವಾದಿ ವ್ಯವಸ್ಥೆಯ ವಿಘಟನೆಯನ್ನು ತ್ವರಿತಗೊಳಿಸಿತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ವಾರ್ಸಾ ಒಪ್ಪಂದದ ಬೆದರಿಕೆ ಹೋದ ನಂತರ ನಾಟೋ ವಿಸರ್ಜಿಸದಿದ್ದರೂ, ಅದರ ಚಟುವಟಿಕೆ ಕಡಿಮೆಯಾಗಿದೆ ಎಂದು ನಿರೀಕ್ಷಿಸಿದ್ದವರಿಗೂ ನಿರಾಶೆ ಕಾದಿತ್ತು. ಅಲ್ಲದೆ ನಾಟೋ (ಪುನಃ ರಶ್ಯಾಕ್ಕೆ ಕೊಟ್ಟ ಭರವಸೆಗೆ ವ್ಯತಿರಿಕ್ತವಾಗಿ) ಪೂರ್ವಕ್ಕೆ ವಿಸ್ತರಿಸತೊಡಗಿತು, ಪೂರ್ವಯುರೋಪಿನ ಮಾಜಿ ಸಮಾಜವಾದಿ ದೇಶಗಳಾದ ಹಂಗೇರಿ ಪೋಲೆಂಡ್, ಚೆಕೊಸ್ಲೊವಾಕಿಯಾಗಳನ್ನು ಸದಸ್ಯರಾಗಿ ಸ್ವೀಕರಿಸಿತು.

ಬದಲಾದ ಪರಿಸ್ಥಿತಿಯಲ್ಲಿ ನಾಟೋದ ರಣನೀತಿಯನ್ನು ಪುನರ್ವಿಮರ್ಶಿಸ ಬೇಕೆಂಬ 90ರ ದಶಕದ ತುಂಬಾ ಶಾಂತಿ ಚಳುವಳಿ ನಾಟೋದ ಕೆಲವು ಸದಸ್ಯ ದೇಶಗಳಲ್ಲಿ ಒತ್ತಾಯಿಸುತ್ತಾ ಬಂದಿವೆ. ಶಾಂತಿ ಚಳುವಳಿ ಒತ್ತಾಯಿಸಿ ಬಂದಿದ್ದ ಶಾಂತಿ ಕ್ರಮಗಳನ್ನು ಅಂಗೀಕರಿಸುವ ಕಾಲ ಬಂದಿದೆ ಎಂದೆಲ್ಲಾ ಹೇಳುತ್ತಾ ಬಂದವು.

1993 ರ ನಾಟೋ ಶೃಂಗ ಸಭೆಯಲ್ಲಿ ಇಂತಹ ಪುನರ್ವಿಮರ್ಶೆ ನಡೆದರೂ ಯಾವುದೇ ಶಾಂತಿಕ್ರಮಗಳನ್ನು ನಾಟೋ ಅನುಸರಿಸಲಿಲ್ಲ-ಬದಲಾಗಿ ನಾಟೋ ತನ್ನ ನಿಜಸ್ವರೂಪ ಉದ್ದೇಶಗಳನ್ನು ಹೆಚ್ಚು ಹೆಚ್ಚು ಪ್ರಕಟಿಸಲಿಕ್ಕಾಗಿ ಆಕ್ರಮಣ ಮಾಡತೊಡಗಿತು. ಯುಗೋಸ್ಲಾವಿಯವನ್ನು ತುಂಡು ಮಾಡುವಲ್ಲಿ ನಾಟೋದ ಆಕ್ರಾಮಕ ಸ್ವರೂಪ 1995 ರಲ್ಲಿ ಬೋಸ್ನಿಯಾ ಯುದ್ಧದ ನಂತರ ಹೆಚ್ಚೆಚ್ಚು ಬೆಳಕಿಗೆ ಬಂತು. ಕಳೆದ 5 ವಾರಗಳ ನಾಟೋದ ಬರ್ಬರ ಬಾಂಬ್‌ದಾಳಿಯಿಂದ ನಾಟೋ ಹೊಸ ಅವಧಿ ಪ್ರವೇಶಿಸುತ್ತಿದೆ. ವಾಶಿಂಗ್‌ಟನ್‌ನಲ್ಲಿ ಕಳೆದ ವಾರ ನಡೆದ ಸುವರ್ಣ ಉತ್ಸವ ಶೃಂಗ ಸಭೆ ಸಹ ಇಂತಹ ರಣನೀತಿಯ ಪುನರ್ವಿಮರ್ಶೆಯ ಅಜೆಂಡಾ ಹೊಂದಿತ್ತು. ಆದರೆ ಈ ಪುನರ್ವಿಮರ್ಶೆಯ ನಂತರ ನಾಟೋ ಎಲ್ಲಾ ಶಾಂತಿ ಕ್ರಮಗಳನ್ನು ಪುನಃ ತಿರಸ್ಕರಿಸಿರುವುದಲ್ಲದೆ ಯುರೋಪು ಮತ್ತು ಎಲ್ಲೆಡೆ ಕಲಹಗಳಲ್ಲಿ ಮಧ್ಯಪ್ರವೇಶ ಮಾಡಬೇಕೆಂಬ ಧೋರಣೆ ಅಂಗೀಕರಿಸಿದೆ.

ಪಂಜುಗಳನ್ನು ಪ್ರದರ್ಶಿಸಿದ ಶೃಂಗಸಭೆ:

ನಾಟೋದ ಈ ಸುವರ್ಣ ಉತ್ಸವ ಶೃಂಗ ಸಭೆಯಲ್ಲಿ 19 ಸದಸ್ಯ ದೇಶಗಳು, 23 ಇತರ ದೇಶಗಳು (ಮುಖ್ಯವಾಗಿ ಪೂರ್ವಯುರೋಪಿ ದೇಶಗಳು ಮಾಜಿ ಸೋವಿಯತ್ ದೇಶಗಳು ನಾಟೋದ ಸದಸ್ಯರಲ್ಲದವು) ಭಾಗವಹಿಸಿದ್ದವು. ಇದು ನಾಟೋ ಚರಿತ್ರೆಯಲ್ಲಿ ಹೊಸ ಘಟ್ಟ ಆರಂಭಿಸಿ ಈ ಶೃಂಗಸಭೆ ನಾಟೋದ ಜಾಗತಿಕ ಪೋಲೀಸ್ ಪಾತ್ರವನ್ನು ಬಹಿರಂಗವಾಗಿ ಘೋಷಿಸಿದೆ. 90ರ ದಶಕದ ಆರಂಭದಲ್ಲಿ (ಕೊಲ್ಲಿಯುದ್ಧ ಬೋಸ್ನಿಯಾ ಬಿಕ್ಕಟ್ಟಿನ ಸಮಸ್ಯೆ) ಇದ್ದಂತೆ ಇಂತಹ ಮಿಲಿಟರಿ ಕಾರ್ಯಾಚರಣೆಗಳ ಮೊದಲು (ನಾಟಕಕ್ಕಾದರೂ) ವಿಶ್ವಸಂಸ್ಥೆಯ ಭದ್ರತಾ ಸಮಿತಿ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಘೋಷಿಸಿ ಇನ್ನೊಂದು ಹೆಜ್ಜೆ ಮುಂದೆ ಹೋಗಿದೆ. ನಾಟೋ ತನ್ನದೇ ಕೆಲವು ಹಿಂದಿನ ನಿಯಮಗಳನ್ನು ಈ ಶೃಂಗಸಭೆಯ ನಿರ್ಧಾರಗಳ ನಂತರ ಮುರಿಯಲಿದೆ. ಇವುಗಳಲ್ಲಿ ಪ್ರಮುಖವಾದವು ಸದಸ್ಯ ದೇಶವಲ್ಲದ ದೇಶಗಳು ನಾಟೋ ಶಸ್ತ್ರಾಸ್ತ್ರ (ಅಣು ಕ್ಷಿಪಣಿ ಇತ್ಯಾದಿ) ಗಳನ್ನು ಶೇಖರಿಸುವುದು, ಅಣ್ವಸ್ತ್ರ ಹೊಂದಿರುವ ಸದಸ್ಯ ದೇಶಗಳಿಗೆ ಅಣ್ವಸ್ತ್ರ ತಂತ್ರಜ್ಞಾನ ಕೊಡುವುದು, ಯುರೋಪಿನ ಹೊರಗೆ ಸಹ ನಾಟೋ ಪಡೆ ಗಳನ್ನು ಪ್ರಾದೇಶಿಕ ಕಲಹಗಳಲ್ಲಿ ಮಧ್ಯಪ್ರವೇಶ ಮಾಡಲು ಕಳಿಸುವುದು - ಇವೆಲ್ಲಾ ವಿಶ್ವಶಾಂತಿಗೆ ಭಾರಿ ಅಪಾಯಕಾರಿ ನಿರ್ಧಾರಗಳು ಎಂದು ಬೇರೆ ಹೇಳಬೇಕಾಗಿಲ್ಲ. ನಾಟೋದ ಸುವರ್ಣ ಉತ್ಸವ ಶೃಂಗ ಸಭೆಯ ನಿರ್ಣಯ ವಿಶ್ವ ಶಾಂತಿ, ಬೆಳವಣಿಗೆಗೆ ತೀವ್ರ ಅಪಾಯಕಾರಿ ಬೆಳವಣಿಗೆ. ಇದಕ್ಕೆ ತಕ್ಕ ಪ್ರತಿಕ್ರಿಯೆ ರೂಪಿಸುವುದು ಶಾಂತಿ, ಸಮಾನತೆಗಾಗಿ ಚಳವಳಿ ನಡೆಸುತ್ತಿರುವ ಎಲ್ಲಾ ಶಕ್ತಿಗಳ ಕರ್ತವ್ಯ.

ನಾಟೋ-ಉತ್ತರ ಅಟ್ಲಾಂಟಿಕ್ ಭಯೋತ್ಪಾದಕ ಸಂಘಟನೆ ಎಂಬ ಬ್ಯಾನರ್ ಹೊತ್ತಿದ್ದ ಸಾವಿರಾರು ಶಾಂತಿ ಚಳುವಳಿಗಾರರ ಭಾರಿ ಪ್ರದರ್ಶನ-ವಾಶಿಂಗ್‌ಟನ್ ಸುವರ್ಣ ಉತ್ಸವದ ಹೊರಗೆ ನಡೆದದ್ದು ಈ ದಿಕ್ಕಿನಲ್ಲಿ ಆಶಾದಾಯಕ

ನನ್ನೂರಿನಲ್ಲಿ ನಾನೇ ಪರಕೀಯ

ಆ ಬಾಲ್ಯದ "ಮಾಳಿ" (ನನ್ನ ಮನೆಯವರು ಮತ್ತು ಪಕ್ಕದ ಮನೆಯವರು ನನ್ನನ್ನು ರೇಗಿಸಲು ಬಳಸುವ ಹೆಸರು)ಯನ್ನು ನೀವು ನೋಡಿಲ್ಲ. ಮಾಳಿಯೊಂದಿಗೆ ಕಲಿತ ಕೆಲವು ಸ್ನೇಹಿತರೇ, ಈಗ ಅವನಿಂದ ದೂರನಿಂತು "ರೀ" ಎಂದು ಸಂಬೋಧಿಸುತ್ತಾರೆ. ಅವನೆಷ್ಟೇ ಹತ್ತಿರ ಹೋಗಲು ಪ್ರಯತ್ನಿಸಿದರೂ, ಅವರು ಅವನನ್ನು ದೂರವಿಡುತ್ತಾರೆ. ಮೊದಲಿನ ಮಾಳಿಯನ್ನು ಮಾತನಾಡಿಸಿದಂತೆ ಅವರು ಮಾತನಾಡಿಸುವುದಿಲ್ಲ, ಛೇಡಿಸುವುದಿಲ್ಲ, ದೂರ ದೂರಕ್ಕೆ ಸರಿದು ನಿಲ್ಲುತ್ತಾರೆ. ಕಾರಣ ಅವನೀಗ "ದೊಡ್ಡ ಮನುಷ್ಯ" ಎನ್ನುವ ಭ್ರಮೆ ಅವರಿಗೆ.

ನನ್ನೂರಿನಲ್ಲಿ, ನನ್ನ ಕೇರಿಯಲ್ಲಿ ಈಗ ನಾನೇ ಪರಕೀಯನಾಗಿ ಬಿಟ್ಟಿದ್ದೇನೆ.......................

"ಡಾ. ಮಾಲಗತ್ತಿಯವರಿಗೆ ಈಗ ಯಾರು ದಲಿತ ಅಂತ ಕರಿಬೇಕು?" ಎಂದು ನೆರೆದ ಸಭೆಯಲ್ಲಿಯೇ ಪ್ರಶ್ನೆ ಎತ್ತಿ ಚರ್ಚಿಸಿದವರೂ ಇದ್ದಾರೆ. ಅವರ ಚರ್ಚೆಯನ್ನು ಕೇಳಿ ನಾನು ಒಳಗೊಳಗೆ ಸಂತೋಷ ಪಟ್ಟಿದ್ದೇನೆ. ಏಕೆಂದರೆ ಇಂಥ ಪ್ರಶ್ನೆಗಳು ಏಳಬೇಕು ಎನ್ನುವಂತೆ ನನ್ನ ಇರುವಿಕೆಯನ್ನು ನಾನು ರೂಢಿಸಿಕೊಂಡಿದ್ದೇನೆ. ಒಂದು ಕಾಲ ಘಟ್ಟದಲ್ಲಿ "ನಾನೂ ಮಾರ್ಕ್ಸ್‌ವಾದ ಓದಿದ್ದೇನೆ" ಎಂದು ತಿಳಿಸಲು ಕೊರಚಲು ಗಡ್ಡ, ಖಾದಿ ಜುಬ್ಬ ಹಾಕಿಕೊಂಡು ಸದಾ ಮಾರ್ಕ್ಸ್‌ವಾದದ ಪುಸ್ತಕಗಳನ್ನು ಬ್ಯಾಗಿನಲ್ಲಿ ಸೇರಿಸಿಕೊಂಡು ಬಗಲಿಗೆ ಚೀಲ ಜೋತಾಡಿಸುತ್ತ ತಿರುಗುತ್ತಿದ್ದೆ. ಇಂಥ ಸಂದರ್ಭದಲ್ಲಿ "ಸೊಂಟದ ಕೆಳಗಿನ ಜನಕ್ಕೆ ಏನು ಸೌಲತ್ತು ಕೊಟ್ರು ಏನಿದೆ? ತಮ್ಮದನ್ನ ಬಿಡೋದಿಲ್ಲ" ಎಂದು ಹಂಗಿಸಿದ ಮಾತುಗಳು ನನ್ನ ಕಿವಿಯಲ್ಲಿ ಕಾದ ಸೀಸನ್ನು ಸುರುವಿದಂತೆ ಗಡಚಿಕ್ಕಿವೆ. ಎದೆಯಲ್ಲಿ ಮುಳ್ಳು ಮುರಿದಂತೆ ಉಳಿದುಬಿಟ್ಟಿವೆ. ಕಾಲೇಜಿನ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿ "ಕಾಲಗ ಹಾಕ್ಕೊಳ್ಳಾಕ ಸರಿಯಾಗಿ ಚಪ್ಪಲಿ ಇಲ್ಲ ಜನರಲ್ ಸೆಕ್ರೇಟ್ರಿ ಆಗ್ತಾನಂತೆ" ಎಂದು ಅವಮಾನಿಸಿದ ಪ್ರಸಂಗಗಳು ಸ್ವಾಭಿಮಾನವನ್ನೂ ಕೆದಕಿವೆ. ಇಂಥ ಹಲವಾರು ಸಂದರ್ಭಗಳು, ಈಗ ನಾನೇನಿದ್ದರೂ ಅವು ನನ್ನ ಇರುವಿಕೆಯನ್ನು ರೂಪಿಸಿವೆ. ಅವಕಾಶ ಸಿಕ್ಕರೆ "ಒಬ್ಬ ದಲಿತನೂ ಹಂಗಿಸುವವರ ಎದೆಯ ಮೇಲೆ ಮೆಟ್ಟಿದಂತೆ ಬದುಕಬಲ್ಲ" ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕಾಗಿ ನನ್ನ ಹಲವಾರು ವೈಯಕ್ತಿಕ ಆಸೆಗಳನ್ನು ಹತ್ತಿಕ್ಕಿ ನನ್ನ ಇರುವಿಕೆಯನ್ನು ಕರಗತ ಮಾಡಿಕೊಂಡಿದ್ದೇನೆ. ವಿಚಾರ ಸಂಕಿರಣದಲ್ಲಿ ಇಂಥ ಪ್ರಶ್ನೆಗಳು ಎದ್ದಾಗ "ಗೆದ್ದ ನಗೆ" ಯನ್ನು ನಕ್ಕಿದ್ದೇನೆ.

★★★★★

ಹೆಣದ ದುಡ್ಡು ಮತ್ತು ಮದುವೆಯ ಊಟ:

ಅವತ್ತು ವೀರಶೈವರ ಮನೆಯಲ್ಲಿ ಯಾರೋ ಸತ್ತಿದ್ದರು. ಹೆಣ ಬ್ಯಾಂಡ್ ಬಾಜಾದೊಂದಿಗೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಹೆಣದ ಮೇಲೆ ಹಣ ತೂರುವುದೊಂದು ಸಂಪ್ರದಾಯ. ಅದು ಅವರಿಗೆ ಪ್ರತಿಷ್ಠೆಯ ಹೆಗ್ಗುರುತು ಆಗಿರಬೇಕು. ಯಾರ ಮನೆಯಲ್ಲಿ ಸತ್ತಿದ್ದಾರೆ, ಯಾರು ಈ ಸಂಪ್ರದಾಯವನ್ನು ಪಾಲಿಸುತ್ತಾರೆ ಎನ್ನುವುದನ್ನು ನನ್ನಜ್ಜಿ ಯಾವ ಮೂಲಗಳಿಂದ ತಿಳಿದುಕೊಳ್ಳುತ್ತಿದ್ದಳೋ ನಾನರಿಯೆ. ಇಂಥ ಆದಾಯ ಬರುವ ಮೂಲಗಳನ್ನು ನಮಗೆ ಹುಡುಕಿಕೊಡುತ್ತಿದ್ದಳು. ಹಣ ತೆಗೆದುಕೊಂಡು ಹೋಗುವಾಗ ಅವರು ನಮ್ಮನ್ನು ಅಷ್ಟೇ ಜಾಗರೂಕತೆಯಿಂದ ಗಮನಿಸುತ್ತಿದ್ದರೆಂದು ತೋರುತ್ತದೆ. ನಾವು ಬಂದಿರುವುದನ್ನು ಖಚಿತಪಡಿಸಿಕೊಂಡೇ ಹೆಣವನ್ನು ಮೇಲಕ್ಕೆ ಎತ್ತುತ್ತಿದ್ದರು. ಹೆಣದ



ಮೇಲೆ ಅವರು ತೂರಿರುವ ಹಣ ನೆಲಕ್ಕೆ ಬಿದ್ದ ಮೇಲೆ ಕಬ್ಬಾಡಿ ಎತ್ತಿಕೊಳ್ಳುವುದು ದಲಿತರ ಕೆಲಸ. ದಲಿತರು ಇರದೆ ಹೋದರೆ ಅವರು ತೂರುವ ಹಣಕ್ಕೆ ಬೆಲೆಯಾದರೂ ಏನು? ಅವರು ಹಣ ತೂರಬೇಕು, ತೂರಿದ ಹಣ ಉರುಳುತ್ತ (ಹಾಸುಗಲ್ಲಿನ ರಸ್ತೆ ಇದ್ದಾಗ), ಹೆಣ ಹೊತ್ತವರ ಕಾಲಲ್ಲಿ, ಹಿಂದೆ ಅಳುತ್ತ ಬರುವವರ ಕಾಲಲ್ಲಿ ಹೋಗಬೇಕು. ಅವರು ಅದನ್ನು ದಾಟಿ ಪಾಪ ಕಳೆದುಕೊಳ್ಳಬೇಕು. ಅವರೆಲ್ಲ ತುಳಿದು ಹೋದ ಮೇಲೆ ನಾವು ಅದನ್ನು ಎತ್ತಿಕೊಳ್ಳಬೇಕು.

ಹೆಣದ ಮೇಲೆ ಅವರು ಹಾರಿಸುವ ಪುಡಿಕಾಸೆಂದರೆ, ಐದು ಪೈಸೆಯ ನಾಣ್ಯವೇ ಕೊನೆಯದ್ದಾಗಿರುತ್ತಿತ್ತು. ತೂತಿನ ದುಡ್ಡು, ಒಂದು ಪೈಸೆ, ಎರಡು ಪೈಸೆ ಹೆಚ್ಚಿರುತ್ತಿದ್ದವು. ಹೆಚ್ಚು ಶ್ರೀಮಂತರಿದ್ದರೆ ಹತ್ತು ಪೈಸೆಯ ನಾಣ್ಯ ಕೊನೆಯದಾಗಿರುತ್ತಿತ್ತು.

★★★★★

ನಾಳಿನ ಕಸದ ಪಾಳಿ: ಮಾಲಕತ್ತಿ

ಇವೆಲ್ಲ ಶಿಕ್ಷೆಗಳು ಯಾವ ಕಾರಣಕ್ಕಾಗಿ ಗೊತ್ತೆ!? ನಾವು ಮನೆಯಲ್ಲಿ, ಹೇಳಿದ ಪಾಠ ಓದಿಕೊಂಡು ಬರಲಿಲ್ಲ ಎಂದಲ್ಲ. ನಮ್ಮ ಕೊಳಕುತನಕ್ಕಾಗಿಯಲ್ಲ. ಶಾಲೆಯಲ್ಲಿ ಪ್ರಾರ್ಥನೆಯಾಗುವುದಕ್ಕಿಂತ ಮುಂಚೆಯೇ, ನಾವು ಬಂದು ತರಗತಿಯ ಕಸ ಗುಡಿಸಬೇಕು. ಬೇಗನೆ ಬಂದು ಕಸ ಗುಡಿಸದಿದ್ದರೆ ಈ ಪರಿಯ ಶಿಕ್ಷೆ.

ನಮ್ಮ ಕೇರಿಯವರು ಒಟ್ಟು ತರಗತಿಯಲ್ಲಿ ನಾಲ್ಕು ಜನ. ದೇವಪ್ಪ, ಮಲ್ಲಪ್ಪ, ಬಸವಂತಪ್ಪ ಮತ್ತು ನಾನು. ನಾಳೆ ಕಸದ ಪಾಳಿ ಯಾರದಿದೆ ಎನ್ನುವುದನ್ನು ಕರಿಹಲಗೆಯ ಮೇಲೆ ಬರೆಯಲಾಗುತ್ತಿತ್ತು. ನಮ್ಮ ಹೆಸರುಗಳನ್ನು ಕರಿಹಲಗೆಯ ಮೇಲೆ ಯಥಾಸ್ಥಿತಿಯಲ್ಲಿ ಬರೆಯಲು ಅವರು ಹೇಸುತ್ತಿದ್ದರೆಂದು ತೋರುತ್ತದೆ. ಹೀಗಾಗಿ ದೇವ್ಯಾ, ಮಲ್ಯಾ, ಬಸ್ಯಾ ಎಂದು ಹೆಸರನ್ನು ಮುಗುಚಿ ಬರೆಯುತ್ತಿದ್ದರು. ಹೆಸರು ಬರೆಯುವ ಕೆಲಸ ಮೊದಲು ಗುರೂತ್ತಮರೇ ಮರೇ ಮಾಡುತ್ತಿದ್ದರು. ಅನಂತರ ಆ ಕೆಲಸ ತರಗತಿಯ ಮಂತ್ರಿವರ್ಯರಿಗೆ ವರ್ಗಾವಣೆ ಮಾಡಲಾಯಿತು. ಕಸಗುಡಿಸುವ ಕೆಲಸ ದಲಿತರಾದ ನಮ್ಮ ನಾಲ್ಕು ಜನಗಳಿಗೆ ಮಾತ್ರ ಸೀಮಿತವಾಗಿತ್ತು.

ನಾಲ್ಕು ಐದು ಜನ ಒಟ್ಟಿಗೆ ಕುಳಿತುಕೊಳ್ಳಬಹುದಾದ ಉದ್ದನೆಯ ಕಟ್ಟಿಗೆಯ ಹಾಸುಮಣೆಗಳಿದ್ದವು. ಇವುಗಳನ್ನು

ಕರಿಹಲಗೆಯ ಮೇಲೆ ನನ್ನ ಹೆಸರನ್ನು ಮುಗುಚಿ ಬರೆಯುತ್ತಿರಲಿಲ್ಲ, ಹೆಸರು ಅರವಿಂದ ಎಂದಿರುವುದರಿಂದ ಅದು ಹೇಗೆ ಮುಗುಚಿ ಹೇಳಿದರೂ ಅವರಿಗೆ ತೃಪ್ತಿಯಾಗಿ ಕಂಡಿರಲಿಕ್ಕಿಲ್ಲ. ಅದಕ್ಕಾಗಿ ಅವರು ನನ್ನ ಅಡ್ಡ ಹೆಸರನ್ನು ಬಳಸಿಕೊಳ್ಳುತ್ತಿದ್ದರು.

" ನಾಳಿನ ಕಸದ ಪಾಳಿ- ಮಾಲಕತ್ತಿ"

ಎಂದು ಬರೆಯುತ್ತಿದ್ದರು. ಕೆಲವೊಮ್ಮೆ "ಕತ್ತಿ" ಎಂದಷ್ಟೇ ಬರೆಯುವ ಮನಸ್ಸು ಮಾಡುತ್ತಿದ್ದರು.

'ಗೌರ್ಮೆಂಟ್ ಬ್ರಾಹ್ಮಣ' ಪ್ರಸಿದ್ಧ ದಲಿತ ಸಾಹಿತಿ ಹಾಗೂ ಕನ್ನಡ ಪ್ರಾಧ್ಯಾಪಕ ಡಾ. ಅರವಿಂದ ಮಾಲಗತ್ತಿಯವರ ಆತ್ಮಕಥನ. ೧೯೯೪ ರಲ್ಲಿ ಹೆಗ್ಗೋಡಿನ ಅಕ್ಷರ ಪ್ರಕಾಶನದವರು ಕೃತಿ ರೂಪದಲ್ಲಿ (ಬೆಲೆ ರೂ. ೩೫) ಪ್ರಕಟಿಸಿದರು. ಇದಕ್ಕೆ ಮೊದಲೇ ಇದರ ಹೆಚ್ಚಿನ ಭಾಗಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. 'ಇಲ್ಲಿಯ ಅನುಭವಗಳೂ ಒಬ್ಬ ಸಾಮಾನ್ಯ ಮನುಷ್ಯನ ಅನುಭವಗಳೇ ಆಗಿವೆ ಎನ್ನುವ ಮಾತನ್ನು ಹೇಳಲಾರೆ, ಆದರೆ ಸಾಮಾನ್ಯ ದಲಿತನೊಬ್ಬನ ಅನುಭವಗಳಾಗಿವೆ ಎನ್ನುವುದನ್ನು ಹೇಳದಿರಲಾರೆ" ಎಂದು ಸ್ವತಃ ಲೇಖಕರೇ ಹೇಳಿದ್ದಾರೆ. ನಮ್ಮ ಓದುಗರಿಗಾಗಿ ಈ ಕೃತಿಯ ಒಂದು ಇಣುಕು ನೋಟ ಇಲ್ಲಿದೆ

ಎತ್ತಿ ಕಸಗುಡಿಸುವುದೆಂದರೆ ತೊಂದರೆಯಾಗುತ್ತಿತ್ತು. ಜೊತೆಗೆ ಸಿಟ್ಟೂ ಬರುತ್ತಿತ್ತು. ಯಾಕೆಂದರೆ ಈ ಮಣೆಗಳು ಕುಳಿತುಕೊಳ್ಳಲು ನಮಗಿರಲಿಲ್ಲ. ನಾವು ನಾಲ್ಕು ಜನ ಕೊನೆಯಲ್ಲಿ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದೆವು. ಹೀಗಾಗಿ ಕುಳಿತುಕೊಳ್ಳಲು ನಮಗಿಲ್ಲದ ಆ ಮಣೆಗಳನ್ನು ಕಸಗುಡಿಸುವಾಗ ಎತ್ತಿ ನೆಲಕ್ಕೆ ಕುಕ್ಕುತ್ತಿದ್ದೆವು. ಯಾರಾದರೂ ನೋಡಿದರೆ, ಕೈ ಜಾರಿದವರಂತೆ ನಟಿಸುತ್ತಿದ್ದೆವು.

ಒಂದು ಬಾರಿ ನಾನು ಶಾಲೆಗೆ ಹೋಗಲಾರೆ ಎಂದು ಹಟ ಮಾಡಿದೆ. ಯಾಕೆ? ಎಂದು ಅಜ್ಜಿ ಪ್ರಶ್ನಿಸಿದಾಗ, ನಾ ಕೊಟ್ಟ ಕಾರಣ:

ಅವ್ರೆಲ್ಲ ಮಣೆಮ್ಯಾಗ ಕುಂದ್ರತಾರ
ನಮಗೆ ನೆಲದ ಮ್ಯಾಲಿ ಕುಂದ್ರಸ್ತಾರ
ನಾ ವಲ್ಲ್ಯಾ ಹೋಗುದಿಲ್ಲ..... ಎಂದಿದ್ದೆ.
ಅದಕ್ಕೆ ನನ್ನ ಅಜ್ಜಿ
ಕಟಗಿ ಮಣೆ ಏನ ಮಾಡುದು?

ಕುಂತ್ರ ಅದು ನಡತೈತಿ, ನಿನಗೆ ಸಣ್ಣ ಕೌದಿ ಹೊಲ್ದು ಕೊಡ್ತಿನಿ, ಎಂದಳು ಅದು ನನಗೆ ಕೀಳಾಗಿ ಕಂಡದ್ದರಿಂದ ನಿರಾಕರಿಸಿದೆ.

ಹೊಸಾ ತಟ್ಟ ಕೊಡ್ತಿನಿ ತಗೊಂಡ ಹೋಗು ಎಂದಳು.
(ತಟ್ಟು - ಕತ್ತರಿಸಿದ ಸಣಬಿನ ಚೀಲ)

ಒಪ್ಪಿಕೊಂಡು, ಮರುದಿನ ತಟ್ಟು ತೆಗೆದುಕೊಂಡು ಠೀವಿಯಿಂದ ಹೋಗಿ ಹಾಸಿಕೊಂಡು ಗೆಲುವಿನ ಮುಖದಲ್ಲಿ ಕುಳಿತಿದ್ದೆ. ಹಾಸು ಮಣೆಯ ಮೇಲೆ ಕುಳಿತುಕೊಳ್ಳುವ ಜನ ಇದನ್ನು ನೋಡಿ ಅವಕ್ಕಾಗುತ್ತಾರೆಂದು ಭಾವಿಸಿದ್ದೆ. ಆದರೆ ಆದದ್ದು ತದ್ವಿರುದ್ಧ. ಅವರೆಲ್ಲ ನನ್ನನ್ನು ನೋಡಿ ಅಪಹಾಸ್ಯ ಮಾಡಿ ಚಪ್ಪಾಳೆ ತಟ್ಟಿ ನಗತೊಡಗಿದರು.

ಅವ್ನ ಚೊಣ್ಣ ಹೊಲ್ಸ ಆಗತದಂತಲೇ, ಭಾರಿ ಚೊಣ್ಣ! ಎಂದು ಹೇಳುತ್ತಿದ್ದರು. ಆಗ ನನ್ನ " ದೊಗಲಂ ಬೊಗಲಂ ಕೊಳಕು ಚೊಣ್ಣ" ತಟ್ಟು ಎಲ್ಲದರ ಮೇಲೂ ಸಿಟ್ಟು ಬಂತು. ಏನೂ ಮಾಡಲಾಗದೆ ಕಣ್ಣಲ್ಲಿ ನೀರು ತರಿಸಿತಷ್ಟೆ.

ಹಾಗೆ ಬರೆದ ಹೆಸರನ್ನು ಒಮ್ಮೆ ತಿದ್ದುವ ಸಾಹಸವೂ ಮಾಡಿದ್ದೆ. ಆದರೆ ಅಂದಿನ ಅವತಾರವೇ ಬೇರೆಯಾಗಿತ್ತು. ನಮ್ಮೂರ ಪಕ್ಕದಲ್ಲಿಯೇ ಬಸರಕೊಡ ಜಾತ್ರೆ ಹೆಸರುವಾಸಿ. ನಮ್ಮ ಮನೆಯವರು ಅಲ್ಲಿಗೆ ಹೋಗುತ್ತಿದ್ದರು. ಅಂದು ನಾನು ಹೋಗಬೇಕಾಗಿತ್ತು. ಅದಕ್ಕಾಗಿ ಮಂತ್ರಿವರ್ಯರಿಗೆ ಹೇಳಿದ್ದೆ- " ನಾಳೆ ನಾನು ಜಾತ್ರೆಗೆ ಹೋಗ್ತೀನಿ, ಅದ್ಕ ಇವತ್ತೊಂದ ದಿನ ಸಾಲಿ ಬಿಡಣ ಕಸಾ ಹೊಡಿತೀನಿ" ಎಂದೆ.

ಮುಂಚಿತವಾಗಿ ಕಸಗುಡಿಸುವ ವ್ಯವಸ್ಥೆ ಇಲ್ಲದೆ ಹೋದರೂ ಅಂದು ಗುರುಗಳ ಅನುಮತಿ ಪಡೆದು ಮಂತ್ರಿವರ್ಯ ಅವಕಾಶ ಕೊಟ್ಟಿದ್ದ. ಶಾಲೆ ಬಿಟ್ಟಿದ್ದರಿಂದ ತರಗತಿಯಲ್ಲಿ ಯಾರೂ ಇರಲಿಲ್ಲ. ನಾನೊಬ್ಬನೆ ಇದ್ದೆ. ಆಗ ಕರಿಹಲಗೆಯ ಮೇಲೆ ಹೆಸರು ಕಂಡದ್ದು. ಎದೆ ಹೊಡೆದುಕೊಳ್ಳುತ್ತಿದ್ದರೂ, ಗುರುಗಳ ಕುರ್ಚಿಯನ್ನು ಸರಿಸಿ ಅದರ ಮೇಲೆ ನಿಂತು 'ಮಾಲಕತ್ತಿ' ಎಂದು ಬರೆದುದನ್ನು ಅಲ್ಲಿಯ "ಕ" ಕಾರ ತೆಗೆದು "ಗ" ಕಾರ ಬರೆಯಲು ಹವಣಿಸುತ್ತಿದ್ದೆ. ಎಲ್ಲಿದ್ದರೋ, ಗುರೂತ್ತಮರು ತರಗತಿಯ ಒಳಗೆ ಬಂದರು. ನೋಡಿದವರೆ ಗೂಟದ ಮೇಲಿರುವ ಕಟ್ಟಿಗೆಯನ್ನು ಹಿಡಿದರು. ಅವರನ್ನು ನೋಡಿದಾಕ್ಷಣವೇ ನನ್ನ ಜಂಘಾಬಲವೇ ಅಡಗದಂತಾಗಿ ನಡುಕ ಪ್ರಾರಂಭವಾಯಿತು. ಕೆಳಗಿಳಿದು "ಕತ್ತಿ" ಎಂದು ಬರೆದಿದ್ದಾರೆ ಎಂದು ವಿವರಣೆಯನ್ನು ಕೊಡುವುದರಲ್ಲಿಯೇ ಥಳಿಸುವುದಕ್ಕೆ ಪ್ರಾರಂಭಿಸಿದರು.

"ಕತ್ತಿ ಅಂತ ಬರದ್ರ ಏನಾಯ್ತು? ಗತ್ತಿ ಅಂತ ಮಾಡಾಕ ಹೋಗೀದ್ಯಾ? ಮಗಾ ಬರ್‍ಯಾಕ ಬಂತು ಅಂತ ತಿದ್ದಾಕ ಹೋಗ್ಯಾನ...ಕತ್ತಿ...ಕತ್ತಿನೇ... ಕತ್ತೆಲ್ಲರ ಕುದುರ್‍ಯಾಕ್ಕದೇನ? ...ಕತ್ತಿಗೆಲ್ಲ ಯಾಕ ಬೇಕು ಹತ್ತಿಕಾಳ ನೀರ?..." ಎಂದು ಮನ ತುಂಬುವವರೆಗೆ ಹೊಡೆದರು. ಅನಂತರ ಅಳುತ್ತ ನನ್ನ ಅಂಗಿ ಕಳೆದು ಅವರ ಕುರ್ಚಿಯನ್ನು ಒರಸಿದ್ದು ಅಚ್ಚಳಿಯದ ನೆನಪು.

ಎಚ್ಚರ! ನೀವು ಬರೆದ ಪತ್ರ ಕೋಮುವಾದ ಹರಡದಿರಲಿ

ಇನ್ನು ಮುಂದೆ ಅಂಚೆ ಕಚೇರಿಗೆ ಹೋದಾಗ ಎಚ್ಚರವಾಗಿರಿ. ಅದರಲ್ಲಿಯೂ ಮೂರು ರೂ. ಕೊಟ್ಟು ಅಂಚೆ ಚೀಟಿ ಕೊಳ್ಳುವಾಗ ಮೈಯೆಲ್ಲಾ ಕಣ್ಣಾಗಿರಿ. ಏಕೆಂದರೆ ನೀವು ಆಕಸ್ಮಾತ್ ಎಚ್ಚರ ತಪ್ಪಿದರೆ ಕೋಮುವಾದದ ವಿಷವನ್ನು ದೇಶದ ಎಲ್ಲೆಡೆ ಹರಡುತ್ತಿರುತ್ತೀರಿ.

ಕೋಮುವಾದಿ ಬಿಜೆಪಿ ನೇತೃತ್ವದ ಸರ್ಕಾರ ಕೋಮುವಾದದ ಬೆಂಕಿಯನ್ನು ಎಲ್ಲೆಂದರಲ್ಲಿ ಹಚ್ಚುವ ಒಂದಿಷ್ಟು ಅವಕಾಶವನ್ನೂ ಬಿಟ್ಟಿಲ್ಲ. ಮನೆ ಮನಗಳನ್ನು ಸುಟ್ಟ ಈ ಸರ್ಕಾರ ಈಗ ನೇರವಾಗಿ ಅಂಚೆಯ ಮೂಲಕ ಮನೆಯೊಳಗೆ ನುಗ್ಗುವ ಕೆಲಸಕ್ಕೆ ಕೈಹಾಕಿದೆ.

ಈ ವಾಜಪೇಯಿ ಸರ್ಕಾರ ಆರ್‌ಎಸ್‌ಎಸ್‌ನ ಸಂಸ್ಥಾಪಕ ಹೆಡ್ಗೇವಾರ್ ಅವರ ಅಂಚೆಚೀಟಿಯನ್ನು ಬಿಡುಗಡೆ ಮಾಡಿದೆ. ಒಂದಲ್ಲಾ ಎರಡಲ್ಲ 31 ಲಕ್ಷ ಅಂಚೆಚೀಟಿಗಳು ಮುದ್ರಣಗೊಂಡಿವೆ. 31 ಲಕ್ಷ ಮನೆಗಳ ಒಳಗೆ ಕೋಮುವಾದಿಯನ್ನು ತೂರಿಸುವ ಹಿಂಬಾಗಿಲ ಪ್ರಯತ್ನಕ್ಕೆ ಬಿಜೆಪಿ ಮುಂದಾಗಿದೆ.

ಹತ್ತು ವರ್ಷದ ಹಿಂದೆ ವಿಶ್ವಹಿಂದು ಪರಿಷತ್ ಈ ಅಂಚೆಚೀಟಿ ತರುವಂತೆ ಅಗ್ರಹಿಸಿದ್ದಾಗ ಆಗಿನ ಕಾಂಗ್ರೆಸ್ ಸರ್ಕಾರ ಸಾರಾಸಗಟಾಗಿ ಈ ಮನವಿಯನ್ನು ತಿರಸ್ಕರಿಸಿತ್ತು.

ಆದರೆ ಈಗ ಬಿಜೆಪಿಯೇ ಆಳುವಾಗ ಕೋಮುವಾದದ ಹಾವುಗಳೆಲ್ಲಾ ಹುತ್ತಬಿಟ್ಟು ಹೊರ ಬರತೊಡಗಿವೆ. ಈ ಅಂಚೆಚೀಟಿ ಬಿಡುಗಡೆಗೊಂಡದ್ದು ದೆಹಲಿಯ ವಿಜ್ಞಾನ ಭವನದಲ್ಲಿ. ವಿಜ್ಞಾನಕ್ಕೆ ಮಾಡಿದ ಅಪಮಾನ ಇದು.

ಬಿಡುಗಡೆ ಮಾಡಿದ ವಾಜಪೇಯಿ ಅವರು ಹೆಡ್ಗೇವಾರ ಮಹಾನ್ ದೇಶಪ್ರೇಮಿ ಎಂದು ಬಣ್ಣಿಸಿ ಈತನ ಕಣ್ಣೋಟದಿಂದಲೇ ವಿಶ್ವದ ಮಹಾನ್ ಶಿಸ್ತಿನ ಆರ್‌ಎಸ್‌ಎಸ್ ಹುಟ್ಟಿತು ಎಂದು ಪ್ರಶಂಸಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಈ ಅಂಚೆಚೀಟಿ ತರುವುದನ್ನು ನಿರಾಕರಿಸಿದ್ದನ್ನು ತರಾಟೆಗೆ ತೆಗೆದುಕೊಂಡಿರುವ ವಾಜಪೇಯಿ 'ಇದು ಸಹನೆ ಇಲ್ಲದ ರಾಜಕಾರಣ' ಎಂದಿದ್ದಾರೆ. ಈ ಕಾರ್ಯಕ್ರಮ ನಡೆದದ್ದೇ ಆರ್‌ಎಸ್‌ಎಸ್ ಸರಸಂಘ ಸಂಚಾಲಕ ರಾಜೇಂದ್ರ ಸಿಂಗ್ ಉಪಸ್ಥಿತಿಯಲ್ಲಿ.

ಯಾವುದೇ ಅಂಚೆ ಚೀಟಿ ಅಬ್ಬಬ್ಬಾ ಎಂದರೆ 4 ರಿಂದ 10 ಲಕ್ಷದವರೆಗೆ ಮುದ್ರಣಗೊಳ್ಳುತ್ತದೆ. ಆದರೆ ಬಿಜೆಪಿ ವಿಷ ಹಂಚಲು ಹೊರಟಿರುವ ರೀತಿ ನೋಡಿ. ಒಂದೇ ಬಾರಿಗೆ 31 ಲಕ್ಷ ಹೆಡ್ಗೇವಾರ್ ಅಂಚೆ ಚೀಟಿಗಳು ಹೊರ ಬಂದಿವೆ. ದೂರಸಂಪರ್ಕ ಸಚಿವ ಪುರಕಾಯಸ್ಥ 'ಭಾರೀ ಜನರ ಒತ್ತಾಯ'ದ ಮೇರೆಗೆ ಇಷ್ಟು ಲಕ್ಷ ಅಂಚೆ ಚೀಟಿ ಮುದ್ರಿಸಲಾಗಿದೆ ಎಂದಿದ್ದಾರೆ. ಆಳ್ವಿಕೆ ನಡೆಸುತ್ತಿದ್ದ ಸರ್ಕಾರ ಹೊಂದಿರುವ ಕೋಮುವಾದಿ ಮುನ್ನೋಟ ಇದು.

ನೀವು ದೂರದಲ್ಲಿ ಓದುತ್ತಿರುವ ಮಗನಿಗೆ ಪ್ರೀತಿಯಿಂದ ಪತ್ರ ಬರೆಯುವಾಗ, ಅಮ್ಮನ ನೆನಪಿನಲ್ಲಿ ಗಂಡನ ಮನೆಯಲ್ಲಿರುವ ನೀವು ಕಾಳಜಿ ಇಟ್ಟು ಬರೆದ ಪತ್ರದಲ್ಲಿ, ಸಾಮರಸ್ಯದ ಸಂದೇಶ ಹರಡುವ ಕಾರ್ಯಕ್ರಮಗಳ ಆಹ್ವಾನಗಳು ರವಾನೆಯಾಗುವ, ಮಗು ಹುಟ್ಟಿದ ಸಂತಸ ನೆಂಟರೆಲ್ಲರನ್ನೂ ಮುಟ್ಟುವಾಗ, ನಿಮ್ಮ ಪ್ರೀತಿಯ ಹುಡುಗಿಯೊಂದಿಗಿನ ಮದುವೆಯ ಆಹ್ವಾನಗಳನ್ನು ಕಳಿಸುವಾಗ ಎಚ್ಚರವಾಗಿರಿ - ಅಲ್ಲಿ ಕೋಮುವಾದ ಹರಡದಿರಲಿ.

ನಿಮ್ಮ ಅಂಚೆಯ ಮೇಲೆ ಕೋಮು ದಳ್ಳುರಿಯ ಸಿದ್ಧಾಂತ ಹರಡಿದ ಹೆಡ್ಗೇವಾರ್ ಅಂಚೆಚೀಟಿ ಇರದಿರಲಿ.

ಅಷ್ಟೇ ಅಲ್ಲ, ಆಕಸ್ಮಾತ್ ನಿಮ್ಮ ಮನೆಗೆ ಬಂದ ಪತ್ರ ಈ ಕೋಮುವಾದಿಯ ಅಂಚೆ ಚೀಟಿ ಹೊಂದಿದ್ದರೆ ಅವರಿಗೆ ಒಂದು ಕಾರ್ಡ್ ಬರೆಯಿರಿ - ಕೋಮುವಾದಿಯನ್ನು ಮನೆಯೊಳಗೆ ನುಗ್ಗಿಸಬೇಡಿ- ಎಂದು.

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ